# ಕರ್ನಾಟಕ ವಿಕಾಸ

# Karnataka Vikas

ಮಾರ್ಚ್ March 2017



ಪರಿಣಾಮಕಾರಿ
ಅಭಿವೃದ್ಧಿಗಾಗಿ
ಯೋಜನೆಗಳ
ಮಾಹಿತಿ ಮತ್ತು ಅರಿವು
ಜನಪ್ರತಿನಿಧಿಗಳಿಗೆ ಅತ್ಯಾವಶ್ಯಕ.

– ಶ್ರೀ ಎಚ್.ಕೆ.ಪಾಟೀಲ
ಮಾನ್ಯ ಗ್ರಾಅ ಮತ್ತು
ಪಂ.ರಾಜ್ ಸಚಿವರು



ಜನತಾಂತ್ರಿಕ ಸಂಸ್ಥೆಗಳ
ಸದಸ್ಯರೊಂದಿಗೆ ಕೆಲಸ
ನಿರ್ವಹಿಸುವಾಗ
ಅಧಿಕಾರಿಗಳಿಗೆ
ಸಮನ್ವಯದ
ಮನೋಭಾವ ಅತ್ಯಗತ್ಯ.

– ಡಾ|| ಎನ್.ನಾಗಾಂಬಿಕಾ ದೇವಿ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು





ಮಾನ್ಯ ಗ್ರಾಅ ಮತ್ತು ಪಂ.ರಾಜ್ ಸಚಿವರಾದ ಶ್ರೀ ಎಚ್.ಕೆ.ಪಾಟೀಲ ಹಾಗೂ ಡಾ॥ ಎನ್.ನಾಗಾಂಬಿಕಾ ದೇವಿ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಮಾನ್ಯ ವಿಧಾನ ಪರಿಷತ್ ಸದಸ್ಯರು ಹಾಗೂ ಅಧ್ಯಕ್ಷರು ಹಾಗೂ ಇಲಾಖಾ ಮುಖ್ಯಸ್ಥರುಗಳೊಂದಿಗೆ ದಿನಾಂಕ:03.02.2017 ಮತ್ತು 04.02.2017ರಂದು ನಡೆದ ಸಭೆಯ ನೋಟ.





ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರಾದ ಮಾನ್ಯ ಎಚ್.ಕೆ.ಪಾಟೀಲ ಹಾಗೂ ಡಾ॥ ನಾಗಾಂಬಿಕಾ ದೇವಿ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಸನ ಜಿಲ್ಲೆಯ ಎಲ್ಲಾ ಮುಖ್ಯ ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳೊಂದಿಗೆ ಕುಡಿಯುವ ನೀರು ಸಮಸ್ಯೆ ಕುರಿತು ದಿನಾಂಕ:15.02.2017ರಂದು ಪತ್ರಿಕಾ ಗೋಷ್ಠಿ.

# ಕರ್ನಾಟಕ ವಿಕಾಸ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾಸ ಪತ್ರಿಕೆ


ಮಾರ್ಚ್ 2017

March 2017

ಸಂಪುಟ : 58

Volume : 58

ಸಂಚಿಕೆ : 04

Issue : 04


## ಈ ಸಂಚಿಕೆಯೊಳಗೆ


| | | |
|---|---|---|
| ಸಚಿವಾಲಯದಿಂದ ಸಂದೇಶ | – ಡಾ॥ ಎನ್.ನಾಗಾಂಬಿಕಾ ದೇವಿ | 5 |
| ಕಾರ್ಯಾಗಾರ | – ಗಂಗಾಧರ ಸ್ವಾಮಿ ಎಸ್. | 7 |
| ವರದಿ | – ಬಸವರಾಜು ಜಿ ಮೂಲಿಮನಿ | 12 |
| | – ರಘುನಾಥ್ | 14 |
| ಲೇಖನ | – ಶರತಕುಮಾರ ಅಭಿಮಾನ | 16 |
| | – ಕೃಷ್ಣಪ್ಪ | 18 |
| | – ನಿಂಗೇಗೌಡ | 22 |
| ಯಶೋಗಾಥೆ | – ಸಿದ್ಧರಾಮ ಕೆರೂರು | 24 |
| | – ಎಸ್ ನವೀನ್ ಕುಮಾರ್ | 28 |
| | – ಪ್ರಕಾಶ್ ಹೆಚ್. | 31 |
| | – ಡಾ॥ ಉಷಾಶ್ರೀಧರ್ | 33 |
| ಕವಿಯ(ಕ್ಷ) ಪ್ರಶ್ನೆ | – ಶ್ರೀಮತಿ ಕಮಲಾ ಸಿ.ಎನ್ | 38 |
| ಕಾವ್ಯ ವಿಕಾಸ | – ಶ್ರೀಕಾಂತ. ಹಾ. ಬಾಲೆಹೊಸೂರು | 39 |
| ಸುತ್ತೋಲೆ | | 40 |






ಪ್ರಕಾಶಕರು

**ಎಂ.ಕೆ.ಕೆಂಪೇಗೌಡ**

ನಿರ್ದೇಶಕರು(ಪಂ.ರಾಜ್) ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ

ಪ್ರಧಾನ ಸಂಪಾದಕರು

**ಡಾ॥ ಬೂವನಹಳ್ಳಿ ನಾಗರಾಜ್**

ನಿರ್ದೇಶಕರು, ಸುವರ್ಣ ಗ್ರಾಮೋದಯ ಯೋಜನೆ ಹಾಗೂ ಸರ್ಕಾರದ ಪದನಿಮಿತ್ತ ಉಪ ಕಾರ್ಯದರ್ಶಿ

**ಮುಬಾರಕ್ ಅಹ್ಮದ್**

ಸಂಪಾದಕರು ಹಾಗೂ ಸಾರ್ವಜನಿಕ ಸಂಪರ್ಕಾಧಿಕಾರಿ

ಸಹಾಯಕ ಸಂಪಾದಕರು

**ಆಗ್ನೇಸ್ ಮೇರಿ**

### ವಾರ್ಷಿಕ ಚಂದಾ

ವ್ಯಕ್ತಿಗಳಿಗೆ ರೂ.100/–

ಸಂಸ್ಥೆಗಳಿಗೆ ರೂ. 120/–

ಬಿಡಿ ಪ್ರತಿ ರೂ. 10/–

ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಿಮ್ಮ ಸ್ಪಷ್ಟ ಅಂಚೆ ವಿಳಾಸ ಪಿನ್‌ಕೋಡ್‌ನೊಂದಿಗೆ ನಮ್ಮ ಕಚೇರಿ ವಿಳಾಸಕ್ಕೆ ತಲುಪಿಸಬಹುದು.

### ಕಚೇರಿ ವಿಳಾಸ

ಸಂಪಾದಕರು ಕರ್ನಾಟಕ ವಿಕಾಸ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ನಂ.309, 3ನೇ ಮಹಡಿ, ಗೇಟ್ ನಂ.1,

ಬಹುಮಹಡಿಗಳ ಕಟ್ಟಡ, ಡಾ.ಅಂಬೇಡ್ಕರ್ ವಿಧಿ,

ಬೆಂಗಳೂರು – 560 001.

ದೂರವಾಣಿ: 080–22353857

www.rdpr.kar.nic.in

Email: kvrdpr@gmail.com


### ವಿಶೇಷ ಸೂಚನೆ

ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು.

ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ.

# ಪತ್ರಿಕೆ ಕುರಿತು ನಿಮ್ಮ ನುಡಿ




ಮಾನ್ಯರೆ,

ಫೆಬ್ರವರಿ 2017ರ ಕರ್ನಾಟಕ ವಿಕಾಸ ಪತ್ರಿಕೆಯಲ್ಲಿನ ರಾಜ್ಯದ ಕೆಲ ಪಂಚಾಯತಿಗಳ ಯಶೋಗಾಥೆಗಳನ್ನು ಪ್ರಕಟಿಸುತ್ತಿರುವುದು ಅತ್ಯಂತ ಉಪಯುಕ್ತವಾದುದು. ಬೆಳಗಾವಿ ಜಿಲ್ಲೆಯ ಅಂಚೆ ತಾಲ್ಲೂಕಿನ ಶಿರಗುಪ್ಪಿ ಗ್ರಾಮವು ಹಮ್ಮಿಕೊಂಡಿದ್ದ ಹಲವಾರು ಕಾರ್ಯಗಳನ್ನು ಸಾಧಿಸಿ ತೋರಿಸಿ ವಿವಿಧ ಪ್ರಶಸ್ತಿಗಳನ್ನು ಪಡೆದದ್ದು ಪ್ರಶಂಸೆಗೆ ಭಾಜನವಾಗಿದ್ದು ಹೆಮ್ಮೆಯ ವಿಷಯ ಹಾಗೂ ಅಭಿನಂದನಾರ್ಹವಾದುದ್ದು. ಇನ್ನುಳಿದ ಲೇಖಕರ ವಿಚಾರಗಳು ಸ್ವಾಗತಾರ್ಹವಾದವುಗಳು. ಪತ್ರಿಕೆಯು ಗ್ರಾಮೀಣ ಪ್ರಗತಿಗಾಗಿ ಹಲವಾರು ಸಲಹೆ, ಸೂಚನೆ ನೀಡುತ್ತಾ ಗಾಂಧೀಜಿಯವರ ಕನಸನ್ನು ಸಾಕಾರಗೊಳಿಸಲು ಸಹಕಾರಿಯಾಗಿದೆ.

**ಶ್ರೀ ಕೊತ್ತಲ ಮಹದೇವಪ್ಪ,**
ಶಿಕ್ಷಕ, ಸಾಹಿತಿ, ವಿನಾಯಕನಗರ, ಲಕ್ಷ್ಮೇಶ್ವರ, ಗದಗ 582116.

ಫೆಬ್ರವರಿ 2017ರ ಕರ್ನಾಟಕ ವಿಕಾಸ ಪತ್ರಿಕೆಯ ವರ್ಣರಂಜಿತ ಮುಖಪುಟ ಸಭೆ ಸಮಾರಂಭದ ವಿವಿಧ ಕಾರ್ಯಕ್ರಮ ಸುತ್ತೋಲೆ, ನಡವಳಿ, ಲೇಖನ, ವರದಿ ಮುಂತಾದ ಮಾಹಿತಿ ಓದುಗರಿಗೆ ಆಕರ್ಷಣೆಯಾಗಿ ಚೇತನ ನೀಡಿದೆ. ತೀವ್ರ ಬರ ನೀಗಿಸಲಿಕ್ಕೆ ರೈತರಿಗಾಗಿ "ಕೆರೆ ಸಂಜೀವಿನಿ" ಕಾರ್ಯಕ್ರಮ ಕೆರೆಗಳ ಅಭಿವೃದ್ಧಿ, ಜಲ ಸಂರಕ್ಷಣೆ, ಸಾರ್ವಜನಿಕ ಬಾವಿಗಳ ನಿರ್ಮಾಣ, ಗ್ರಾಮ ಸ್ವಚ್ಛತೆ, ಕುಡಿಯುವ ನೀರು ಪೂರೈಕೆ, ಅಂತರ್ಜಲ ವೃದ್ಧಿ, ರಸ್ತೆ ನಿರ್ಮಾಣ, ವಸತಿ ನೈರ್ಮಲ್ಯ ಸೌಲಭ್ಯ ಮುಂತಾದ ಕಾಮಗಾರಿ ಉಪಯೋಗವಾಗಿ ಜೀವ ಬದುಕಿಗೆ ಚೈತನ್ಯ ಪ್ರೇರಣೆ ನೀಡಿದೆ, ಪಂಚಾಯತ್ ರಾಜ್ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರ ನೀಡಿದ ಕರ್ನಾಟಕ ಸರ್ಕಾರದ ಪಾತ್ರ ಮಹತ್ವದ್ದಾಗಿರುವುದು ಸ್ವಾಗತಾರ್ಹ. ಸಾಮಾಜಿಕ ಜಾಲತಾಣಗಳ ಉಪಯುಕ್ತ ಮತ್ತು ನಿರುಪಯುಕ್ತ ಬಗ್ಗೆ ಯಕ್ಷ ಪ್ರಶ್ನೆಗಳು ಜನತೆಗೆ ಎಚ್ಚರಿಕೆ ನೀಡಿದೆ.

**ಶ್ರೀ ಮರಿದೇವರ ಸಿದ್ದಪ್ಪ,**
ನಿವೃತ್ತ ಶಿಕ್ಷಕ, ಚೌಡಾಪುರ ಅಂಚೆ, ಕೂಡ್ಲಿಗೆ ತಾಲೂಕು, ಬಳ್ಳಾರಿ 583135.

ಕರ್ನಾಟಕ ವಿಕಾಸ ಮಾಸ ಪತ್ರಿಕೆಯ ಫೆಬ್ರವರಿ 2017ರ ಸಂಚಿಕೆಯು ಬಹಳ ಆಕರ್ಷಕ ಮುಖಪುಟದೊಂದಿಗೆ ಮೂಡಿಬಂದಿದ್ದು ಬಹಳ ಸಂತೋಷವಾಗಿದೆ. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಸಂದೇಶದಲ್ಲಿ ರಾಜ್ಯದಲ್ಲಿ ಬರ ಪರಿಶೀಲನೆಗಾಗಿ ಪ್ರವಾಸ ಕೈಗೊಂಡು ಯಶಸ್ವಿ ಕಾರ್ಯಕ್ರಮಗಳನ್ನು ಕೈಗೊಂಡಿರುವುದು ಒಳ್ಳೆಯ ಕಾರ್ಯವಾಗಿದೆ. ಶ್ರೀ ಗೋಪಾಲ ಪಿ.ಮಾಳಿರವರ ಶಿರಗುಪ್ಪಿ ಗ್ರಾಮದ ಅಭಿವೃದ್ಧಿ ಕಾರ್ಯಕ್ರಮಗಳು ಹಾಗೂ ವಿಜಯಶೀಲಾ ಎಸ್ ರವರ ಚಾಂದೋರಿ ಗ್ರಾಮ ಪಂಚಾಯತಿ ಬಯಲು ಶೌಚ ಮುಕ್ತವಾಗಲು ತೆಗೆದುಕೊಂಡ ಕ್ರಮ ಎಂಬ ಯಶೋಗಾಥೆಗಳು ಇನ್ನಿತರ ಗ್ರಾಮ ಪಂಚಾಯತಿಗಳಿಗೆ ಉತ್ತೇಜನ ನೀಡುವಲ್ಲಿ ಸಹಕಾರಿಯಾಗಿದೆ. ಸಂಚಿಕೆಯಲ್ಲಿನ ಸುತ್ತೋಲೆ, ನಡವಳಿಗಳು ಗ್ರಾಮಾಂತರ ಪ್ರದೇಶಗಳಿಗೆ ಸರ್ಕಾರದ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ಮುಟ್ಟಿಸುವಲ್ಲಿ ಸಹಕಾರಿಯಾಗಿದೆ.

**ಶ್ರೀ ದೇವರಾಜು**
ಪ್ರಥಮ ದರ್ಜೆ ಸಹಾಯಕರು, ತಾಲೂಕು ಪಂಚಾಯತಿ, ಶಿರಾ, ತುಮಕೂರು ಜಿಲ್ಲೆ.

# ಸಚಿವಾಲಯದಿಂದ ಸಂದೇಶ



**ಡಾ॥ ಎನ್.ನಾಗಾಂಬಿಕಾ ದೇವಿ**
ಭಾ.ಆ.ಸೇ.
ಸರ್ಕಾರದ ಪ್ರಧಾನ ಕಾರ್ಯದರ್ಶಿ

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರ ಸಚಿವಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಬಹುಮಹಡಿ ಕಟ್ಟಡ, ಬೆಂಗಳೂರು.

ಪ್ರಿಯ ಬಂಧುಗಳೇ,

## ಕುಡಿಯುವ ನೀರು ಪೂರೈಕೆಗೆ ಕ್ರಮ

ರಾಜ್ಯದಲ್ಲಿ ಮುಂಬರುವ ಬೇಸಿಗೆ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯು ತೀವ್ರವಾಗುವ ಲಕ್ಷಣಗಳು ಕಂಡುಬರುತ್ತವೆ. ಗ್ರಾಮೀಣ ಭಾಗದ ಯಾವುದೇ ಜನರಿಗೆ ಕುಡಿಯುವ ನೀರಿನ ಪೂರೈಕೆಗೆ ಸಮಸ್ಯೆಯಾಗದಿರುವಂತೆ ನಿರ್ವಹಣೆ ಮಾಡಲು ಲಭ್ಯವಿರುವ ಅನುದಾನವನ್ನು ಬಳಸಿಕೊಂಡು ಸಕಾಲದಲ್ಲಿ ನೀರು ಪೂರೈಕೆಗೆ ಪಂಚಾಯತ್ ರಾಜ್ ಸಂಸ್ಥೆಯ ಚುನಾಯಿತ ಪದಾಧಿಕಾರಿಗಳು ಮತ್ತು ಅಧಿಕಾರಿ ಸಿಬ್ಬಂದಿಗಳು ಕಾರ್ಯೋನ್ಮುಖರಾಗುವುದು. ನೀರು ಪೂರೈಸುವ ಸಂದರ್ಭದಲ್ಲಿ ಟ್ಯಾಂಕರ್‌ಗಳಲ್ಲಿ ಪೂರೈಸುವ ನೀರುವ ಕೂಡ ಶುದ್ಧವಾಗಿರಬೇಕೆಂಬುದನ್ನು ಗಮನದಲ್ಲಿಟ್ಟಿಕೊಳ್ಳುವುದು.

ಹಾಲಿ ನೀರು ಪೂರೈಸುತ್ತಿರುವ ಜಲ ಮೂಲಗಳ ಪೂರೈಕೆಯ ಸಾಮರ್ಥ್ಯವನ್ನು ಗಮನದಲ್ಲಿಟ್ಟಿಕೊಂಡು ಬೇಸಿಗೆಯ ದಿನಗಳಲ್ಲಿ ಕುಡಿಯುವ ನೀರು ಪೂರೈಕೆಗೆ ತೆಗೆದುಕೊಳ್ಳಬೇಕಾದ ಪೂರ್ವಬಾವಿ ಕ್ರಮಗಳನ್ನು ಸಂಭವನೀಯವಾಗಿ ನಿರೀಕ್ಷಿಸಿ ನೀರು ಪೂರೈಕೆಯ ವೇಳಾಪಟ್ಟಿಯನ್ನು ರೂಪಿಸಿಕೊಂಡು ಅದರಂತೆ ಕ್ರಮವಹಿಸಿ ಗ್ರಾಮೀಣ ಜನರಿಗೆ ನೀರು ಪೂರೈಕೆಯಲ್ಲಿ ವ್ಯತ್ಯಯವಾಗದಂತೆ ಕಾರ್ಯನಿರ್ವಹಿಸಲು ಸೂಚಿಸಿದೆ.

## ಅನುದಾನ ಸದ್ಬಳಕೆಗೆ ಹಾಗೂ ಗುಣಾತ್ಮಕ ಕಾಮಗಾರಿಗಳಿಗೆ ಆದ್ಯತೆ

2016–17ನೇ ಸಾಲಿನ ಆರ್ಥಿಕ ವರ್ಷದ ಅಂತ್ಯದಲ್ಲಿ ವಿವಿಧ ಅಭಿವೃದ್ಧಿ ಯೋಜನೆಗಳ ಅನುದಾನವನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ. ಪ್ರತಿಯೊಂದು ಯೋಜನೆಗಳ ಕಾರ್ಯಕ್ರಮಗಳನ್ನು ಕ್ರಿಯಾ ಯೋಜನೆಯಲ್ಲಿ ಅನುಮೋದಿಸಿರುವಂತೆ ಕಾರ್ಯಾನುಷ್ಠಾನ ಮಾಡುವುದು. ಇದಕ್ಕಾಗಿ ಲಭ್ಯವಿರುವ ಅನುದಾನವನ್ನು ಸದ್ಬಳಕೆ ಮಾಡಿಕೊಂಡು ಕಾಮಗಾರಿಗಳನ್ನು ಗುಣಾತ್ಮಕತೆಯನ್ನು ಕಾಪಾಡಿಕೊಂಡು ಜಾರಿಗೆ ತರುವುದು.

ಯಾವುದೇ ಸಂದರ್ಭದಲ್ಲೂ ಕಳಪೆ ಕಾಮಗಾರಿಗಳ ಅನುಷ್ಠಾನಕ್ಕೆ ಅಸ್ಪದ ನೀಡದೆ ಗುಣಮಟ್ಟದ ಕಾಮಗಾರಿಗಳನ್ನು ನಿರ್ಮಾಣ ಮಾಡುವುದು. ಕಾಮಗಾರಿಗಳನ್ನು ನಿರ್ವಹಿಸದೇ ಬಿಲ್ ಮಾಡುವುದ್ದಾಗಲಿ ಮತ್ತು ಯೋಜನೆಗಳ ಅನುಷ್ಠಾನಕ್ಕಾಗಿ ಸಂಗ್ರಹಿಸಬೇಕಾದ ಸಾಮಾಗ್ರಿಗಳ ಖರೀದಿಯಲ್ಲಿ ಕರ್ನಾಟಕ ಪಾರದರ್ಶಕ ನಿಯಮಗಳನ್ನು ಉಲ್ಲಂಘಿಸುವಂತಹ ಅಧಿಕಾರಿ ನೌಕರರ ಮೇಲೆ ಸೂಕ್ತ ಕ್ರಮ ಜರುಗಿಸಲಾಗುವುದು.

## ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶ

ಯಾವುದೇ ಕಾಮಗಾರಿಗಳ ಹಣ ಪಾವತಿಯನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದ ಮೂಲಕವೇ ಪಾವತಿ ಮಾಡಲು ಕ್ರಮ ಕೈಗೊಳ್ಳುವುದು. ಕಾಮಗಾರಿಗಳ ಫೋಟೋಗಳನ್ನು ಅಫ್‌ಲೋಡ್ ಮಾಡುವಾಗ ಆಯಾ ಯೋಜನೆಗೆ ಸಂಬಂಧಿಸಿದ ಆಯಾ ಫೋಟೋಗಳನ್ನೇ ಬಳಸತಕ್ಕದ್ದು. ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶವನ್ನು ಹೊರತುಪಡಿಸಿ ಮಾಡುವ ಹಣ ಪಾವತಿಗೆ ಯಾವುದೇ ಮಾನ್ಯತೆಯಿರುವುದಿಲ್ಲ ಎಂಬ ಅಂಶವನ್ನು ಹಣ ನಗಧೀಕರಿಸಿ ಬಟಾವಡೆ ಮಾಡುವ ಪ್ರಾಧಿಕಾರವು ಸೇರಿದಂತೆ ಎಲ್ಲರು ಗಮನದಲ್ಲಿಟ್ಟುಕೊಂಡು ಕಾರ್ಯನಿರ್ವಹಿಸುವುದು.

**(ಡಾ॥ ಎನ್. ನಾಗಾಂಬಿಕಾ ದೇವಿ)**

ಕಾರ್ಯಾಗಾರ

# ಮಹಾತ್ಮಗಾಂಧಿ ನರೇಗಾ ಯೋಜನೆಯ ವಸ್ತು ಪ್ರದರ್ಶನ

## ವಿಧಾನ ಪರಿಷತ್ ಸದಸ್ಯರಿಗೆ ಗ್ರಾಮೀಣಾಭಿವೃದ್ಧಿ ಕುರಿತ ಕಾರ್ಯಾಗಾರ

**ಗಂಗಾಧರ ಸ್ವಾಮಿ ಎಸ್.**
ಜಂಟಿ ನಿರ್ದೇಶಕರು(ತೋಟಗಾರಿಕೆ)

ವಿಧಾನಪರಿಷತ್ ಸದಸ್ಯರಿಗೆ ಗ್ರಾಮೀಣಾಭಿವೃದ್ಧಿ ಕುರಿತು ಮೈಸೂರು ಅಬ್ದುಲ್ ನಜೀರ್ ಸಾಬ್ ಗ್ರಾಮೀಣಾಭಿವೃದ್ಧಿ ಸಂಸ್ಥೆಯಲ್ಲಿ 03, 04 ಫೆಬ್ರವರಿ 2017 ರಂದು ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಕಾರ್ಯಾಗಾರಕ್ಕೆ ಪೂರಕವಾಗಿ ಸನ್ಮಾನ್ಯ ಮುಖ್ಯಮಂತ್ರಿಗಳ 21 ಅಂಶಗಳ ಕಾರ್ಯಕ್ರಮ ವಸ್ತು ಪ್ರದರ್ಶನವನ್ನು ಮಹಾತ್ಮಗಾಂಧಿ ನರೇಗಾ ಯೋಜನೆಯಿಂದ ಕೈಗೊಳ್ಳಲಾಗಿತ್ತು. ಸದರಿ ವಸ್ತು ಪ್ರದರ್ಶನ ವಿಧಾನ ಪರಿಷತ್ ಸದಸ್ಯರನ್ನು ಮನಸೆಳೆಯುವಲ್ಲಿ ಯಶಸ್ವಿಯಾಗಿದೆ.

ಮೈಸೂರು ಅಬ್ದುಲ್ ನಜೀರ್ ಸಾಬ್ ಗ್ರಾಮೀಣಾಭಿವೃದ್ಧಿ ಸಂಸ್ಥೆ ಇಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳ ಕುರಿತು ಮಾನ್ಯ ವಿಧಾನ ಪರಿಷತ್ ಸದಸ್ಯರಿಗೆ ಬೆಳಗಾವಿ ಅಧಿವೇಶನದಲ್ಲಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು



ಪಂಚಾಯತ್ ರಾಜ್ ಸಚಿವರು ನೀಡಿದ ಆಶ್ವಾಸನೆಯಂತೆ 03, 04 ಫೆಬ್ರವರಿ 2017 ರಂದು ಎರಡು ದಿನಗಳ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಕಾರ್ಯಾಗಾರದಲ್ಲಿ ಇಲಾಖೆಯ ಅಧೀನ ಶಾಖೆಗಳಿಂದ ಅಭಿವೃದ್ಧಿ ಕಾರ್ಯಕ್ರಮ ಕುರಿತು ವಸ್ತು ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

**ಮಹಾತ್ಮಗಾಂಧಿ ನರೇಗಾ ಯೋಜನೆಯಿಂದ ಮುಖ್ಯವಾಗಿ ಸನ್ಮಾನ್ಯ ಮುಖ್ಯಮಂತ್ರಿಗಳ 21 ಅಂಶಗಳ ಕಾರ್ಯಕ್ರಮದ ವಸ್ತುಪ್ರದರ್ಶನವನ್ನು ಕೈಗೊಳ್ಳಲಾಗಿತ್ತು.**

ಮಹಾತ್ಮಗಾಂಧಿ ನರೇಗಾ ಯೋಜನೆಯಿಂದ ಮುಖ್ಯವಾಗಿ ಸನ್ಮಾನ್ಯ ಮುಖ್ಯಮಂತ್ರಿಗಳ 21 ಅಂಶಗಳ ಕಾರ್ಯಕ್ರಮದ ವಸ್ತುಪ್ರದರ್ಶನವನ್ನು ಕೈಗೊಳ್ಳಲಾಗಿತ್ತು. ಅದರಲ್ಲಿ ರೈತರ ಭೂ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಕೃಷಿಹೊಂಡ, ಭೂ ಸಮತಟ್ಟು, ತೋಟಗಾರಿಕೆ, ರೇಷ್ಮೆ ಕಾಮಗಾರಿಗಳ ಪ್ರಾತ್ಯಕ್ಷಿಕೆ. ನಮ್ಮ ಹೊಲ ನಮ್ಮ ದಾರಿ, ನಮ್ಮೂರ ಕೆರೆ, ಸ್ಮಶಾನ ಅಭಿವೃದ್ಧಿ(ಮುಕ್ತಿವನ), ರಾಜೀವ್‌ಗಾಂಧಿ ಸೇವಾ ಕೇಂದ್ರ, ಅಂಗನವಾಡಿ, ಕಾಲುಸಂಕ, ಕುರಿ/ದನದ ಶೆಡ್, ರೈತರ ಕಣ

ಕಾಮಗಾರಿಗಳ ವಸ್ತು ಪ್ರದರ್ಶನವನ್ನು ಸಿದ್ಧಪಡಿಸಲಾಗಿತ್ತು. ಪ್ರತಿ ಕಾಮಗಾರಿಯ ಸಂಕ್ಷಿಪ್ತ ಮಾಹಿತಿ ಹಾಗೂ ಕಳೆದ ಮೂರು ವರ್ಷದಲ್ಲಿ ಸಾಧಿಸಿದ ಭೌತಿಕ ಮತ್ತು ಆರ್ಥಿಕ ಪ್ರಗತಿ ವಿವರಗಳನ್ನು ಪ್ರದರ್ಶನ ಮಾಡಲಾಗಿತ್ತು.

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಿಂದ ವಿಧಾನ ಪರಿಷತ್ ಸದಸ್ಯರಿಗೆ ವಸ್ತು ಪ್ರದರ್ಶನ ಮಾಹಿತಿ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಸನ್ಮಾನ್ಯ ಮುಖ್ಯಮಂತ್ರಿಗಳ 21 ಅಂಶಗಳ ಕಾರ್ಯಕ್ರಮದ ಉದ್ದೇಶ ಕುರಿತಂತೆ ಪ್ರತಿ ಘಟಕದ ಮುಂದೆ ವಿಧಾನ ಪರಿಷತ್ ಸದಸ್ಯರಿಗೆ ವಿವರಣೆ ನೀಡಿದರು. ಗ್ರಾಮಗಳಲ್ಲಿ ಮೂಲಭೂತ ಕಾಮಗಾರಿಗಳನ್ನು ಅವಶ್ಯಕತೆ ಮನಗಂಡು ರಾಜ್ಯ ಸರ್ಕಾರ ಅನುಷ್ಠಾನಕ್ಕೆ ಆದ್ಯತೆ ನೀಡಿದೆ. ಅದರಲ್ಲಿ ಮುಖ್ಯವಾಗಿ ರೈತರು ತಮ್ಮ ಸ್ವಂತ ಜಮೀನುಗಳಲ್ಲಿ ಕೈಗೊಳ್ಳಬಹುದಾದ ಭೂ ಅಭಿವೃದ್ಧಿ ಚಟುವಟಿಕೆಗಳು ಮಹಾತ್ಮಗಾಂಧಿ ನರೇಗಾ ಯೋಜನೆ ಹಾಗೂ ಇಲಾಖೆ ಒಗ್ಗೂಡಿಸುವಿಕೆ ಮೂಲಕ ಅನುಷ್ಠಾನಿಸಲಾಗುತ್ತಿದೆ. ಇದಕ್ಕೆ ರೈತರಿಂದ ವ್ಯಾಪಕ ಬೇಡಿಕೆ ಬರುತ್ತಿದೆ. ಬೇಡಿಕೆ ಅನುಗುಣವಾಗಿ ಕಾಮಗಾರಿ ಅನುಷ್ಠಾನಗೊಳಿಸಲಾಗುತ್ತಿದೆ. ರೇಷ್ಮೆ ಅಭಿವೃದ್ಧಿ ಚಟುವಟಿಕೆಯಡಿ ನಿಗಧಿಗಿಂತ ಹೆಚ್ಚಿನ ಕಾಮಗಾರಿಗಳನ್ನು ಈ ಸಾಲಿನಲ್ಲಿ ಈಗಾಗಲೇ ಅನುಷ್ಠಾನಿಸಿರುವ ಬಗ್ಗೆ ವಿವರಿಸಿದರು.

ಸ್ಮಶಾನ ಅಭಿವೃದ್ಧಿ ವಸ್ತು ಪ್ರದರ್ಶನದಲ್ಲಿ ಸಚಿವರು ವಿಧಾನ ಪರಿಷತ್ ಸದಸ್ಯರಿಗೆ ಗ್ರಾಮಗಳಲ್ಲಿ ಇಂದಿಗೂ ಸ್ಮಶಾನಗಳಿಗೆ ಕಾಲಿಡುವ ಸ್ಥಿತಿಯಲಿಲ್ಲ. ಸತ್ತವರನ್ನು ಹೂಳುವುದಕ್ಕೆ(ಅಂತ್ಯಕ್ರಿಯೆ) ಸ್ಮಶಾನಗಳು ಪೂರಕವಾಗಿಲ್ಲ. ಇದನ್ನು ಮನಗಂಡು ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಅನುಷ್ಠಾನಗೊಳಿಸಲೇಬೇಕೆಂಬ ಉದ್ದೇಶದಿಂದ ಇದನ್ನು ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಅನುಷ್ಠಾನಕ್ಕೆ ಆದ್ಯತೆ ನೀಡಿದ್ದೇವೆ. ಬೇರೆ ಯಾವುದೇ ಯೋಜನೆಗಳಲ್ಲಿ ಈ ಕಾಮಗಾರಿ ಅಭಿವೃದ್ದಿ ಅವಕಾಶ ನೀಡಿಲ್ಲ. ಈ ಯೋಜನೆಯಡಿ ಅನುಷ್ಠಾನಗೊಳಿಸುತ್ತಿರುವುದರಿಂದ ಗ್ರಾಮೀಣ ಜನರಿಗೆ ತುಂಬ ಅನುಕೂಲವಾಗಿದೆ. ಸ್ಮಶಾನ ಒತ್ತುವರಿಯನ್ನು ತಡೆಗಟ್ಟಲು ಈ ಅನುಷ್ಠಾನ ಸಹಕಾರಿಯಾಗಿದೆ ಎಂದು ತಿಳಿಸಿದರು.

ಬಹುಕಮಾನು ತಡೆಗೋಡೆ ನಿರ್ಮಾಣ ವಸ್ತು ಪ್ರದರ್ಶನ ಕುರಿತು ಸಚಿವರು ಗ್ರಾಮಗಳಲ್ಲಿ ಹರಿಯುವ ನದಿ, ಹಳ್ಳ, ಕೊಳ್ಳ, ತೊರೆಗಳಲ್ಲಿ ರಭಸವಾಗಿ ಹರಿಯುವ ನೀರನ್ನು ತಡೆದು ತೆವಳುವಂತೆ ಮಾಡಲು ಅಡ್ಡಲಾಗಿ ಚೆಕ್ ಡ್ಯಾಂಗಳನ್ನು ಕಟ್ಟಲಾಗುತ್ತಿದೆ. ಸೈಜುಕಲ್ಲು ತಡೆಗೋಡೆ ನಿರ್ಮಾಣದಿಂದ ಆರ್ಥಿಕ ವೆಚ್ಚ ಹೆಚ್ಚಳ ಹಾಗೂ ನೀರಿನ ರಭಸ ಕಟ್ಟಡದ ಮೇಲೆ ಹೆಚ್ಚು ಬೀಳದಂತೆ ತಡೆಯಲು ನವೀನ ಮಾದರಿ ಬಹುಕಮಾನು ತಡೆಗೋಡೆ ನಿರ್ಮಾಣಕ್ಕೆ ಯೋಜನೆಯಲ್ಲಿ ಅವಕಾಶ ನೀಡಲಾಗಿದೆ. ಬಹು ಕಮಾನು ತಡೆಗೋಡೆ ನಿರ್ಮಾಣವನ್ನು ಕೇವಲ ಅವೈಜ್ಞಾನಿಕವಾಗಿ









ಕಟ್ಟದೆ ಜಿಪಿಎಸ್ ಆಧಾರದ ಮೇಲೆ ಸ್ಥಳಗಳನ್ನು ಗುರುತಿಸಿ ಸದರಿ ಸ್ಥಳಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಇದರಿಂದ ಹೆಚ್ಚು ಬಾಳಿಕೆ ಹಾಗೂ ಆರ್ಥಿಕ ಹೆಚ್ಚಳವನ್ನು ಕಡಿಮೆಗೊಳಿಸಲು ಈ ಕಾಮಗಾರಿ ಸಹಕಾರಿಯಾಗಿದೆ ಎಂದು ಮಾಹಿತಿ ನೀಡಿದರು.

ದನದ ಶೆಡ್ ನಿರ್ಮಾಣ ವಸ್ತು ಪ್ರದರ್ಶನ ಕುರಿತಂತೆ ಜಾನುವಾರು ಗ್ರಾಮೀಣ ಜನರು ಕುಟುಂಬಕ್ಕೆ ಜೀವನಾಧಾರವಾಗಿದೆ. ಅದರಲ್ಲೂ ಕುರಿ/ಮೇಕೆ ಸಾಕಾಣಿಕೆ ಮಾಡುವ ಮಂದಿಗೆ ದೊಡ್ಡಿಗಳ ನಿರ್ಮಾಣ ಮಾಡಲು ಅಶಕ್ತರಾಗಿದ್ದಾರೆ. ಅವುಗಳಿಗೂ ಕೂಡ ಸೂರನ್ನು ಯೋಜನೆಯಿಂದ ಒದಗಿಸಬೇಕು ಎಂಬ ಉದ್ದೇಶದಿಂದ ಈ ಕಾಮಗಾರಿಯನ್ನು ಅನುಷ್ಠಾನಿಸಲಾಗುತ್ತಿದೆ. ರಾಜ್ಯದಲ್ಲಿ ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನಲ್ಲಿ ಕುರಿ/ ದನದ ಶೆಡ್ ನಿರ್ಮಾಣದಲ್ಲಿ ಅತಿಹೆಚ್ಚು ಅನುಷ್ಠಾನ ಮಾಡಿದ್ದಾರೆ. ಇದಲ್ಲದೆ ರಾಷ್ಟ್ರೀಯ ಪುರಸ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲಾಗಿದೆ ಎಂದು ವಿವರಿಸಿದರು.

ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಅನುಷ್ಠಾನಿಸಲಾದ ಕಾಮಗಾರಿಗಳ ಛಾಯಚಿತ್ರಗಳ ಫ್ಲೆಕ್ಸ್‌ನ್ನು ಗಮನಿಸಿದ ಸಚಿವರು ವಿಧಾನ ಪರಿಷತ್ ಸದಸ್ಯರಿಗೆ ಕಾಮಗಾರಿ ಪರಿಣಾಮಕಾರಿ ಬಗ್ಗೆ ವಿವರಿಸಿದರು. ಅದರಲ್ಲಿ ಮನಸೆಳೆಯುವ ಕಾಮಗಾರಿ ಬಗ್ಗೆ ಸದಸ್ಯ ರನ್ನು ಪ್ರಶ್ನಿಸಿದರು. ಇದಕ್ಕೆ ವಿಧಾನ ಪರಿಷತ್ ಸದಸ್ಯರು ಒಂದೊಂದು ಕಾಮಗಾರಿ ಅನುಷ್ಠಾನ ಕುರಿತ ಛಾಯಾಚಿತ್ರ ಆಯ್ಕೆ ಮಾಡಿದರು. ಸಚಿವರು ರಾಯಚೂರಿನಲ್ಲಿ ಅನುಷ್ಠಾನಿಸಲಾದ ಕೃಷಿ ಹೊಂಡದಲ್ಲಿ ನೀರು ತುಂಬಿ ಕುರಿ/ಮೇಕೆಗಳು ನೀರಿನ ದಾಹ ತೀರಿಸಿಕೊಳ್ಳುತ್ತಿರುವುದರ ದೃಶ್ಯ ಮನಸೂರೆಗೊಂಡ ಬಗ್ಗೆ ವಿವರಿಸಿದರು.

ನರೇಗಾ ಯೋಜನೆಯಿಂದ ಕಳೆದ ಮೂರು ವರ್ಷದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳ 21 ಅಂಶಗಳ ಕಾರ್ಯಕ್ರಮಗಳ ಕುರಿತ ವಸ್ತು ಪ್ರದರ್ಶನ ವಿಧಾನ ಪರಿಷತ್ ಸದಸ್ಯರನ್ನು ಮನಸೆಳೆಯುವಲ್ಲಿ ಯಶಸ್ವಿಯಾಯಿತು ಎನ್ನಬಹುದಾಗಿದೆ.

ಕಾರ್ಯಾಗಾರ

# "ನಮ್ಮ ಗ್ರಾಮ ನಮ್ಮ ಯೋಜನೆ"

## ಜಿಲ್ಲಾ ಮತ್ತು ತಾಲ್ಲೂಕು ಸಂಪನ್ಮೂಲ ತಂಡಗಳ ತರಬೇತುದಾರರಿಗೆ ಒಂದು ದಿನದ ಕಾರ್ಯಾಗಾರ

ನಮ್ಮ ಗ್ರಾಮ ನಮ್ಮ ಯೋಜನೆ–ದೂರದೃಷ್ಟಿ ಯೋಜನಾ ತಯಾರಿಕಾ ಪ್ರಕ್ರಿಯೆಗೆ ಸಂಬಂಧಿಸಿದ 2017–18ನೇ ಸಾಲಿನ ಯೋಜನಾ ತಯಾರಿಕೆ ಪ್ರಕ್ರಿಯೆಯನ್ನು ತಿಳಿಸಿಕೊಡಲು ಮತ್ತು 2016–17ನೇ ಸಾಲಿನ ಯೋಜನಾ ತಯಾರಿಕಾ ಪ್ರಕ್ರಿಯೆಯ ಅನುಭವವನ್ನು ಪರಿಶೀಲಿಸುವ ಒಂದು ದಿನದ "ಜಿಲ್ಲಾ ಸಂಪನ್ಮೂಲ ತಂಡದ ಮತ್ತು ತಾಲ್ಲೂಕು ಸಂಪನ್ಮೂಲ ತಂಡದ ಸದಸ್ಯರಿಗೆ ಹಾಗೂ ಜಿಲ್ಲಾ ಮತ್ತು ತಾಲ್ಲೂಕ ನೋಡಲ್ ಅಧಿಕಾರಿಗಳಿಗೆ ಕಾರ್ಯಾಗಾರವನ್ನು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಯು 10 ಜಿಲ್ಲೆಗಳ (ಬೆಳಗಾವಿ, ಬಾಗಲಕೋಟೆ, ವಿಜಯಪುರ, ಹಾವೇರಿ, ಧಾರವಾಡ, ಉತ್ತರ ಕನ್ನಡ, ಗದಗ, ದಾವಣಗೆರೆ, ಚಿತ್ರದುರ್ಗ ಮತ್ತು ಕೊಪ್ಪಳ) ಪ್ರತಿನಿಧಿಗಳಿಗೆ ಏರ್ಪಡಿಸಲಾಗಿತ್ತು. ಈ ಕಾರ್ಯಾಗಾರದಲ್ಲಿ ಸುಮಾರು 350ಕ್ಕೂ ಹೆಚ್ಚು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು, ಸಂಘ ಸಂಸ್ಥೆಗಳ ಪದಾಧಿಕಾರಿಗಳು ಭಾಗವಹಿಸಿದ್ದರು.

**ಕಾರ್ಯಾಗಾರದ ಉದ್ಘಾಟನಾ ಸಮಾರಂಭದಲ್ಲಿ ಧಾರವಾಡ ಜಿಲ್ಲೆಯ ಜಿಲ್ಲಾ ಪಂಚಾಯತಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀಮತಿ ಆರ್. ಸ್ನೇಹಲ್, ಭಾ.ಆ.ಸೇ. ಇವರು ಜ್ಯೋತಿ ಬೆಳಗುವುದರ ಮೂಲಕ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಯಾವುದೇ ಯೋಜನೆ ಯಶಸ್ವಿಯಾಗಬೇಕೆಂದರೆ ಅದು ಈ ನಮ್ಮ ಗ್ರಾಮ ನಮ್ಮ ಯೋಜನೆ ಮೂಲಕ ಅನುಷ್ಠಾನ ತಂದಿದ್ದಲ್ಲಿ ಸಾಕಾರವಾಗುವುದು.**



**ಶ್ರೀ ಡಿ. ಪ್ರಾಣೇಶ್ ರಾವ್, ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು ಅವರಿಂದ ಉದ್ಘಾಟನೆ**

ಕಾರ್ಯಾಗಾರವನ್ನು ಪ್ರಾಸ್ತಾವಿಕ ಮಾತನಾಡುತ್ತಾ ಶ್ರೀ ಡಿ. ಪ್ರಾಣೇಶ್ ರಾವ್, ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು ಇವರು ಮುಂದಿನ ವರ್ಷದ "ನಮ್ಮ ಗ್ರಾಮ ನಮ್ಮ ಯೋಜನೆ" ಕ್ರಿಯಾ ಯೋಜನೆಯ ತಯಾರಿಕಾ ಪ್ರಕ್ರಿಯೆಯನ್ನು ಪ್ರಾರಂಭಿಸುವ ಮೊದಲು, ಕಳೆದ ವರ್ಷ ಸಾಧಿಸಿರುವ ಗ್ರಾಮ ಪಂಚಾಯತ್,



**ಭಾಗವಹಿಸಿದ ಇಲಾಖಾ ಮುಖ್ಯಸ್ಥರುಗಳು.**

ತಾಲ್ಲೂಕು ಮಟ್ಟದ ಕಾರ್ಯಕ್ರಮಗಳ ಸಮಗ್ರ ಮಾಹಿತಿಯನ್ನು ಕ್ರೋಢೀಕರಿಸಿ ಸಮಗ್ರ ವರದಿಯನ್ನು ಮುದ್ರಿಸಿ, ಪ್ರತಿ ಗ್ರಾಮ ಸಭೆಯಲ್ಲಿ ಭಾಗವಹಿಸುವ ಎಲ್ಲಾ ನಾಗರೀಕರಿಗೆ ವಿವರಿಸುವುದರೊಂದಿಗೆ, ಸಾರ್ವಜನಿಕರ ವಿಶ್ವಾಸವನ್ನು ಪಡೆದು ನಂತರ ಮುಂದಿನ ವರ್ಷದ ಯೋಜನಾ ತಯಾರಿಕೆಗೆ ಸಾರ್ವಜನಿಕರಿಂದಲೇ ಸಲಹೆ–ಮಾರ್ಗದರ್ಶನವನ್ನು ಪಡೆದು ಅವಶ್ಯಕತೆಯ ಬೇಡಿಕೆಯ ಪಟ್ಟಿಯನ್ನು ನಿಗಧಿತ ತಂತ್ರಾಂಶದಲ್ಲಿ ಪಾರದರ್ಶಕ ಮಾರ್ಗದಲ್ಲಿ ಅಳವಡಿಸುವ ಮೂಲಕ ಅಂತಿಮವಾಗಿ ಪ್ರಜೆಗಳೇ ಪ್ರಭುಗಳು ಎಂಬ ಸುನಿಶ್ಚಿತ ಪ್ರಜಾತಂತ್ರ ವ್ಯವಸ್ಥೆಯನ್ನು ಸದೃಢಪಡಿಸುವ ಜವಾಬ್ದಾರಿಯು ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಪ್ರತಿಯೊಬ್ಬರ ಅಧಿಕಾರಿಗಳದಾಗಿದೆ ಎಂದು ಹೇಳಿದರು.

ಕಾರ್ಯಾಗಾರದ ಉದ್ಘಾಟನಾ ಸಮಾರಂಭದಲ್ಲಿ ಧಾರವಾಡ ಜಿಲ್ಲೆಯ ಜಿಲ್ಲಾ ಪಂಚಾಯತಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀಮತಿ ಆರ್. ಸ್ನೇಹಲ್, ಭಾ.ಆ.ಸೇ. ಇವರು ಜ್ಯೋತಿ ಬೆಳಗುವುದರ ಮೂಲಕ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಯಾವುದೇ ಯೋಜನೆ ಯಶಸ್ವಿಯಾಗಬೇಕೆಂದರೆ ಅದು ಈ ನಮ್ಮ ಗ್ರಾಮ ನಮ್ಮ ಯೋಜನೆ ಮೂಲಕ ಅನುಷ್ಠಾನ ತಂದಿದ್ದಲ್ಲಿ ಸಾಕಾರವಾಗುವುದು ಎಂದು ಆಶಯ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಡಾ. ಜಿ. ಎಸ್. ಗಣೇಶ್ ಪ್ರಸಾದ್, ಉಪ ನಿರ್ದೇಶಕರು, ಮೈಸೂರು ವಿಕೇಂದ್ರೀಕೃತ ಯೋಜನೆ ಮಹತ್ವ, ಪ್ರಕ್ರಿಯೆ ಮತ್ತು ಕಳೆದ ವರ್ಷದ ಯೋಜನಾ ತಯಾರಿಕಾ ಅನುಭವವನ್ನು ವಿವರಿಸಿದರು. ನಮ್ಮ ಗ್ರಾಮ ನಮ್ಮ ಯೋಜನೆ – ಪ್ರಕ್ರಿಯೆ (ಬದಲಾದ ಅಂಶಗಳು) ತಂತ್ರಾಂಶ ಕುರಿತು ಶ್ರೀ ಜಿ. ಮಲ್ಲಿಕಾರ್ಜುನ ಸ್ವಾಮಿ, ಯೋಜನಾ ವ್ಯವಸ್ಥಾಪಕರು, ಮೈಸೂರು ಇವರು ತಿಳಿಸಿದರು.

ಕಾರ್ಯಾಗಾರದಲ್ಲಿ ಶ್ರೀ ಎಸ್.ಎಮ್. ರುದ್ರಸ್ವಾಮಿ, ಉಪ ನಿರ್ದೇಶಕರು, ಅ.ನ.ಸಾ.ಸಾ.ರಾ. ಗ್ರಾ. ಮತ್ತು ಪಂ.ರಾ. ಪ್ರಾದೇಶಿಕ ಕೇಂದ್ರ, ಧಾರವಾಡ ಸ್ವಾಗತಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಅ.ನ.ಸಾ.ಸಾ.ರಾ. ಗ್ರಾ. ಮತ್ತು ಪಂ.ರಾ. ಪ್ರಾದೇಶಿಕ ಕೇಂದ್ರ, ಧಾರವಾಡದ ಪರಿಣಿತ ಬೋಧಕರಾದ ಶ್ರೀ. ರಾಜೇಂದ್ರ ದೇಸಾಯಿಯವರು ನಡೆಸಿದರು ಮತ್ತು ವಂದನಾರ್ಪಣೆಯನ್ನು ಅ.ನ.ಸಾ.ಸಾ.ರಾ. ಗ್ರಾ. ಮತ್ತು ಪಂ.ರಾ. ಪ್ರಾದೇಶಿಕ ಕೇಂದ್ರ, ಧಾರವಾಡ ಪರಿಣಿತ ಬೋಧಕರಾದ ಶ್ರೀ ಪವನ ಪಿ. ಶರ್ಮಾರವರು ನೆರವೇರಿಸಿದರು.

ವರದಿ

# ಶೌಚಾಲಯ ಕ್ರಾಂತಿಗೆ ಮುನ್ನುಡಿ ಬರೆದ ಸಂಜೀವಿನಿ ಯೋಜನೆಯ ಸ್ವ ಸಹಾಯ ಗುಂಪಿನ ಮಹಿಳೆಯರು


**ಬಸವರಾಜು ಜಿ ಮೂಲಿಮನಿ**

ಜಿಲ್ಲಾ ವ್ಯವಸ್ಥಾಪಕರು(ಎಂ&ಇ)
ಜಿಲ್ಲಾ ಅಭಿಯಾನ ನಿರ್ವಹಣಾ ಘಟಕ. ಸಂಜೀವಿನಿ–ಕೆಎಸ್‌ಆರ್‌ಎಲ್‌ಪಿಎಸ್
ಜಿಲ್ಲಾ ಪಂಚಾಯತ, ಕೊಪ್ಪಳ


**ಶೌಚಾಲಯ ನಿರ್ಮಾಣಕ್ಕಾಗಿ ಸರ್ಕಾರವೇನು ಧನ ಸಹಾಯ ನೀಡುತ್ತಿದೆ. ಆದರೆ ಈ ಧನ ಸಹಾಯ ಫಲಾನುಭವಿಗಳಿಗೆ ತಲುಪಬೇಕಾದರೆ ಶೌಚಾಲಯ ಕಾಮಗಾರಿ ಪೂರ್ಣಗೊಂಡಿರಬೇಕಾಗುತ್ತದೆ ಹಾಗೂ ಆರಂಭದಲ್ಲಿ ಕಾಮಗಾರಿಗೆ ತಗಲುವ ವೆಚ್ಚವನ್ನು ಫಲಾನುಭವಿಗಳೇ ಭರಿಸಬೇಕಾಗುತ್ತದೆ.**

ಸರ್ಕಾರದ ಮಹಾತ್ವಾಕಾಂಕ್ಷಿಯ 'ಸ್ವಚ್ಛ ಭಾರತ ಅಭಿಯಾನ'ದ ಆಶಯದಂತೆ ಗ್ರಾಮೀಣ ಪ್ರದೇಶಗಳಲ್ಲಿ ಪ್ರತಿ ಕುಟುಂಬವೂ ವೈಯಕ್ತಿಕ ಶೌಚಾಲಯ ಕಟ್ಟಿಸಿಕೊಂಡು ಬಳಸುವಂತೆ ಮಾಡಲು ಹಾಗೂ ಆ ಮೂಲಕ ಬಯಲು ಬಹಿರ್ದೆಸೆ ಮುಕ್ತ (ಓ.ಡಿ.ಎಫ್) ಜಿಲ್ಲೆಯನ್ನಾಗಿಸಲು ಕೊಪ್ಪಳ ಜಿಲ್ಲಾಡಳಿತ ಅವಿರತವಾಗಿ ಶ್ರಮಿಸುತ್ತಿದೆ. ಇದಕ್ಕೆ ಪೂರಕವಾಗಿ ಕೊಪ್ಪಳ ಜಿಲ್ಲೆಯನ್ನು ಮಾರ್ಚ್ 2018ರೊಳಗೆ ಬಹಿರ್ದೆಸೆ ಮುಕ್ತ (ಓ.ಡಿ.ಎಫ್) ಜಿಲ್ಲೆಯೆಂದು ಘೋಷಿಸುವ ಗುರಿಯನ್ನಿಟ್ಟುಕೊಂಡಿದ್ದು, ಈ ನಿಟ್ಟಿನಲ್ಲಿ ಪ್ರತಿ ಗ್ರಾಮಗಳಲ್ಲಿ ಶೌಚಾಲಯಗಳ ನಿರ್ಮಾಣ ಕಾರ್ಯ ಭರದಿಂದ ಸಾಗುತ್ತಿದೆ.

ಹೀಗೆ ಹಗಲಿರುಳು ಶ್ರಮಿಸುತ್ತಿರುವ ಜಿಲ್ಲಾಡಳಿತಕ್ಕೆ ಇತರೇ ಸಹ ಇಲಾಖೆಗಳು, ಸಂಘ–ಸಂಸ್ಥೆಗಳು, ಜನಪ್ರತಿನಿಧಿಗಳು ತಮ್ಮದೇ ಆದ ರೀತಿಯಲ್ಲಿ ಸಹಾಯ–ಸಹಕಾರವನ್ನು ನೀಡುತ್ತಿದ್ದರೆ, ಇದರಲ್ಲಿ ವಿಶೇಷವಾಗಿ ಮಹಿಳೆಯರು (ಸ್ವ ಸಹಾಯ



ಗುಂಪುಗಳ ಸದಸ್ಯರು) ತಾವೂ ಕಡಿಮೆ ಇಲ್ಲ ಎಂಬಂತೆ ಶೌಚಾಲಯ ನಿರ್ಮಾಣ ಹಾಗೂ ಅವುಗಳನ್ನು ಬಳಸುವಂತೆ ಪ್ರೇರೇಪಿಸುವ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಸರ್ಕಾರದೊಟ್ಟಿಗೆ ಕೈಜೋಡಿಸಿ ಕಾರ್ಯನಿರ್ವಹಿಸುತ್ತಿದ್ದಾರೆ. ಇದಕ್ಕೆ ಪೂರಕವಾಗಿ ದೀನ್ ದಯಾಳ್ ಅಂತ್ಯೋದಯ ಯೋಜನೆ– ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (ಡೇ–ಎನ್‌ಆರ್‌ಎಲ್‌ಎಂ), ಕರ್ನಾಟಕದಲ್ಲಿ ಸಂಜೀವಿನಿ ಯೋಜನೆಯಡಿಯಲ್ಲಿ ರಚಿಸಿದ ಒಕ್ಕೂಟಗಳ ಮೂಲಕ ಗ್ರಾಮೀಣ ಪ್ರದೇಶಗಳಲ್ಲಿ ಶೌಚಾಲಯಗಳ ನಿರ್ಮಾಣ ಕಾರ್ಯದಲ್ಲಿ ಇರುವ



ಹಲವಾರು ಅಡೆತಡೆಗಳನ್ನು ಗುರುತಿಸಿ ಅವುಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವ ವಿಭಿನ್ನ ಪ್ರಯತ್ನಗಳಿಗೆ ಹಾಗೂ ಸ್ವ ಸಹಾಯ ಗುಂಪಿನ ಮಹಿಳೆಯರಲ್ಲಿ ಜಾಗೃತಿ ಮೂಡಿಸುವ ಕಾರ್ಯದಲ್ಲಿ ತೊಡಗಿಕೊಂಡಿದೆ

ಸಂಜೀವಿನಿ ಯೋಜನೆಯ ಸಿಬ್ಬಂದಿಗಳು ಹಾಗೂ ವಿವಧ ಹಂತದ ಸಮುದಾಯ ಸಂಪನ್ಮೂಲ ವ್ಯಕ್ತಿಗಳು ಒಕ್ಕೂಟಗಳಲ್ಲಿ ಹಾಗೂ ಸ್ವ ಸಹಾಯ ಗುಂಪುಗಳಲ್ಲಿ ಮೊದಲು ಶೌಚಾಲಯ ಕಟ್ಟಿಸಿಕೊಳ್ಳುವ ಕುರಿತಂತೆ ಪ್ರೇರೇಪಣೆ ನೀಡಲಾಗಿದೆ. ಆರಂಭದ ಒಂದು ಭಾಗವಾಗಿ, ಗುಂಪಿನ ಮಹಿಳೆಯರು ಶೌಚಾಲಯ ಸೌಲಭ್ಯ ಹೊಂದಿರುವ ಅಥವಾ ಹೊಂದದೇ ಇರುವವರ ಪಟ್ಟಿಯನ್ನು ಸಮೀಕ್ಷೆ ಮಾಡುವ ಮೂಲಕ ಮಾಹಿತಿ ಸಂಗ್ರಹಿಸಿ, ಶೌಚಾಲಯಗಳಿಲ್ಲದ ಕುಟುಂಬಗಳನ್ನು ಗುರುತಿಸಿ ಶೌಚಾಲಯ ನಿರ್ಮಿಸಿಕೊಳ್ಳಲು ಇರುವ ಸಮಸ್ಯೆಗಳ ಬಗ್ಗೆ ಸ್ವ ಸಹಾಯ ಗುಂಪು ಹಾಗೂ ಒಕ್ಕೂಟಗಳಲ್ಲಿ ಮುಕ್ತವಾಗಿ ಚರ್ಚಿಸಲಾಯಿತು.

ಶೌಚಾಲಯ ನಿರ್ಮಾಣಕ್ಕಾಗಿ ಸರ್ಕಾರವೇನು ಧನ ಸಹಾಯ ನೀಡುತ್ತಿದೆ. ಆದರೆ ಈ ಧನ ಸಹಾಯ ಫಲಾನುಭವಿಗಳಿಗೆ ತಲುಪಬೇಕಾದರೆ ಶೌಚಾಲಯ ಕಾಮಗಾರಿ ಪೂರ್ಣಗೊಂಡಿರಬೇಕಾಗುತ್ತದೆ ಹಾಗೂ ಆರಂಭದಲ್ಲಿ ಕಾಮಗಾರಿಗೆ ತಗಲುವ ವೆಚ್ಚವನ್ನು ಫಲಾನುಭವಿಗಳೇ ಭರಿಸಬೇಕಾಗುತ್ತದೆ. ಹೀಗಾಗಿ ಶೌಚಾಲಯ ನಿರ್ಮಾಣ ಮಾಡಿಕೊಳ್ಳುವ ಇಚ್ಛೆ ಇದ್ದರೂ, ಇದಕ್ಕೆ ಆರಂಭದಲ್ಲಿ ಹಣ ಜೋಡಿಸುವುದಕ್ಕಾಗಿ ಪರದಾಡಬೇಕಾದ ಅದೆಷ್ಟೋ ಕುಟುಂಬಗಳಿರುವುದನ್ನು ತಿಳಿದ ನಂತರ, ತಮ್ಮ ಒಕ್ಕೂಟ ವ್ಯಾಪ್ತಿಯಲ್ಲಿ ಬರುವ ಸ್ವ ಸಹಾಯ ಗುಂಪಿನ ಯಾವ ಸದಸ್ಯರಿಗೆ ಶೌಚಾಲಯ ನಿರ್ಮಿಸಿಕೊಳ್ಳಲು ಆರ್ಥಿಕ ತೊಂದರೆ ಇದೆ ಎಂಬುದನ್ನು ಗುರುತಿಸಿ, ಅಂಥವರಿಗೆ ಹತ್ತು ಸಾವಿರದಿಂದ ಹದಿನೈದು ಸಾವಿರ ರೂಗಳ ವರೆಗೆ ಸಮುದಾಯ ಬಂಡವಾಳ ನಿಧಿ ಮೂಲಕ ಸಾಲ ನೀಡಿದ್ದಾರೆ. ಹೀಗಾಗಿ ಬಡ ಕುಟುಂಬಗಳು ಶೌಚಾಲಯ ನಿರ್ಮಿಸಿಕೊಳ್ಳುವಲ್ಲಿ ಇದ್ದ ಪ್ರಮುಖ ಅಡ್ಡಿಯೊಂದು ನಿವಾರಣೆಯಾಗಿದೆ. ಸಾಲ ಪಡೆದ ಮಹಿಳೆಯರು ಈ ಹಣವನ್ನು ಬಳಸಿಕೊಂಡು ಶೌಚಾಲಯ ನಿರ್ಮಿಸಿಕೊಳ್ಳುತ್ತಿದ್ದಾರೆ. ಸರ್ಕಾರದಿಂದ ಸಹಾಯಧನ ಬಂದ ನಂತರ ಈ ಸಾಲವನ್ನು ಒಕ್ಕೂಟಕ್ಕೆ ಶೇ.12% ವಾರ್ಷಿಕ ಇಳಿಕೆ ಬಡ್ಡಿದರದೊಂದಿಗೆ ಸಾಲ ಮರುಪಾವತಿ ಮಾಡುವ ಮೂಲಕ ತಮ್ಮ ಸಾಮಾಜಿಕ ಜವಾಬ್ದಾರಿ ಮೆರೆದಿದ್ದಾರೆ. ಇದರೊಂದಿಗೆ ಸ್ವ ಸಹಾಯ ಗುಂಪಿನ ಮಹಿಳೆಯರು ಕೊಪ್ಪಳ ಜಿಲ್ಲೆಯನ್ನು ಬಹಿರ್ದೆಸೆ ಮುಕ್ತ (ಓ.ಡಿ.ಎಫ್) ಜಿಲ್ಲೆಯನ್ನಾಗಿಸಲು ಶ್ರಮಿಸುತ್ತಿದ್ದಾರೆ.

## ಯಶಸ್ವಿ ಮಹಿಳೆಯ ಮನದಾಳದ ಮಾತು.

ಯಲಬುರ್ಗಾ ತಾಲ್ಲೂಕಿನ ಕಲ್ಲೂರು ಗ್ರಾಮದ ಶಾರದಮ್ಮ ಗುರುಮಠ ಎಂಬ ಮಹಿಳೆ ಸಾಲ ಪಡೆದುಕೊಂಡು ಶೌಚಾಲಯ ನಿರ್ಮಿಸಿಕೊಂಡ ಕುರಿತು ಹೇಳಿದ ಮಾತು..'ನಮ್ಮ ಮನೆಗೆ ಶೌಚಾಲಯ ಕಟ್ಟಿಸಿಕೊಳ್ಳಬೇಕಂತ ಆಸೆ ಇತ್ರಿ. ಮನ್ಯಾಗ ಬೆಳೆದ ನಿಂತ್ ಮಕ್ಕಳನ್ನ ಸಂಡಾಸ್‌ಗೆ ಹೊರಗ ಕಳಸಬೇಕಲ್ಲ ಅಂತ ಬಹಳ ಬೇಸರ ಆಗ್ತಿತ್ತ್ರಿ.... ಕಟ್ಟಿಸಿಕೊಳ್ಳಾಕ ಜಾಗ ನಮ್ಮ ಹತ್ರ ಜಾಗ ಇದ್ರೂ ಕೂಡ ದುಡ್ಡ ಹೊಂದಸೋದ ಕಷ್ಟ ಆಗಿತ್ತು. ನಾನು ಸಂಘದಾಗ ಮತ್ತೆ ನಮ್ಮ ಒಕ್ಕೂಟದಾಗ ನನ್ನ ತೊಂದರೆ ಹೇಳಿಕೊಂಡೆ. ನನಗ ಒಕ್ಕೂಟದ ವತಿಯಿಂದ ಹನ್ನೆರಡು ಸಾವಿರ ರೂಪಾಯಿ ಸಾಲ ಸಿಕ್ಕತ್ರಿ... ಆ ಸಾಲ ತಗೊಂಡು ಶೌಚಾಲಯ ಕಟ್ಟಾಕ ಬಳಸಕತ್ತಿನಿ. ನನ್ನಂತ ಸಂಘದ ಬೇರೆ ಹೆಣ್ಮಕ್ಳಗೂ ಸಹ ಕಟ್ಟಿಸಿಕೊಳ್ಳವ ಒಳ್ಳೆಯದಾಗುತ್ತ ಅಂತ ಹೇಳಕತ್ತಿನ್ರಿ...." ಎಂದು ಹೆಮ್ಮೆಯಿಂದ ಹೇಳುತ್ತಾರೆ.



# ODF ಪ್ಲಸ್ ಗ್ರಾಮದತ್ತ ಕಡೆಕಾರು ಗ್ರಾಮ ಪಂಚಾಯತ್ ಚಿತ್ತ

## ತ್ಯಾಜ್ಯ ನಿರ್ವಹಣೆಗೆ ಮನೆ ಮನೆಗೆ ಪೈಪ್‌ಕಾಂಪೋಸ್ಟ್ ಅಳವಡಿಕೆ ಅಭಿಯಾನ

ವರದಿ



**ರಘುನಾಥ್**

ಜಿಲ್ಲಾ ಸಮಾಲೋಚಕರು,
ಸ್ವಚ್ಛ ಭಾರತ್ ಮಿಷನ್ (ಗ್ರಾ)
ಜಿಲ್ಲಾ ಪಂಚಾಯತ್ ಉಡುಪಿ.

ಸ್ಥಳದ ಕೊರತೆಯಿಂದ ತ್ಯಾಜ್ಯ ನಿರ್ವಹಣೆಯ ಸವಾಲನ್ನು ಎದುರಿಸುತ್ತಿರುವ ಕಡೆಕಾರು ಗ್ರಾಮ ಪಂಚಾಯತಿ ಮನೆ ಮನೆಗೆ ಪೈಪ್ ಕಾಂಪೋಸ್ಟ್ ಅಳವಡಿಸುತ್ತಿದ್ದು, ಕುಟುಂಬಗಳು ಉತ್ಪತ್ತಿ ಮಾಡುವ ತ್ಯಾಜ್ಯವನ್ನು ಮೂಲದಲ್ಲಿಯೇ ವಿಂಗಡಿಸಿ, ಲಭ್ಯವಾಗುವ ಹಸಿತ್ಯಾಜ್ಯವನ್ನು ಮನೆ ಹಂತದಲ್ಲಿಯೇ ಸಂಸ್ಕರಿಸಿ ಸಾವಯವ ಗೊಬ್ಬರವನ್ನಾಗಿ ಪರಿವರ್ತಿಸಿ ಮರುಬಳಕೆ ಮಾಡಲು ಉತ್ತೇಜನ ನೀಡುತ್ತಿದೆ.

### ಅರಿವು-ನೆರವು ಚಟುವಟಿಕೆಗಳು:

ಮೊದಲ ಹಂತದಲ್ಲಿ ಜಿಲ್ಲಾ ಪಂಚಾಯತಿ ಸ್ವಚ್ಛ ಭಾರತ್ ಮಿಷನ್ ಸಹಯೋಗದೊಂದಿಗೆ ಗ್ರಾಮ ಪಂಚಾಯತಿ ಸದಸ್ಯರಿಗೆ, ಸಿಬ್ಬಂದಿಗಳಿಗೆ, ಶಾಲೆ ಶಿಕ್ಷಕರು ಹಾಗೂ ಅಂಗನವಾಡಿ ಕಾರ್ಯಕರ್ತೆಯರಿಗೆ ತ್ಯಾಜ್ಯ ವಿಂಗಡಣೆ ಹಾಗೂ ಪೈಪ್ ಕಾಂಪೋಸ್ಟ್ ಮೂಲಕ ತ್ಯಾಜ್ಯ ವಿಲೇವಾರಿ ಬಗ್ಗೆ ತರಬೇತಿ ನೀಡಲಾಗಿದೆ. ಹಾಗೂ ಪ್ರತಿ ಅಂಗನವಾಡಿಗಳಲ್ಲಿ ಸ್ತ್ರೀಶಕ್ತಿ ಸಂಘದ ಸದಸ್ಯರಿಗೆ ಆಯಾ ಅಂಗನವಾಡಿ ಕೇಂದ್ರದಲ್ಲಿ ಸಭೆ ಕರೆದು ಮಾಹಿತಿ ನೀಡಲಾಯಿತು. ಹಾಗೂ ಆಯ್ದ ವಾರ್ಡ್‌ಗಳಲ್ಲಿ ಸಾರ್ವಜನಿಕರಿಗೆ ಮಾಹಿತಿ ನೀಡಲಾಗಿದೆ. ಪೈಪ್ ಕಾಂಪೋಸ್ಟ್

**ಸದಸ್ಯರ ಮನೆಗಳಿಗೆ ಪೈಪ್ ಕಾಂಪೋಸ್ಟ್ ಅಳವಡಿಸುವಂತೆ ಹಾಗೂ ಗ್ರಾಮ ಪಂಚಾಯತಿನೊಂದಿಗೆ ಸಹಕಾರ ನೀಡುವಂತೆ ಕೋರಲಾಗಿರುತ್ತದೆ. ಆಯಾ ವಾರ್ಡ್‌ನಲ್ಲಿ ಸಂಬಂಧಿಸಿದ ಸದಸ್ಯರ ಸಹಕಾರ ಪಡೆಯಲಾಗಿದೆ.**



ವಿಧಾನದ ಬಗ್ಗೆ 2000 ಕರಪತ್ರಗಳನ್ನು ಮುದ್ರಿಸಿ ಮನೆ ಮನೆಗೆ ಹಂಚಲಾಗಿದೆ. ಆರಂಭದಲ್ಲಿ ಸುಮಾರು ಒಂದು ತಿಂಗಳು ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕಾರ್ಯದರ್ಶಿ, ಗ್ರಾಮ ಪಂಚಾಯತಿ ಸದಸ್ಯರು ಹಾಗೂ ಗ್ರಾಮ ಪಂಚಾಯತಿ ಸಿಬ್ಬಂದಿಗಳು ಬೆಳಿಗ್ಗೆ 8 ರಿಂದ 10 ಗಂಟೆಯ ಅವಧಿಯಲ್ಲಿ ಮನೆ ಮನೆಗೆ ತೆರಳಿ ಪೈಪ್ ಕಾಂಪೋಸ್ಟ್ ಮಹತ್ವದ ಬಗ್ಗೆ ಮಾಹಿತಿ ನೀಡಿರುತ್ತಾರೆ. ಬಿಲ್‌ಕಲೆಕ್ಟರ್ ಹಾಗೂ ಪಂಪು ಚಾಲಕರು ಕರ ಸಂಗ್ರಹಣೆಗೆ ವಾರ್ಡ್ ಭೇಟಿ ಸಂದರ್ಭ ಈ ಬಗ್ಗೆಯೂ ಮಾಹಿತಿ ನೀಡಿರುತ್ತಾರೆ.

### ಸಂಘ ಸಂಸ್ಥೆಗಳ ಸಹಯೋಗ ಪಡೆದಿರುವುದು:

ಪೈಪ್ ಕಾಂಪೋಸ್ಟ್ ಅಳವಡಿಕೆಗೆ ಗ್ರಾಮ ಪಂಚಾಯತಿ ವ್ಯಾಪ್ತಿಯ ನಿಡಂಬೂರು ಯುವಕ ಮಂಡಲ, ನವಚೇತನ ಯುವಕ ಮಂಡಲ, ಕುತ್ಪಾಡಿ ಬಿಲ್ಲವ ಸಂಘ, ಕಡೆಕಾರು ಬಿಲ್ಲವ ಸಂಘ, ಹಾಲು ಉತ್ಪಾದಕರ ಸಹಕಾರಿ ಸಂಘ, ಅಂಗನವಾಡಿ ಸ್ತ್ರೀಶಕ್ತಿ ಸಂಘಗಳ ಸಹಕಾರ ಪಡೆಯಲಾಗಿದೆ. ಗ್ರಾಮ ಪಂಚಾಯತಿನಿಂದ ಸಂಘ ಸಂಸ್ಥೆಗಳಿಗೆ ಹಾಗೂ ಅಂಗನವಾಡಿಗಳಿಗೆ ಪತ್ರ ಬರೆದು ತಮ್ಮ ಸಂಘದ ಎಲ್ಲಾ ಸದಸ್ಯರ ಮನೆಗಳಿಗೆ ಪೈಪ್ ಕಾಂಪೋಸ್ಟ್ ಅಳವಡಿಸುವಂತೆ ಹಾಗೂ ಗ್ರಾಮ ಪಂಚಾಯತಿನೊಂದಿಗೆ ಸಹಕಾರ ನೀಡುವಂತೆ ಕೋರಲಾಗಿರುತ್ತದೆ. ಆಯಾ ವಾರ್ಡ್‌ನಲ್ಲಿ ಸಂಬಂಧಿಸಿದ ಸದಸ್ಯರ ಸಹಕಾರ ಪಡೆಯಲಾಗಿದೆ.

### ಅನುದಾನ ನಿರ್ವಹಣೆ:

ಗ್ರಾಮ ಪಂಚಾಯತಿ ಪರಿಶಿಷ್ಟ ಜಾತಿ/ಪಂಗಡ ಮೀಸಲು ಅನುದಾನದಲ್ಲಿ ರೂ.1.33 ಲಕ್ಷ ಅನುದಾನವನ್ನು 5 ವಾರ್ಡ್‌ಗಳಲ್ಲಿ ಸಂಬಂಧಿಸಿದ ಕುಟುಂಬಗಳಿಗೆ ಪೈಪ್ ಕಾಂಪೋಸ್ಟ್ ಉದ್ದೇಶಕ್ಕೆ ಬಳಸಿಕೊಳ್ಳಲಾಗಿದೆ. 11ನೇ ವಾರ್ಡ್ ಗ್ರಾಮ ಪಂಚಾಯತಿ ಸದಸ್ಯರ ಕೋರಿಕೆಯಂತೆ ಸದ್ರಿಯವರ ವಾರ್ಡ್‌ನಲ್ಲಿ ಆರ್ಥಿಕವಾಗಿ ಅಸಹಾಯಕರಿಗೆ ಪೈಪ್ ಕಾಂಪೋಸ್ಟ್ ಅಳವಡಿಕೆ ಉದ್ದೇಶ ಗ್ರಾಮ ಪಂಚಾಯತಿ ಅನುದಾನ ಮೀಸಲಿಟ್ಟು ಕ್ರಿಯಾ ಯೋಜನೆ ರೂಪಿಸಲಾಗಿದೆ. ಗ್ರಾಮ ಪಂಚಾಯತ್ ವ್ಯಾಪ್ತಿಯ ಎಲ್ಲಾ ಶಾಲೆ ಮತ್ತು ಅಂಗನವಾಡಿಗಳಿಗೆ ಗ್ರಾಮ ಪಂಚಾಯತ್ ಅನುದಾನದಿಂದ ಪೈಪ್ ಕಾಂಪೋಸ್ಟ್ ಅಳವಡಿಸಲಾಗಿದೆ. ಉಳಿದಂತೆ ಅತಿ ಕಡಿಮೆ ದರ ಅಂದರೆ ರೂ.500+50 (50 installation charge) ಪ್ರತಿ ಮನೆಯಿಂದ ಸಂಗ್ರಹಿಸಿ ಪ್ರತಿ ಮನೆಗೆ ಎರಡು ಪೈಪ್‌ಗಳನ್ನು ಗ್ರಾಮ ಪಂಚಾಯತಿ ಮುಂದಾಳತ್ವದಲ್ಲಿ ಅಳವಡಿಸಲಾಗುತ್ತಿದೆ.

**ಈವರೆಗೆ ಅಳವಡಿಸಿರುವ ಪೈಪ್ ಕಾಂಪೋಸ್ಟ್‌ಗಳ ವಿವರ**

| ಕ್ರ. ಸಂ. | ವಿವರ | ಸಂಖ್ಯೆ | ಪೈಪ್ ಕಾಂಪೋಸ್ಟ್ ಸಂಖ್ಯೆ |
|---|---|---|---|
| 1 | ಗ್ರಾಮ ಪಂಚಾಯತ್ ಆವರಣ | 1 | 2 |
| 2 | ಶಾಲೆಗಳು | 3 | 6 |
| 3 | ಅಂಗನವಾಡಿಗಳು | 7 | 14 |
| 4 | ಕುಟುಂಬಗಳು | 530+ (130 ಪ.ಜಾತಿ/ ಪ.ಪಂಗಡ) | 660+ |

### ದಾಖಲೆ ನಿರ್ವಹಣೆ:

ಪ್ರತಿ ಮನೆಗೆ ಮಾಹಿತಿ ನೀಡಿ ಕರಪತ್ರ ಹಂಚಿರುವ ಬಗ್ಗೆ, ಪೈಪ್ ಕಾಂಪೋಸ್ಟ್ ಅಳವಡಿಸಿರುವ ಮನೆಗಳ ವಿವರಗಳ, ಪಡೆದಿರುವ ಮೊತ್ತ ಮುಂತಾದವುಗಳ ಬಗ್ಗೆ ಫಲಾನುಭವಿ ಸಹಿ ಪಡೆದು ಕಡತ ನಿರ್ವಹಿಸಲಾಗಿದೆ. ಸಂಘಗಳಿಗೆ ಪತ್ರ ಬರೆದಿರುವ ಬಗ್ಗೆ ಸ್ವೀಕೃತಿ ಪಡೆದು ದಾಖಲೆ ನಿರ್ವಹಿಸಿದೆ. ಪರಿಶಿಷ್ಟ ಜಾತಿ ಕುಟುಂಬಗಳಿಗೆ, ಶಾಲೆ ಅಂಗನವಾಡಿಗಳಿಗೆ ಪೈಪ್ ಕಾಂಪೋಸ್ಟ್ ಅಳವಡಿಕೆ ಬಗ್ಗೆ ಪ್ರತ್ಯೇಕ ಕಡತಗಳನ್ನು ನಿರ್ವಹಿಸಲಾಗಿದೆ. ವಾರ್ಡ್‌ವಾರು ಪ್ರತ್ಯೇಕ ದಾಖಲೆ ಪುಸ್ತಕಗಳನ್ನು ನಿರ್ವಹಿಸಲಾಗಿದೆ.

### ಮುಂದಿನ ಯೋಜನೆ:

ಗ್ರಾಮ ಪಂಚಾಯತಿ ವ್ಯಾಪ್ತಿಯ ಎಲ್ಲಾ ಮನೆಗಳಿಗೂ ಪೈಪ್ ಕಾಂಪೋಸ್ಟ್ ಅಳವಡಿಸುವ ನಿಟ್ಟಿನಲ್ಲಿ ಗ್ರಾಮ ಪಂಚಾಯತಿ ಪ್ರಯತ್ನ ಸಾಗಿದೆ. ಹೊಸ ಮನೆಗಳಿಗೆ ಡೋರ್ ನಂಬರ್ ಹಾಗೂ ವಿದ್ಯುತ್ ಎನ್‌ಓಸಿ ನೀಡುವ ಸಂದರ್ಭ ಪೈಪ್ ಕಾಂಪೋಸ್ಟ್ ಅಳವಡಿಕೆ ಬಗ್ಗೆ ಪ್ರತಿ ಕುಟುಂಬದಿಂದ ಕಡ್ಡಾಯ ರೂ.550 ಪಡೆದುಕೊಂಡು ಪೈಪ್ ಕಾಂಪೋಸ್ಟ್ ಅಳವಡಿಸಿಕೊಳ್ಳುವ ಬಗ್ಗೆ ಕ್ರಮ ಕೈಗೊಂಡಿದೆ. ದ್ರವ ತ್ಯಾಜ್ಯ ನಿರ್ವಹಣೆ ಬಗ್ಗೆ ಗ್ರಾಮ ಪಂಚಾಯತಿ ಆಸಕ್ತಿ ವಹಿಸಿದ್ದು ಕಟ್ಟೆಗುಡ್ಡೆ ಎಂಬಲ್ಲಿ ಉದ್ಯೋಗ ಖಾತರಿ ಮೂಲಕ ಮನೆ ಮನೆ Soak pit ರಚನೆ ಮಾಡುವ ಬಗ್ಗೆ ಚರ್ಚೆ ನಡೆಸಿದೆ. ■

ಲೇಖನ




ಶರತಕುಮಾರ ಅಭಿಮಾನ

ಪಂಚಾಯತ್ ಅಭಿವೃದ್ಧಿ ಅಧಿಕಾರಿ
ಗ್ರಾ.ಪಂ. ಜಂಬಗಿ
ತಾ॥ ಔರಾದ ಜಿ॥ ಬೀದರ.


**ಚಿತ್ರದುರ್ಗದ ಲಾವಣ್ಯ, ಕೊಪ್ಪಳದ ಮಲಮ್ಮರಂತಹ ಧೀರ ಕಂದಮ್ಮಗಳ ದಾರಿಯಲ್ಲಿ ಸಾಗುತ್ತಿರುವ ಈ ಪುಟ್ಟ ಸ್ವಚ್ಛಭಾರತದ ರಾಯಭಾರಿ "ಯುಕ್ತಿ ಅರಳಿ" ಇನ್ನಷ್ಟು ಹೊಸ ಹಾಗೂ ವಿನೂತನ ಕಾರ್ಯಕ್ರಮಗಳಿಗೆ ಮುನ್ನುಡಿ ಬರೆಯಲು ಸಜ್ಜಾಗಿದ್ದಾಳೆ, ತನ್ಮೂಲಕ ಬೀದರ ಜಿಲ್ಲೆಯ ಗ್ರಾಮಗಳು ಸ್ವಚ್ಛ ಸುಂದರ ಹಳ್ಳಿಗಳಾಗಿ ಬಯಲು ಬಹಿರ್ದೆಶೆ ಮುಕ್ತ ಗ್ರಾಮಗಳಾಗಲು ಶ್ರಮಿಸುತ್ತಾ ತನ್ನ ಅಳಿಲು ಸೇವೆ ಸಲ್ಲಿಸುತ್ತಿದ್ದಾಳೆ.**

# ಸ್ವಚ್ಛ ಭಾರತದ ಪುಟ್ಟ ರಾಯಭಾರಿ "ಯುಕ್ತಿ ಅರಳಿ"

ಎಲ್ಲಿ ಸ್ವಚ್ಛತೆಯಿದೆಯೋ ಅಲ್ಲಿ ಆರೋಗ್ಯವಿದೇ, ನಮ್ಮ ಆರೋಗ್ಯಕ್ಕಾಗಿ ಶೌಚಾಲಯ ಕಟ್ಟಿಸೋಣ, ನಮ್ಮ ತಂಗಿ, ತಾಯಂದಿರ ಮಾನ ಉಳಿಸೋಣ, ಶೌಚಾಲಯ ಕಟ್ಟಿಸಿಕೊಂಡು ಅನೇಕ ರೋಗರುಜಿನಗಳಿಂದ, ಹುಳು ಜಂತುಗಳ ಕಾಟದಿಂದ ಪಾರಾಗೋಣ.

ನಮ್ಮ ರಾಷ್ಟ್ರಪೀತ ಗಾಂಧೀಜಿಯವರ ಕನಸು ನನಸು ಮಾಡೋಣ ಬನ್ನಿ ನಾವೆಲ್ಲ ಸ್ವಚ್ಛ ಭಾರತವನ್ನಾಗಿಸಲು ಕೈಕಟ್ಟಿ ಕೆಲಸ ಮಾಡೋಣ ಎಂಬಂತಹ ಮಾತುಗಳು ಈ ದಿನಗಳಲ್ಲಿ ಬೀದರ ಜಿಲ್ಲೆಯ ಎಲ್ಲ ಹಳ್ಳಿಗಳಲ್ಲಿ ಸಂಜೆ ವೇಳೆಗೆ ಕೇಳಿ ಬರುತ್ತಿರುವುದು ಜನಜನೀತ.

ಇಂತಹ ಬುದ್ಧಿವಾದ ಜೊತೆಗೆ ಜಾಗೃತಿಯ ಮಾತುಗಳನ್ನಾಡುತ್ತಿರುವುದು ಯಾರೋ ಭಾಷಣ ಕಾರರಲ್ಲ, ಸಾಹಿತಿಗಳಂತೂ ಅಲ್ಲವೆ ಅಲ್ಲ, ಅದು ಯಾರಂದರೆ ಕೇವಲ 4 ವರ್ಷದ ಪುಟ್ಟ ಹುಡುಗಿ **"ಯುಕ್ತಿ ಅರಳಿ"**



ಇವಳು ಸ್ವಚ್ಛ ಭಾರತ ಮಿಷನ್ ಬೀದರ್ ಜಿಲ್ಲಾ ನೋಡಲ್ ಅಧಿಕಾರಿಗಳಾದ ಡಾ.ಗೌತಮ ಅರಳಿರವರ ಸುಪುತ್ರಿ, ಡಾ. ಗೌತಮ ಅರಳಿರವರು ದಿನಾಲು ಒಂದಲ್ಲ ಒಂದು ಹಳ್ಳಿ / ಗ್ರಾಮಗಳಿಗೆ ತೆರಳಿ ಶೌಚಾಲಯದ ನಿರ್ಮಾಣದ ಪದ್ಧತಿ, ಶೌಚಾಲಯ ಉಪಯುಕ್ತತೆ ಬಗ್ಗೆ ಜಾಗೃತಿ ಮೂಡಿಸುತ್ತಿರುತ್ತಾರೆ. ಜಿಲ್ಲೆಯ ಹಳ್ಳಿಗಳಲ್ಲಿ ಕ್ರಮಿಸಿ ಅನೇಕ ಜಾಗೃತಿ ಜಾತಾ, ಕಾರ್ಯಕ್ರಮಗಳನ್ನು ಜಿಲ್ಲಾ ಪಂಚಾಯತಿಯಿಂದ ಯಶಸ್ವಿಯಾಗಿ ಆಯೋಜಿಸಿ, ಸನ್ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ರವರ ಹಾಗೂ ರಾಮರಾಜ್ಯದ ಕನಸನ್ನು ನನಸಾಗಿಸುತ್ತಿರುವ ನಮ್ಮ ಹೆಮ್ಮೆಯ ವಿಷಯ. ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಶ್ರೀ ಎಚ್.ಕೆ.ಪಾಟೀಲ್‌ರವರ ಆಶಯದಂತೆ ಎರಡು ಗ್ರಾಮ ಪಂಚಾಯಿತಿಗಳನ್ನು ಬಯಲು ಬಹಿರ್ದೆಸೆ ಮುಕ್ತ ಗ್ರಾಮ ಪಂಚಾಯಿತಿಗಳನ್ನಾಗಿ ಮಾಡಲು ಮಾರ್ಗದರ್ಶನದ ಜೊತೆಗೆ ಸೂಕ್ತ ನಿರ್ದೇಶನವನ್ನು ನೀಡುತ್ತಾ,



ಜಿಲ್ಲೆಯಲ್ಲಿ ಇನ್ನು ಅನೇಕ ಗ್ರಾಮಗಳು (ಓಡಿಎಫ್) ಬಯಲು ಬಹಿರ್ದೆಶೆ ಮುಕ್ತ ಗ್ರಾಮಗಳಾಗಿ ಘೋಷಿಸಲು ಹಗಲಿರುಳು ಶ್ರಮಿಸುತ್ತಿದ್ದಾರೆ, ಅವರ ಈ ಪ್ರಯತ್ನವನ್ನು ಕಂಡು ಮಗಳಾದ ಪುಟ್ಟ ಹುಡುಗಿ "ಯುಕ್ತ ಅರಳಿ" ತಾನು ಕೂಡ ಈ ಕಾರ್ಯದಲ್ಲಿ ಭಾಗವಹಿಸಬೇಕೆಂದು ಪ್ರತಿ ದಿನ ಜನರಿಗೆ ಸ್ವಚ್ಛತೆಯ ಮಹತ್ವ, ಶೌಚಾಲಯ ನಿರ್ಮಾಣದಿಂದಾಗುವ ಉಪಯೋಗಗಳ ಬಗ್ಗೆ ಅರಳು ಹುರಿದಂತೆ ಮಾತನಾಡಿ ಸ್ವಚ್ಛ ಭಾರತ ಮಿಷನ್‌ನ ಯಶಸ್ವಿಗೆ ತನ್ನ ಅಳಿಲು ಸೇವೆ ಸಲ್ಲಿಸುತ್ತಿರುತ್ತಾಳೆ.

ಬೀದರ್ ಜಿಲ್ಲೆಯ ಚಿಂತಾಕಿ, ಜಂಬಗಿ, ಶೆಂಬೆಳ್ಳಿ, ಚಾಂಗಲೇರಾ, ಜನವಾಡ, ಚಿಮಕೋಡ ಗ್ರಾಮ ಪಂಚಾಯತಿಗಳಲ್ಲಿ ಜಾಗೃತಿ ಅರಿವು ಮೂಡಿಸವಲ್ಲಿ ಯಶಸ್ವಿಯಾಗಿದ್ದಾಳೆ.



## "ನಿರ್ಮಲ ನಡೆ" ವಿನೂತನ ಹೆಜ್ಜೆ:

ಬೀದರ್ ಜಿಲ್ಲೆಯ ಔರಾದ ತಾಲೂಕಿನ ಜಂಬಗಿ ಗ್ರಾಮ ಪಂಚಾಯತಿಯಿಂದ ಶೌಚಾಲಯ ನಿರ್ಮಿಸಿ ಇತರರಿಗೆ ಜಾಗೃತಿ ಮೂಡಿಸುತ್ತಿರುವ ಗ್ರಾಮಸ್ಥರ ಮನೆ ಮನೆಗೆ ತೆರಳಿ ಹೂ ಹಾರಗಳಿಂದ ಸನ್ಮಾನಿಸಿ ಗೌರವಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಪಂಚಾಯತಿ ಅಭಿವೃದ್ಧಿ ಅಧಿಕಾರಿ ಶ್ರೀ ಶರತಕುಮಾರ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಶ್ರೀ ವಿಜಯಕುಮಾರ ಪಾಟೀಲ್, ಉಪಾಧ್ಯಕ್ಷರಾದ ಶ್ರೀಮತಿ ಲಕ್ಷ್ಮಿಬಾಯಿ, ತಾಲ್ಲೂಕು ಪಂಚಾಯತ ಸದಸ್ಯರಾದ ಶ್ರೀ ದಿಗಂಬರ ಮಾಲೆ, ವಿಶ್ವನಾಥ, ಆನಂದ, ಅಂಬಾದಾಸ, ಶಿವಾಜಿ, ರವರನ್ನೊಳಗೊಂಡ ಈ ನಿರ್ಮಲ ನಡೆ ನಿರ್ಮಿಸಿದವರ ಕಡೆ ಎಂಬ ವಿನೂತನ ಕಾರ್ಯಕ್ರಮಕ್ಕೆ ಸ್ವತಃ ಯುಕ್ತಿ ಅರಳಿ ಚಾಲನೆ ನೀಡಿ ಜಮಗಿ ಗ್ರಾಮದಲ್ಲಿ ಮನೆ ಮನೆ ತಿರುಗಿ ಫಲಾನುಭವಿಗಳನ್ನು ಸನ್ಮಾನಿಸಿದ್ದು ವಿಶೇಷ, ಚಿಕ್ಕ ಮಗು ತಮ್ಮ ಮನೆಗೆ ಆಗಮಿಸಿ ಸನ್ಮಾನಿಸಿದಾಗ ಅವರ ಕಣ್ಣಲ್ಲಿ ಧನ್ಯತಾ ಭಾವ ಮೂಡಿದಂತು ನಿಜ.

ಚಿತ್ರದುರ್ಗದ ಲಾವಣ್ಯ, ಕೊಪ್ಪಳದ ಮಲಮ್ಮ ರಂತಹ ಧೀರ ಕಂದಮ್ಮಗಳ ದಾರಿಯಲ್ಲಿ ಸಾಗುತ್ತಿರುವ ಈ ಪುಟ್ಟ ಸ್ವಚ್ಛ ಭಾರತದ ರಾಯಭಾರಿ "ಯುಕ್ತಿ ಅರಳಿ" ಇನ್ನಷ್ಟು ಹೊಸ ಹಾಗೂ ವಿನೂತನ ಕಾರ್ಯಕ್ರಮಗಳಿಗೆ ಮುನ್ನುಡಿ ಬರೆಯಲು ಸಜ್ಜಾಗಿದ್ದಾಳೆ, ತನ್ಮೂಲಕ ಬೀದರ್ ಜಿಲ್ಲೆಯ ಗ್ರಾಮಗಳು ಸ್ವಚ್ಛ ಸುಂದರ ಹಳ್ಳಿಗಳಾಗಿ ಬಯಲು ಬಹಿರ್ದೆಸೆ ಮುಕ್ತ ಗ್ರಾಮಗಳಾಗಲು ಶ್ರಮಿಸುತ್ತಾ ತನ್ನ ಅಳಿಲು ಸೇವೆ ಸಲ್ಲಿಸುತ್ತಿದ್ದಾಳೆ.

ಬನ್ನಿ ನಾವೆಲ್ಲ ಈ ಪುಟ್ಟ ಬಾಲಕಿಯಿಂದ ಪ್ರೇರಣೆ ಪಡೆದು ಈ ಪುಣ್ಯ ಕೆಲಸಕ್ಕೆ ಕೈ ಜೋಡಿಸಿ ಸ್ವಚ್ಛ ಭಾರತ ಅಭಿಯಾನವನ್ನು ಯಶಸ್ವಿಯಾಗಿಸೋಣ ಗಾಂಧಿಜಿಯವರ ಗ್ರಾಮ ಸ್ವರಾಜ್ಯ ಕನಸನ್ನು ಕರ್ನಾಟಕದಲ್ಲಿ ನನಸಾಗಿಸೋಣ.

ಜೈ ಸ್ವಚ್ಛತೆ ಜೈ ಪಂಚಾಯತ್ ರಾಜ್

■



ಲೇಖನ



ಕೃಷ್ಣಪ್ಪ

# “ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ”

**ಭಾರತ ಹಳ್ಳಿಗಳ ದೇಶ ಬಹುತೇಕ ಭಾರತೀಯರು ಹಳ್ಳಿಗಳಲ್ಲಿ ವಾಸಿಸುತ್ತಿದ್ದಾರೆ. ಭಾರತದ ಏಳಿಗೆ ಗ್ರಾಮದ ಪ್ರತಿಯೊಬ್ಬರ ಆರೋಗ್ಯ ಮತ್ತು ಆರ್ಥಿಕ ಸ್ಥಿತಿಯನ್ನು ಅವಲಂಬಿಸಿರುತ್ತದೆ.**

ನೀರು ಅತ್ಯಮೂಲ್ಯವಾದ ಸಂಪನ್ಮೂಲ. ನೀರು ಜಗತ್ತಿನ ಎಲ್ಲಾ ಪ್ರಾಣಿ, ಪಕ್ಷಿ, ಸಕಲ ಜೀವರಾಶಿಗಳಿಗೂ ಮೂಲಾಧಾರ ನೀರಿಲ್ಲದೆ ಯಾವ ಜೀವರಾಶಿಯೂ ಬದುಕಲಾರದು. ಸುರಕ್ಷಿತ ನೀರು ಸರಬರಾಜು ಮತ್ತು ನೈರ್ಮಲ್ಯ ಸೌಲಭ್ಯಗಳು ಗ್ರಾಮೀಣ ಪ್ರದೇಶದ ಜನರ ಆರೋಗ್ಯ ಮಟ್ಟವನ್ನು ಹೆಚ್ಚಿಸುತ್ತದೆ. ಸ್ವಾತಂತ್ರ್ಯ ಬಂದ ನಂತರ ಭಾರತ ಸರ್ಕಾರ / ಕರ್ನಾಟಕ ಸರ್ಕಾರವು ಗ್ರಾಮೀಣ ಜನರಿಗೆ ಶುದ್ಧ ಹಾಗೂ ಸುರಕ್ಷಿತ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಸೌಲಭ್ಯಗಳನ್ನು ಒದಗಿಸಲು ಹೆಚ್ಚಿನ ಆದ್ಯತೆಯನ್ನು ನೀಡುತ್ತಿದೆ. ಭಾರತ ಹಳ್ಳಿಗಳ ದೇಶ ಬಹುತೇಕ ಭಾರತೀಯರು ಹಳ್ಳಿಗಳಲ್ಲಿ ವಾಸಿಸುತ್ತಿದ್ದಾರೆ. ಭಾರತದ ಏಳಿಗೆ ಗ್ರಾಮದ ಪ್ರತಿಯೊಬ್ಬರ ಆರೋಗ್ಯ ಮತ್ತು ಆರ್ಥಿಕ ಸ್ಥಿತಿಯನ್ನು ಅವಲಂಬಿಸಿರುತ್ತದೆ. ಈ ದೃಷ್ಟಿಯಿಂದ ಗ್ರಾಮಗಳಲ್ಲಿ ವಾಸಿಸುತ್ತಿರುವವರಿಗೆ ಶುದ್ಧವಾದ ಕುಡಿಯುವ ನೀರು ಮತ್ತು ನೈರ್ಮಲ್ಯ ವ್ಯವಸ್ಥೆಗಳನ್ನು ನೀಡಬೇಕಾಗಿರುತ್ತದೆ. ಶುದ್ಧವಾದ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವ್ಯವಸ್ಥೆಗಳನ್ನು ನೀಡುವ ಮೂಲಕ ಆರೋಗ್ಯವಂತ ಸಮಾಜ ನಿರ್ಮಾಣ ಬಹಳ ಅಗತ್ಯವಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಲಭ್ಯತೆಯ ಸಮಸ್ಯೆ ಒಂದೆಡೆಯಾದರೆ ನೀರು ಸರಬರಾಜು ವ್ಯವಸ್ಥೆಗಳ ಸಮರ್ಪಕ ನಿರ್ವಹಣೆ ಮತ್ತೊಂದು ಸಮಸ್ಯೆಯಾಗಿದೆ.

ಉತ್ತಮ ಆರೋಗ್ಯದ ಮೂಲ ಸೂತ್ರವೆಂದರೆ ಶುದ್ಧ ಕುಡಿಯುವ ನೀರು ಮತ್ತು ಉತ್ತಮವಾದ ನೈರ್ಮಲ್ಯ ವ್ಯವಸ್ಥೆಯನ್ನು ಹೊಂದಿರುವುದು. ನಮ್ಮ ದೇಶದ ಗ್ರಾಮೀಣ ಪ್ರದೇಶಗಳಲ್ಲಿ ನೈರ್ಮಲ್ಯದ ಸೌಲಭ್ಯಗಳನ್ನು ಕಲ್ಪಿಸುವಲ್ಲಿ ಸರ್ಕಾರದ ಹಲವಾರು ಪ್ರಯತ್ನಗಳ ನಡುವೆಯೂ, ನೈರ್ಮಲ್ಯ ವ್ಯವಸ್ಥೆಗಳ ಪರಿಸ್ಥಿತಿ ಇನ್ನೂ ಗಣನೀಯವಾಗಿ ಸುಧಾರಿಸಬೇಕಿದೆ. ನೀರು ಮತ್ತು ನೈರ್ಮಲ್ಯ ಒಂದೇ ನಾಣ್ಯದ ಎರಡು ಮುಖಗಳು. ಯಾವಾಗಲೂ ಇವು ಒಂದಕ್ಕೊಂದು ಪೂರಕವಾಗಿ ಕೆಲಸ ಮಾಡುತ್ತಿರುತ್ತವೆ. ಮಾನವನಿಗೆ ಬರುವ ಒಟ್ಟಾರೆ ಕಾಯಿಲೆಗಳಲ್ಲಿ ಶೇ.80 ರಷ್ಟು ಕಾಯಿಲೆಗಳು ನೇರವಾಗಿ ನೀರು ಮತ್ತು ನೈರ್ಮಲ್ಯಕ್ಕೆ ಸಂಬಂಧಿಸಿದವುಗಳಾಗಿವೆ. ಎಲ್ಲಾ ಹಂತಗಳಲ್ಲಿ ನೈರ್ಮಲ್ಯವನ್ನು ಸರಿಯಾಗಿ ಕಾಪಾಡಿಕೊಳ್ಳದಿದ್ದರೆ, ಹಲವಾರು ರೋಗಗಳು ಬಾದಿಸುತ್ತವೆ.

ಭಾರತದ ಗ್ರಾಮಾಂತರ ಪ್ರದೇಶಗಳ ಸಮುದಾಯದ ಆರೋಗ್ಯ ಸುರಕ್ಷಿತ ಕುಡಿಯುವ ನೀರು, ಉತ್ತಮ ಪರಿಸರ ನೈರ್ಮಲ್ಯ, ವೈಯಕ್ತಿಕ ಮತ್ತು ಕೌಟುಂಬಿಕ ಸ್ವಚ್ಛತೆ ಮೇಲೆ ಅವಲಂಭಿಸಿದೆ. ಈ ನಿಟ್ಟಿನಲ್ಲಿ ರಾಷ್ಟ್ರೀಯ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆಯ ಮಾರ್ಗದರ್ಶನದ ಪ್ರಕಾರ ಕರ್ನಾಟಕ ಸರ್ಕಾರ ಗ್ರಾಮದ ಜನಸಂಖ್ಯೆಯ ಆಧಾರದ ಮೇಲೆ ಕುಡಿಯುವ ನೀರಿನ ಸೌಕರ್ಯಗಳನ್ನು ಒದಗಿಸುತ್ತಿದೆ.

ಗ್ರಾಮಾಂತರ ಪ್ರದೇಶಗಳಲ್ಲಿ ಹರಡುವ ಖಾಯಿಲೆಗಳನ್ನು ಶೇ.80 ಕ್ಕಿಂತಲೂ ಹೆಚ್ಚು ಸುರಕ್ಷಿತ ಕುಡಿಯುವ ನೀರು ಸರಬರಾಜು ಮತ್ತು ಸ್ವಚ್ಛ ಪರಿಸರ ನಿರ್ಮಾಣದಿಂದ ನಿವಾರಿಸಬಹುದಾಗಿದೆ. ಗ್ರಾಮಸ್ಥರ ಆರೋಗ್ಯ ಮಟ್ಟವನ್ನು ಸುಧಾರಿಸಿದರೆ ಅವರ ಆರ್ಥಿಕ ಮಟ್ಟವನ್ನು ಉತ್ತಮಪಡಿಸಲು ಅನುವು ಮಾಡಿದಂತಾಗುವುದು. ಇದು ಕೇವಲ ಸರ್ಕಾರ ಅಥವಾ ಸಂಬಂಧಪಟ್ಟ ಇಲಾಖೆಯಿಂದ ಮಾತ್ರ ಸಾಧ್ಯವಾಗುವುದಿಲ್ಲ.

ಆದುದರಿಂದ, ಗ್ರಾಮ ಪಂಚಾಯತಿಗಳು ಮತ್ತು ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿಗಳು ಮತ್ತು ಸಮುದಾಯ / ಸಾರ್ವಜನಿಕರು ನೀರು ಮತ್ತು ನೈರ್ಮಲ್ಯ ಸೌಕರ್ಯಗಳನ್ನು ಉತ್ತಮವಾಗಿಟ್ಟುಕೊಳ್ಳಲು ಪ್ರಮುಖ ಪಾತ್ರ ವಹಿಸಬೇಕಾಗುತ್ತದೆ.

## "ನೀರು ಮತ್ತು ನೈರ್ಮಲ್ಯದಿಂದ ಆರೋಗ್ಯ ಮತ್ತು ಸಮೃದ್ಧಿ" ಸಮುದಾಯ ಸಹಭಾಗಿತ್ವದಲ್ಲಿ ಕುಡಿಯುವ ನೀರಿನ ಯೋಜನೆಗಳ ಅನುಷ್ಠಾನ:

ಬಹಳ ವರ್ಷಗಳಿಂದ ಸರ್ಕಾರವು ಮಾಲೀಕತ್ವ ಸ್ಥಾನದಲ್ಲಿದ್ದುಕೊಂಡು ಕುಡಿಯುವ ನೀರಿನ ಯೋಜನೆಗಳನ್ನು ರೂಪಿಸಿ, ಅನುಷ್ಠಾನಗೊಳಿಸಿ ನಿರ್ವಹಿಸಿಕೊಂಡು ಬಂದಿದೆ. ಆದರೆ ಈ ಯೋಜನೆಗಳು ಹಲವಾರು ಕಾರಣಗಳಿಂದ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿಲ್ಲ. 80 ರ ದಶಕದಲ್ಲಿ ಸರ್ಕಾರವು ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಲಯದ ಕಾರ್ಯನಿರ್ವಹಣೆಯ ಬಗ್ಗೆ ಒಂದು ಅಧ್ಯಯನವನ್ನು ಕೈಗೊಂಡಿತು. ಈ ಅಧ್ಯಯನದ ಪ್ರಕಾರ ಸಮುದಾಯ ಸಹಭಾಗಿತ್ವದ ಕೊರತೆಯೇ ನೀರು ಸರಬರಾಜು ಮತ್ತು ನೈರ್ಮಲ್ಯ ವಲಯದ ಸಮಸ್ಯೆಗಳಿಗೆ ಪ್ರಮುಖ ಕಾರಣವೆಂಬ ಅಂಶವು ಬೆಳಕಿಗೆ ಬಂದಿತು. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಕರ್ನಾಟಕ ಸರ್ಕಾರವು 90ರ ದಶಕದಲ್ಲಿ ಪ್ರಾಯೋಗಿಕವಾಗಿ ಸಮುದಾಯ ಆಧಾರಿತ ಡ್ಯಾನಿಡಾ ನೆರವಿನ ಜಲನಿಧಿ ಯೋಜನೆ, ನೆದರ್‌ಲ್ಯಾಂಡ್ ನೆರವಿನ ಗ್ರಾಮೀಣ ನೀರು ಸರಬರಾಜು ಯೋಜನೆ, ವಿಶ್ವ ಬ್ಯಾಂಕ್ ನೆರವಿನ ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ಪರಿಸರ ನೈರ್ಮಲ್ಯ ಯೋಜನೆ-1 ಹಾಗೂ ಕೇಂದ್ರ ಸರ್ಕಾರದ ವಲಯ ಸುಧಾರಣಾ ಯೋಜನೆಗಳನ್ನು ಅನುಷ್ಠಾನಗೊಳಿಸಿತು. ಯೋಜನೆಗಳ ಅನುಷ್ಠಾನದ ನಂತರ ಮೌಲ್ಯಮಾಪನ ಮಾಡಿದಾಗ ಕೆಲವು ಉತ್ತಮ ಅಂಶಗಳು ಬೆಳಕಿಗೆ ಬಂತು. ಅವುಗಳು ಯಾವುವೆಂದರೆ ಗ್ರಾಮಸ್ಥರು ಯೋಜನೆಗಳ ಎಲ್ಲಾ ಹಂತಗಳಲ್ಲಿಯೂ ಸಕ್ರಿಯವಾಗಿ ಭಾಗವಹಿಸಿದಲ್ಲಿ ಅತ್ಯುತ್ತಮ ತಾಂತ್ರಿಕತೆಯ ಆಯ್ಕೆ, ನಿಗದಿತ ಸಮಯದಲ್ಲಿ ಉತ್ತಮ ಗುಣಮಟ್ಟದೊಂದಿಗೆ ಯೋಜನೆಯ ಅನುಷ್ಠಾನ ಹಾಗೂ ಸುಸ್ಥಿರವಾಗಿ ಕಾರ್ಯನಿರ್ವಹಿಸಲು ಸಹಕಾರಿಯಾಗುತ್ತದೆ. ಈ ಅಂಶಗಳು ವಲಯ ಸುಧಾರಣೆಗೆ ಒಂದು ಪ್ರಮುಖ ಪ್ರೇರಣೆಯಾಯಿತು. ಈಗ ನಮ್ಮ ರಾಜ್ಯದಲ್ಲಿ ಸಮುದಾಯ ಸಕ್ರಿಯ ಸಹಭಾಗಿತ್ವದೊಂದಿಗೆ ವಿಶ್ವ ಬ್ಯಾಂಕ್ ನೆರವಿನ "ಜಲ ನಿರ್ಮಲ ಯೋಜನೆ", ಕೇಂದ್ರ ಸರ್ಕಾರದ ನೆರವಿನ "ಸ್ವಜಲಧಾರ" ಹಾಗೂ "ಸಂಪೂರ್ಣ ಸ್ವಚ್ಛತೆ ಅಭಿಯಾನ"ಯೋಜನೆಗಳನ್ನುಅನುಷ್ಠಾನಗೊಳಿಸಲಾಗಿದೆ. ಮೇಲ್ಕಂಡ ಎಲ್ಲಾ ಯೋಜನೆಗಳ ಅನುಷ್ಠಾನದಲ್ಲಿ ಗ್ರಾಮ ಪಂಚಾಯಿತಿಗಳು / ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿಗಳು ಕೇಂದ್ರ ಬಿಂದುವಾಗಿದ್ದು, ಸಮುದಾಯದೊಂದಿಗೆ ಯೋಜನೆಗಳ ತಯಾರಿ, ಅನುಷ್ಠಾನ ಮತ್ತು ನಿರ್ವಹಣೆಯ ಸಂಪೂರ್ಣ ಜವಾಬ್ದಾರಿ ಹೊಂದಿರುತ್ತವೆ.

## ನೀರು ಮತ್ತು ಮಹಿಳೆ

ನೀರಿಗೂ ಮತ್ತು ಮಹಿಳೆಯರಿಗೆ ಅವಿನಾಭಾವ ಸಂಬಂಧವಿದೆ. ನೀರು ಎಂದಾಕ್ಷಣ ನಮ್ಮ ಮುಂದೆ ಬರುವುದು ಮಹಿಳೆ. ಸಾಮಾನ್ಯವಾಗಿ ಎಲ್ಲಾ ಕುಟುಂಬಗಳಲ್ಲಿ ನಮ್ಮ ದೈನಂದಿನ ಚಟುವಟಿಕೆಗಳಾದ, ಅಡುಗೆ, ಸ್ನಾನ, ಬಟ್ಟೆ ತೊಳೆಯಲು, ಪಾತ್ರೆ ತೊಳೆಯಲು, ಪಾಯಿಖಾನೆಗೆ ಉಪಯೋಗಿಸಲು, ಕುಡಿಯಲಿಕ್ಕೆ, ದನಕರುಗಳಿಗೆ ಹಾಗೂ ಇನ್ನೂ ಮುಂತಾದ ಅವಶ್ಯಕತೆಗಳಿಗೆ ಅವರವರ ಕುಟುಂಬಗಳಲ್ಲಿರುವ ಸದಸ್ಯರ ಪ್ರಮಾಣಕ್ಕನುಗುಣವಾಗಿ, ಎಷ್ಟು ನೀರು ಬೇಕು ಎಂಬುದನ್ನು ತೀರ್ಮಾನಿಸುವವರು ಮಹಿಳೆಯರು. ಇದು ಮೊದಲಿನಿಂದಲೂ ನಡೆದುಕೊಂಡು ಬಂದಿರುವ ಸಂಪ್ರದಾಯ. ನೀರಿನ ಲಭ್ಯತೆ, ಮೂಲಗಳ ಸುಸ್ಥಿರತೆ, ಹಾಲಿ ಇರುವ ಸ್ಥಿತಿ, ಮುಂದೆ ನೀರಿನಿಂದ ತಲೆದೋರಬಹುದಾದ ಸಮಸ್ಯೆಗಳು ಇನ್ನೂ ಮುಂತಾದವುಗಳ ಬಗ್ಗೆ ಮಹಿಳೆಯರಿಗೆ ಬಹಳ ಸ್ಪಷ್ಟವಾಗಿ ತಿಳಿದಿರುತ್ತದೆ. ಲಭ್ಯವಿರುವ ನೀರನ್ನು ಹೇಗೆ ಅವಶ್ಯಕತೆಗಳಿಗೆ ಅನುಗುಣವಾಗಿ ಆಕೆ ಉಪಯೋಗಿಸುತ್ತಾಳೆಂಬುದನ್ನು ನಾವು ಇಂದು ಅವರಿಂದ ಕಲಿಯುವ ಅವಶ್ಯಕತೆ ಇದೆ.

## "ಗಾಳಿಯ ನಂತರ ಜೀವಕ್ಕೆ ನೀರು ಬೇಕು" ನೀರು ವಲಯದ ಹಾಲಿ ಸ್ಥಿತಿ:

ವಿಶ್ವದಲ್ಲಿ ಮೂರು ಭಾಗ ನೀರು ಹಾಗೂ ಒಂದು ಭಾಗ ಭೂ ಪ್ರದೇಶವಿರುವುದು ನಮ್ಮೆಲ್ಲರಿಗೂ ತಿಳಿದಿರುವ ವಿಷಯವಾಗಿದೆ. ಲಭ್ಯವಿರುವ ನೀರಿನಲ್ಲಿ ಶೇ.97 ರಷ್ಟು ನೀರು ಉಪ್ಪು ನೀರಾಗಿ ಸಮುದ್ರದಲ್ಲಿದೆ. ಶೇ.2 ರಷ್ಟು ನೀರು ಉತ್ತರ ಮತ್ತು ದಕ್ಷಿಣ ಧ್ರುವದಲ್ಲಿ ಮಂಜುಗಡ್ಡೆಯಾಗಿ ನಿಂತಿದೆ ಹಾಗೂ ಇನ್ನುಳಿದ ಶೇ.1 ರಷ್ಟು ನೀರು ಮನುಕುಲ, ಗಿಡಮರ, ಪಶುಪಕ್ಷಿ ಇತ್ಯಾದಿಗಳಿಗೆ ಲಭ್ಯವಿದೆ. ಈ ಶೇ.1 ರಷ್ಟು ನೀರು ವಿಶ್ವದಲ್ಲಿ ಯಾವ ರೀತಿಯಲ್ಲಿ ಬಳಕೆಯಾಗುತ್ತಿದೆಯೆಂದರೆ ಲಭ್ಯವಿರುವ ಶೇ.1 ರಷ್ಟು ನೀರಿನಲ್ಲಿ ಸುಮಾರು 70 ಭಾಗ ಕೃಷಿ ಚಟುವಟಿಕೆಗಳು,

ಸುಮಾರು 20 ಭಾಗ ಕೈಗಾರಿಕೆ ಮತ್ತು ಕಾರ್ಖಾನೆಗಳಿಗೆ ಬಳಕೆಯಾಗುತ್ತಿದೆ ಹಾಗೂ ಸುಮಾರು 10 ಭಾಗ ಮಾತ್ರ ಮನುಕುಲಕ್ಕೆ ಕುಡಿಯುವುದಕ್ಕೆ ಮತ್ತು ಗೃಹ ಬಳಕೆಗೆ ಉಪಯೋಗವಾಗುತ್ತಿದೆ.

## ನೀರಿನ ಲಭ್ಯತೆಯಲ್ಲಿ ಭಾರೀ ಇಳಿಮುಖ:

70ರ ದಶಕದಲ್ಲಿ ಹೇರಳವಾಗಿ ಲಭ್ಯವಿದ್ದ ಈ ಮೂಲಭೂತ ಸಂಪನ್ಮೂಲ ಇಂದು ನಮ್ಮಿಂದ ಬಹು ದೂರ ಹೋಗಿ ನಾವು ಜಲಕ್ಷಾಮವನ್ನು ಎದುರಿಸುವ ಸ್ಥಿತಿಯಲ್ಲಿದ್ದೇವೆ. ನೀರಿನ ಸಂಪನ್ಮೂಲಗಳಾದ ಕೆರೆ, ಬಾವಿ, ಹಳ್ಳ, ಕೊಳ್ಳ ಮತ್ತು ನದಿಗಳು ದಿನೇ ದಿನೇ ಬತ್ತಿಹೋಗುತ್ತಿವೆ. 1975 ರವರೆಗೆ ನಮ್ಮ ಗ್ರಾಮಗಳ ಹೆಚ್ಚಿನ ಸೇದು ಬಾವಿಗಳಲ್ಲಿ ನೀರು 10–40 ಅಡಿಗಳಷ್ಟು ಆಳದಲ್ಲಿ ಲಭ್ಯವಿತ್ತು. ಸೇದುಬಾವಿ, ಹಗ್ಗ, ರಾಟೆ ಒಳಗೊಂಡ ಸರಳ ವ್ಯವಸ್ಥೆಯಿತ್ತು. ದಿನ ಕಳೆದಂತೆ ಜನಸಂಖ್ಯೆಯಲ್ಲಿ ಭಾರಿ ಹೆಚ್ಚಳ, ನಗರೀಕರಣ, ಆಧುನೀಕರಣ, ಕೈಗಾರೀಕರಣ ಹಾಗೂ ಜನರ ಜೀವನ ಮಟ್ಟದಲ್ಲಿ ಸುಧಾರಣೆ ಆದಂತೆ ನೀರಿನ ಬಳಕೆಯ ಪ್ರಮಾಣವು ಹೆಚ್ಚಾಗತೊಡಗಿತು. 80ರ ದಶಕದ ಪ್ರಾರಂಭದಲ್ಲಿ ನಮ್ಮ ರಾಜ್ಯದಲ್ಲಿ ಕೊಳವೆ ಬಾವಿ ಕೊರೆದಾಗ 40–50 ಅಡಿ ಆಳದಲ್ಲಿ ನೀರು ಸಿಗುತ್ತಿತ್ತು. ಮುಂದುವರಿದು, 90ರ ದಶಕದಲ್ಲಿ ಅಂತರ್ಜಲದ ಮಟ್ಟ 150 ಅಡಿಯಿಂದ 300 ಅಡಿ ಇಳಿಯಿತು. 2006 ರಲ್ಲಿ ಅಂತರ್ಜಲ ಮಟ್ಟ ಇನ್ನೂ ಕುಸಿದು 450 ರಿಂದ 600 ಅಡಿ ಆಳ ಕೊಳವೆ ಬಾವಿ ಕೊರೆದಲ್ಲಿ ನೀರು ಸಿಗದಂತಹ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಸಾವಿರಾರು ವರ್ಷಗಳಿಂದ ಸಂಗ್ರಹಣೆಯಾದ ಅಂತರ್ಜಲವನ್ನು ನಮ್ಮ ಬೇಡಿಕೆಯನ್ನು ಪೂರೈಸಿಕೊಳ್ಳಲು ಭೂಮಿಯ ಎದೆಯನ್ನು ಸೀಳಿ (ಕೊಳವೆ ಬಾವಿ ಮೂಲಕ) ಅಂತರ್ಜಲವನ್ನು ಬರಿದು ಮಾಡುತ್ತಿದ್ದೇವೆ. 2002ನೇ ಸಾಲಿನಲ್ಲಿ ಹಮ್ಮಿಕೊಂಡ ಸಮೀಕ್ಷೆಯ ಪ್ರಕಾರ ದೇಶದ 1.48 ಲಕ್ಷ ಗ್ರಾಮಗಳಲ್ಲಿ ಕುಡಿಯುವ ನೀರಿನ ಮೂಲಗಳು ಬತ್ತಿ ಹೋಗಿವೆ. ಕೋಲಾರ ಜಿಲ್ಲೆಯಲ್ಲಂತು ಪ್ರಸ್ತುತ 1000 ಅಡಿಯಿಂದ 1500 ಅಡಿಯವರೆಗೆ ಅಂತರ್ಜಲಮಟ್ಟ ಕುಸಿದಿದೆ.

"ನೀರಿನ ಉಳಿತಾದಿಂದ ಜಗದ ಉಳಿವು, ಅಪವ್ಯಯದಿಂದ ಅಳಿವು"

## ಕಲುಷಿತ ನೀರಿನಿಂದ ಬರುವ ರೋಗಗಳು:–

ಕುಡಿಯುವ ನೀರು ಮನುಷ್ಯನಿಗೆ ಸುರಕ್ಷಿತವಾಗಿರಬೇಕು. ನೀರು ಕಲುಷಿತವಾದರೆ ಅನೇಕ ರೋಗಗಳು ಹರಡುತ್ತವೆ ಎಂಬ ಅಂಶ ಗ್ರಾಮೀಣ ಪ್ರದೇಶಗಳಲ್ಲಿ ಬಹಳ ಜನರಿಗೆ ತಿಳಿದಿರುವುದಿಲ್ಲ. ನೀರಿನಿಂದ ಹರಡುವ ರೋಗಗಳು:


- ಅತಿಸಾರ (ವಾಂತಿ ಭೇದಿ)
- ಕಾಲರ
- ರಕ್ತಭೇದಿ
- ಆಮಶಂಕೆ
- ಟೈಫಾಯ್ಡ್
- ಕಾಮಾಲೆ (ಜಾಂಡಿಸ್)
- ಪೋಲಿಯೊ
- ಚರ್ಮರೋಗ
- ಜಂತುಹುಳು, ಇತ್ಯಾದಿ





## ಕುಡಿಯುವ ನೀರು ಹೇಗೆ ಕಲುಷಿತವಾಗುವುದು?

- ನೀರಿನ ಮೂಲಗಳ ಹತ್ತಿರ ಮಲವಿಸರ್ಜನೆ ಮಾಡುವುದರಿಂದ.
- ದನಕರುಗಳನ್ನು, ಪಾತ್ರೆಗಳನ್ನು, ಬಟ್ಟೆಗಳನ್ನು ನೀರಿನ ಮೂಲಗಳ ಹತ್ತಿರ ತೊಳೆಯುವುದರಿಂದ.
- ಮಲವಿಸರ್ಜನೆಯ ನಂತರ ನೀರಿನ ಮೂಲಗಳಾದ ನದಿ, ಹಳ್ಳ, ಕೆರೆ, ಬಾವಿ, ಕೊಳವೆ ಬಾವಿಗಳ ಹತ್ತಿರವೇ ತೊಳೆಯುವುದರಿಂದ.



- ಹೊಲಸಾದ ಕೈಗಳನ್ನು ಕುಡಿಯುವ ನೀರಿನಲ್ಲಿ ಅದ್ದುವುದರಿಂದ.
- ನಳದ ಪೈಪುಗಳು ಒಡೆದು ಗಟಾರದ ನೀರು ಸೇರಿದಾಗ.
- ಕುಡಿಯುವ ನೀರು ಶೇಖರಿಸುವ ಪಾತ್ರೆಗಳನ್ನು ಮುಚ್ಚದೆ ಇಡುವುದರಿಂದ.
- ಕೊಳೆತ ಕಸ ಕಡ್ಡಿಗಳು, ಬಯಲಿನಲ್ಲಿರುವ ಮಲವು ನೀರಿಗೆ ಸೇರುವುದರಿಂದ.
- ಮಣ್ಣಿನಲ್ಲಿರುವ ಜಂತು ಹುಳುಗಳ ಮೊಟ್ಟೆಗಳು ಧೂಳಿನ ಮೂಲಕ ನೀರಿಗೆ ಸೇರಿದಾಗ.
- ನೆಲಮಟ್ಟದಿಂದ ತಗ್ಗು / ಗುಂಡಿಗಳನ್ನು ಮಾಡಿ ನೀರು ಸಂಗ್ರಹಿಸುವುದರಿಂದ.

**"ಶೌಚಾಲಯ ಬಳಸಿ ಆರೋಗ್ಯ ಬೆಳಸಿ"**

## ರೋಗಗಳನ್ನು ತಡೆಗಟ್ಟುವುದು ಹೇಗೆ?

- ಕುಡಿಯುವ ನೀರಿನ ಮೂಲಗಳಾದ ನದಿ, ಹಳ್ಳ, ಕೆರೆ, ಬಾವಿ, ಕೊಳವೆ ಬಾವಿಗಳ ಸುತ್ತ-ಮುತ್ತ ಮಲವಿಸರ್ಜನೆ ಮಾಡಬಾರದು.
- ನೀರಿನ ಟ್ಯಾಂಕ್‌ನ್ನು ಸ್ವಚ್ಛಗೊಳಿಸಿ ನೀರಿಗೆ ನಿಗದಿತ ಪ್ರಮಾಣದಲ್ಲಿ ಬ್ಲೀಚಿಂಗ್ ಪುಡಿಯನ್ನು ಹಾಕಬೇಕು.
- ಕೈಪಂಪಿನ / ಬೀದಿ ನಳದ ಸುತ್ತ ಮುತ್ತ ದನಕರುಗಳನ್ನು ಪಾತ್ರೆಗಳನ್ನು, ಬಟ್ಟೆಗಳನ್ನು ತೊಳೆಯಬಾರದು.
- ಮಕ್ಕಳು ಮಲವಿಸರ್ಜನೆ ಮಾಡಿದ ನಂತರ ಕೈಪಂಪಿನ / ಬೀದಿ ನಳದ ಹತ್ತಿರ ತೊಳೆಯಬಾರದು.
- ಬೋರ್‌ವೆಲ್, ವಾಲ್ವ್ ಛೇಂಬರ್‌ಗಳು, ಕೈಪಂಪು / ಬೀದಿ ನಳಗಳ ಹತ್ತಿರ ನೀರು ನಿಂತು ಹೊಲಸಾಗದಂತೆ ನೈರ್ಮಲ್ಯ ಕಾಪಾಡಬೇಕು.
- ನೀರನ್ನು ಸಂಗ್ರಹಿಸುವ ಪಾತ್ರೆಗಳು ಸ್ವಚ್ಛವಾಗಿದ್ದು, ನೀರಿಗೆ ಧೂಳು ಸೇರದಂತೆ ಯಾವಾಗಲೂ ಪಾತ್ರೆಗಳನ್ನು ಮುಚ್ಚಿರಬೇಕು.
- ನೀರಿನ ಪಾತ್ರೆಗಳನ್ನು ನೆಲಮಟ್ಟಕ್ಕಿಂತ ಎತ್ತರದ ಸ್ಥಳದಲ್ಲಿ ಇರಿಸಬೇಕು. ಇದರಿಂದ ಸಣ್ಣ ಮಕ್ಕಳು, ಇಲ್ಲವೇ ಸಾಕು ಪ್ರಾಣಿಗಳಿಂದ ನೀರು ಹೊಲಸಾಗದಂತೆ ತಪ್ಪಿಸಬಹುದು.

ಕುಡಿಯುವ ನೀರನ್ನು ಮಿತವ್ಯಯದಿಂದ ಬಳಸದಿದ್ದರೆ ಮುಂದೊಂದು ದಿನ ಈ ದೇಶ ಬೃಹತ್ ಸಮಸ್ಯೆಯನ್ನು ಎದುರಿಸಬೇಕಾದೀತು. ಆದ್ದರಿಂದ ಜಲಮೂಲಗಳ ಸಂರಕ್ಷಣೆ, ನೀರಿನ ಮಿತ ಬಳಕೆ, ಅಂತರ್ಜಲ ಪುನಶ್ಚೇತನ, ಮಳೆ ನೀರಿನ ಕೊಯ್ಲು (ಸಂರಕ್ಷಣೆ) ಮತ್ತು ಪರಿಸರ ಸಂರಕ್ಷಣೆ ಕುರಿತು ಸಾರ್ವಜನಿಕರಿಗೆ, ಸಮುದಾಯ ಆದಾರಿತ ಸಂಘ ಸಂಸ್ಥೆಗಳಿಗೆ ಮತ್ತು ಶಾಲಾ ಮಕ್ಕಳಿಗೆ ಅರಿವು ಮೂಡಿಸುವ ಮೂಲಕ ನೀರನ್ನು ಸಂರಕ್ಷಿಸಬಹುದಾಗಿದೆ. ಹಾಗೂ ಗ್ರಾಮಗಳ ಸ್ವಚ್ಛತೆಗೆ ಹೆಚ್ಚು ಗಮನ ಹರಿಸುವುದು ಮತ್ತು ಪ್ರತಿ ಮನೆಗೆ ಶೌಚಾಲಯಗಳ ನಿರ್ಮಾಣ ಮತ್ತು ಬಳಕೆಯಿಂದಾಗಿ ಬಯಲು ಬಹಿರ್ದೆಸೆ ಮುಕ್ತ ಗ್ರಾಮಗಳಾಗಿ ಪರಿವರ್ತಿಸಿ ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಹೆಚ್ಚಿನ ಒತ್ತು ನೀಡಬೇಕಾಗಿದೆ.

■

ಲೇಖನ



ನಿಂಗೇಗೌಡ

# ಕರ್ನಾಟಕದಲ್ಲಿ ಪಂಚಾಯತ್ ರಾಜ್ ಅಧಿನಿಯಮ 1993ಕ್ಕೆ ಇದುವರೆವಿಗೂ ನಡೆಸಲಾಗಿರುವ ತಿದ್ದುಪಡಿಗಳ ಬಗ್ಗೆ ಸಂಕ್ಷಿಪ್ತ ಮಾಹಿತಿ

**ಅನುಸೂಚಿ–Iರಲ್ಲಿ ಗ್ರಾಮ ಪಂಚಾಯತಿಯ ಪ್ರಕಾರ್ಯಗಳು, ಅನುಸೂಚಿ–IIರಲ್ಲಿ ತಾಲ್ಲೂಕು ಪಂಚಾಯತಿಯ ಪ್ರಕಾರ್ಯಗಳು, ಅನುಸೂಚಿ–IIIರಲ್ಲಿ ಜಿಲ್ಲಾ ಪಂಚಾಯತಿಯ ಪ್ರಕಾರ್ಯಗಳು ಹಾಗೂ ಅನುಸೂಚಿ–IVರಲ್ಲಿ ಗ್ರಾಮ ಪಂಚಾಯತಿಗಳು ತೆರಿಗೆ ವಿಧಿಸಬಹುದಾದ ಆಸ್ತಿ, ಕಟ್ಟಡ ಮತ್ತೀತರ ಅಂಶಗಳ ಬಗ್ಗೆ ವಿವರಿಸಲಾಗಿದೆ.**

ಭಾರತದ ಸಂವಿಧಾನಕ್ಕೆ 73ನೇ ಹಾಗೂ 74ನೇ ತಿದ್ದುಪಡಿಯನ್ನು ತರಲಾಗಿದ್ದು, ಈ ತಿದ್ದುಪಡಿಗಳಲ್ಲಿ ಸ್ಥಳೀಯ ಆಡಳಿತ ಸಂಸ್ಥೆಗಳನ್ನು ಸಂವಿಧಾನಬದ್ಧವಾಗಿ ಸ್ಥಾಪಿಸಿ ಅವುಗಳಿಗೆ ರಾಜ್ಯ ಸರ್ಕಾರವು ನಿರ್ವಹಿಸುತ್ತಿರುವ ಹಲವಾರು ಯೋಜನೆಗಳನ್ನು ವರ್ಗಾಯಿಸಲು ಅವಕಾಶ ಕಲ್ಪಿಸಿದೆ. 73 ನೇ ತಿದ್ದುಪಡಿಯ ಅನುಗುಣವಾಗಿ ಸಂವಿಧಾನದಲ್ಲಿ ಭಾಗ–9 ಹಾಗೂ 11 ನೇ ಅನುಸೂಚಿಯನ್ನು ಸೇರಿಸಲಾಗಿದೆ. ಅನುಚ್ಛೇದ 243, 243ಎ, 243ಬಿ, 243ಸಿ, 243ಡಿ, 243ಇ, 243ಎಫ್, 243ಜಿ, 243ಹೆಚ್, 243ಐ, 243ಜೆ, 243ಕೆ, 243ಎಲ್, 243ಎಮ್, 243 ಎನ್, 243ಓ ಹಾಗೂ 280ಬಿಬಿ ಗಳನ್ನು ಅಳವಡಿಸಲಾಗಿದೆ. 11ನೇ ಅನುಸೂಚಿಯಲ್ಲಿ ವಿವಿಧ ಇಲಾಖೆಗಳಿಗೆ ಸಂಬಂಧಿಸಿದ 29 ಅಭಿವೃದ್ಧಿ ಕಾರ್ಯಕ್ರಮಗಳನ್ನು ಪಂಚಾಯತ್ ರಾಜ್ ವ್ಯವಸ್ಥೆಯ ಆಡಳಿತಕ್ಕೆ ಮತ್ತು ಅನುಷ್ಠಾನಕ್ಕೆ ವರ್ಗಾಯಿಸಲಾಗಿದೆ. 74ನೇ ತಿದ್ದುಪಡಿಯ ಅನುಸಾರ ಅನುಚ್ಛೇದ 243ಜಡ್‌ಡಿ ಯನ್ನು ಅಳವಡಿಸಲಾಗಿದ್ದು, ಇದರನ್ವಯ ಜಿಲ್ಲೆಯ ಸಮಗ್ರ ಅಭಿವೃದ್ಧಿಗಾಗಿ ಜಿಲ್ಲಾ ಯೋಜನಾ ಸಮಿತಿಗಳನ್ನು ರಚಿಸಬೇಕಾಗಿದೆ. ಸಂವಿಧಾನದ ಅನುಚ್ಛೇದ 243ಸಿ ಅನ್ವಯ ಗ್ರಾಮೀಣ ಪ್ರದೇಶದಲ್ಲಿ 3 ಹಂತದ ಪಂಚಾಯತ್ ರಾಜ್ ವ್ಯವಸ್ಥೆಗಳನ್ನು ಸ್ಥಾಪಿಸಲು ಅವಕಾಶವಿರುತ್ತದೆ.

ಸಂವಿಧಾನದ 73 ನೇ ತಿದ್ದುಪಡಿಗನುಸಾರ ಕರ್ನಾಟಕ ರಾಜ್ಯದಲ್ಲಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ನ್ನು ಜಾರಿಗೊಳಿಸಲಾಗಿರುತ್ತದೆ. ಈ ಅಧಿನಿಯಮವು 18 ಅಧ್ಯಾಯಗಳು ಹಾಗೂ 4 ಅನುಸೂಚಿಗಳನ್ನು ಒಳಗೊಂಡಿರುತ್ತದೆ. ಅಧ್ಯಾಯ–1 (ಪ್ರಕರಣ 1 ಮತ್ತು 2 ರಲ್ಲಿ ಅಧಿನಿಯಮದ ಹೆಸರು ಹಾಗೂ ಅಧಿನಿಯಮದಲ್ಲಿ ಬರುವ ಪದಗಳಿಗೆ ಅರ್ಥವನ್ನು ವಿವರಿಸಲಾಗಿರುತ್ತದೆ), ಅಧ್ಯಾಯ–2 (ಪ್ರಕರಣ 3 ಮತ್ತು 3ಎ ರಲ್ಲಿ ವಾರ್ಡ್ ಸಭಾ ಮತ್ತು ಗ್ರಾಮ ಸಭೆಗಳ ಬಗ್ಗೆ ವಿವರಿಸಲಾಗಿರುತ್ತದೆ), ಅಧ್ಯಾಯ–3(ಪ್ರಕರಣ 4 ರಿಂದ 57 ರಲ್ಲಿ ಗ್ರಾಮ ಪಂಚಾಯತಿಗಳ ಹಾಗೂ ರಚನೆಯ ಬಗ್ಗೆ ವಿವರಿಸಲಾಗಿರುತ್ತದೆ), ಅಧ್ಯಾಯ–4(ಪ್ರಕರಣ 58 ರಿಂದ 110 ರಲ್ಲಿ ಗ್ರಾಮ ಪಂಚಾಯತಿಗಳ ಅಧ್ಯಕ್ಷನ ಮತ್ತು ಉಪಾಧ್ಯಕ್ಷರ ಅಧಿಕಾರಗಳು ಮತ್ತು ಕರ್ತವ್ಯಗಳ ಬಗ್ಗೆ), ಅಧ್ಯಾಯ–5(ಪ್ರಕರಣ 111 ರಿಂದ 113ಎ ರಲ್ಲಿ ಗ್ರಾಮ ಪಂಚಾಯತಿಗಳ ಸಿಬ್ಬಂದಿ ನೇಮಕಾತಿ, ನಿಯಂತ್ರಣ ಹಾಗೂ ವ್ಯವಸ್ಥೆಯ ಬಗ್ಗೆ), ಅಧ್ಯಾಯ–6 (ಪ್ರಕರಣ 114 ರಿಂದ 118 ರಲ್ಲಿ ಪರಿವರ್ತಿತ ಗ್ರಾಮ ಪಂಚಾಯತಿಗಳು(ನಗರ ಪ್ರದೇಶ) ರಚನೆಗಳ ಬಗ್ಗೆ), ಅಧ್ಯಾಯ–7(ಪ್ರಕರಣ 119 ರಿಂದ 154 ರಲ್ಲಿ ತಾಲ್ಲೂಕು ಪಂಚಾಯತಿಯ ರಚನೆ), ಅಧ್ಯಾಯ–8(ಪ್ರಕರಣ 145 ರಿಂದ 154 ರಲ್ಲಿ ತಾಲ್ಲೂಕು ಪಂಚಾಯತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಕರ್ತವ್ಯಗಳು, ತಾಲ್ಲೂಕು ಪಂಚಾಯತಿಯ ಪ್ರಕಾರ್ಯಗಳು), ಅಧ್ಯಾಯ–9(ಪ್ರಕರಣ 155 ರಿಂದ 157 ರಲ್ಲಿ ತಾಲ್ಲೂಕು ಪಂಚಾಯತಿಗಳ ಸಿಬ್ಬಂದಿ ಮತ್ತು ಅಧಿಕಾರಿಗಳ ಜವಾಬ್ದಾರಿಗಳ ಬಗ್ಗೆ), ಅಧ್ಯಾಯ–10(ಪ್ರಕರಣ 158 ರಿಂದ 183 ರಲ್ಲಿ ಜಿಲ್ಲಾ ಪಂಚಾಯತಿಗಳ ರಚನೆ), ಅಧ್ಯಾಯ–11(ಪ್ರಕರಣ 184 ರಿಂದ 195 ರಲ್ಲಿ ಜಿಲ್ಲಾ ಪಂಚಾಯತಿಯ ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ಜಿಲ್ಲಾ

ಪಂಚಾಯತಿಯ ಪ್ರಕಾರ್ಯಗಳ ಬಗ್ಗೆ), ಅಧ್ಯಾಯ–12 (ಪ್ರಕರಣ 196 ರಿಂದ 198 ರಲ್ಲಿ ಜಿಲ್ಲಾ ಪಂಚಾಯತಿಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರ ಬಗ್ಗೆ), ಅಧ್ಯಾಯ–13 (ಪ್ರಕರಣ 199 ರಿಂದ 203 ರಲ್ಲಿ ಗ್ರಾಮ ಪಂಚಾಯತಿಗಳು ತೆರಿಗೆಯನ್ನು ವಿಧಿಸುವ, ವಸೂಲೂ ಮಾಡುವ ಪ್ರಕ್ರಿಯೆಗಳ ಬಗ್ಗೆ), ಅಧ್ಯಾಯ–14 (ಪ್ರಕರಣ 204 ರಿಂದ 208 ರಲ್ಲಿ ಗ್ರಾಮ ಪಂಚಾಯತಿಗಳು ಸ್ಥಳೀಯ ಉಪಕರ ವಿಧಿಸುವ ಬಗ್ಗೆ, ತಾಲ್ಲೂಕು ಜಿಲ್ಲಾ ಪಂಚಾಯತಿ ಹಾಗೂ ಅನುದಾನ ಬಿಡುಗಡೆ ಮಾಡುವ ಬಗ್ಗೆ), ಅಧ್ಯಾಯ–15 (ಪ್ರಕರಣ 209 ರಿಂದ 231 ರಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಆಸ್ತಿ, ಆದಾಯ ಹಾಗೂ ನಿಧಿಗಳ ನಿರ್ವಹಣೆಯ ಬಗ್ಗೆ), ಅಧ್ಯಾಯ–16 (ಪ್ರಕರಣ 237 ರಿಂದ 240 ರಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪರಿವೀಕ್ಷಣೆ, ಮೇಲ್ವೀಚರಣೆ ಮುಂತಾದ ವಿಷಯಗಳ ಬಗ್ಗೆ), ಅಧ್ಯಾಯ–17( ಪ್ರಕರಣ 241 ರಿಂದ 267 ರಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಹಣಕಾಸು ನಿಯಂತ್ರಣ ಮತ್ತು ಲೆಕ್ಕಪರಿಶೋಧನೆಯ ಬಗ್ಗೆ), ಅಧ್ಯಾಯ–18 (ಪ್ರಕರಣ 268 ರಿಂದ 321 ರಲ್ಲಿ ಪಂಚಾಯತಿಗಳ ವಿಸರ್ಜನೆ, ಮೇಲ್ಮನವಿ, ಚುನಾವಣಾ ಆಯೋಗ, ಹಣಕಾಸು ಆಯೋಗ, ಜಿಲ್ಲಾ ಯೋಜನಾ ಸಮಿತಿ, ಪಂಚಾಯತಿ ವ್ಯವಹಾರಗಳ ಬಗ್ಗೆ ಪೋಲೀಸ್ ಅಧಿಕಾರಿಗಳ ಅಧಿಕಾರಗಳು ಮುಂತಾದ ವಿವಿಧ ಸಂಕೀರಣ ವಿಷಯಗಳ ಬಗ್ಗೆ) ವಿವರಿಸಲಾಗಿದೆ.

ಅನುಸೂಚಿ–Iರಲ್ಲಿ ಗ್ರಾಮ ಪಂಚಾಯತಿಯ ಪ್ರಕಾರ್ಯಗಳು, ಅನುಸೂಚಿ–IIರಲ್ಲಿ ತಾಲ್ಲೂಕು ಪಂಚಾಯತಿಯ ಪ್ರಕಾರ್ಯಗಳು, ಅನುಸೂಚಿ–III ರಲ್ಲಿ ಜಿಲ್ಲಾ ಪಂಚಾಯತಿಯ ಪ್ರಕಾರ್ಯಗಳು ಹಾಗೂ ಅನುಸೂಚಿ–IV ರಲ್ಲಿ ಗ್ರಾಮ ಪಂಚಾಯತಿಗಳು ತೆರಿಗೆ ವಿಧಿಸಬಹುದಾದ ಆಸ್ತಿ, ಕಟ್ಟಡ ಮತ್ತೀತರ ಅಂಶಗಳ ಬಗ್ಗೆ ವಿವರಿಸಲಾಗಿದೆ.

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ನ್ನು ದಿನಾಂಕ:18–05–1993 ರಲ್ಲಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದ್ದು, ಅಂದಿನಿಂದ ಜಾರಿಯಲ್ಲಿರುತ್ತದೆ. ಈ ಅಧಿನಿಯಮದ ಪ್ರಕರಣಗಳನ್ನು ಅಗಿಂದ್ದಾಗಿಯೇ ಅವಶ್ಯಕತೆಗನುಗುಣವಾಗಿ ಹಾಗೂ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಸದೃಡಗೊಳಿಸುವುದಕ್ಕಾಗಿ, ತಿದ್ದುಪಡಿ ಮಾಡಲು ಹಾಗೂ ನಿಯಮಗಳನ್ನು ರಚಿಸಲು ಪ್ರಕರಣ 311 ಮತ್ತು 320 ರಲ್ಲಿ ಅವಕಾಶ ಕಲ್ಪಿಸಲಾಗಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮಕ್ಕೆ ಇಂದಿನವರೆಗೂ 15 ಬಾರಿ ತಿದ್ದುಪಡಿ ಮಾಡಲಾಗಿರುತ್ತದೆ. ಇವುಗಳಲ್ಲಿ 2015–16 ರಂದು ಮಾಡಿರುವ ತಿದ್ದುಪಡಿಯು ಪ್ರಮುಖವಾಗಿರುತ್ತದೆ. 1997ರಲ್ಲಿ ನೇಮಿಸಲಾಗಿದ್ದ, ಶ್ರೀ ಪಿ.ಆರ್.ನಾಯಕ್ ಸಮಿತಿಯ ಶಿಫಾರಸ್ಸಿನ ಮೇರೆಗೆ 82 ಪ್ರಕರಣಗಳಿಗೆ ತಿದ್ದುಪಡಿ ಮಾಡಲಾಗಿದೆ.

ಪ್ರಸ್ತುತ 2015–16 ರಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಸಮಗ್ರವಾಗಿ ಪರಿಶೀಲಿಸಿ ಅಧಿನಿಯಮಗಳಿಗೆ ತಿದ್ದುಪಡಿ ತರಲು ಉನ್ನತ ಮಟ್ಟದ ತಜ್ಞರ ಸಮಿತಿಯನ್ನು ರಚಿಸಲಾಗಿದೆ. ಗ್ರಾಮೀಣ ಜನರ ಜೀವನ ಮಟ್ಟವನ್ನು ಹೆಚ್ಚಿಸಲು, ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು, ಗ್ರಾಮೀಣ ಕರ್ನಾಟಕವನ್ನು ವ್ಯಾಜ್ಯಮುಕ್ತ, ಶೋಷಣೆ ಮುಕ್ತ, ಭಯ ಮುಕ್ತ, ಬಯಲು ಬಹಿರ್ದೆಸೆ ಮುಕ್ತ, ಮಹಿಳೆಯರು ಮತ್ತು ದುರ್ಬಲರ ಸಂರಕ್ಷಣೆಗೆ ಹಾಗೂ ಸ್ವಚ್ಛ ಸಮಾಜದ ಸ್ವಾಸ್ತವನ್ನು ಕಾಪಾಡಲು ಈ ಸಮಿತಿಯು ಸಮಗ್ರ ತಿದ್ದುಪಡಿಗೆ ಶಿಫಾರಸ್ಸು ಮಾಡಿರುತ್ತದೆ.

ಈ ಸಮಿತಿಯ ಶಿಫಾರಸ್ಸಿನಂತೆ 88 ಪ್ರಕರಣಗಳಿಗೆ ತಿದ್ದುಪಡಿಯನ್ನು ತರಲಾಗಿರುತ್ತದೆ ಹಾಗೂ ಸಚಿವ ಸಂಪುಟದ ಉಪಸಮಿತಿಯ ಶಿಫಾರಸ್ಸಿನಂತೆ ಹೊಸ ಪ್ರಕರಣಗಳನ್ನು ಸೇರಿಸಲಾಗಿದೆ. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರ ಹೆಸರನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ಎಂದು ಮರು ನಾಮಕರಣ ಮಾಡಲಾಗಿದೆ. ಪಂಚಾಯತ್ ರಾಜ್ ಸಂಸ್ಥೆಗಳ ಚುನಾವಣೆಯಲ್ಲಿ ಮತದಾನವನ್ನು ಕಡ್ಡಾಯಗೊಳಿಸಲಾಗಿದೆ. ಪಂಚಾಯತ್ ರಾಜ್ ಸಂಸ್ಥೆಗಳಿಗೆ ನಿರ್ದೇಶಿತ್ವ ತತ್ವಗಳನ್ನು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸದಸ್ಯರುಗಳಿಗೆ ಕಡ್ಡಾಯ ಕರ್ತವ್ಯಗಳ ಜವಾಬ್ದಾರಿಯನ್ನು ವಹಿಸಲಾಗಿದೆ.

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರ ಹಲವಾರು ಪ್ರಕರಣಗಳಿಗೆ ಈವರೆವಿಗೂ 47 ನಿಯಮಗಳನ್ನು ರಚಿಸಲಾಗಿತ್ತು. ಇಂದಿನ ಅವಶ್ಯಕತೆ ಹಾಗೂ ತಿದ್ದುಪಡಿಯಿಂದಾಗಿ ಹೊಸದಾಗಿ 30 ನಿಯಮಗಳನ್ನು ರಚಿಸಬೇಕಾಗಿತ್ತು. ಇವುಗಳಲ್ಲಿ 15 ನಿಯಮಗಳನ್ನು ಈಗಾಗಲೇ ಪ್ರಕಟಿಸಲಾಗಿರುತ್ತದೆ. ಇನ್ನುಳಿದ 15 ನಿಯಮಗಳನ್ನು ರಚಿಸುವ ಬಗ್ಗೆ ವಿವಿಧ ಹಂತಗಳಲ್ಲಿ ಪರಿಶೀಲನೆಯಲ್ಲಿರುತ್ತದೆ. ■

# ಜಿಲ್ಲಾ ಪಂಚಾಯತಿ, ಕಲಬುರಗಿ

## ಯಶೋಗಾಥೆ

**ಸಿದ್ಧರಾಮ ಕೆರೂರು**
ಜಿಲ್ಲಾ ಐಇಸಿ ಸಂಯೋಜಕರು
ಕಲಬುರಗಿ ಜಿಲ್ಲೆ

**ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 150 ದಿನ ಕೆಲಸ ನಿರ್ವಹಿಸಿದ ಕುಟುಂಬದವರಲ್ಲಿ ಸಾಮರ್ಥ್ಯವುಳ್ಳ ಕೂಲಿ ಕಾರ್ಮಿಕರಿಗೆ ಕೌಶಲ್ಯ ತರಬೇತಿ ನೀಡಲು National Institute of Rural Development, Hyderabadನಲ್ಲಿ ಇಟ್ಟಿಗೆ ತಯಾರಿಕೆ ತರಬೇತಿಯನ್ನು ಜಿಲ್ಲಾ ಪಂಚಾಯತಿ ವತಿಯಿಂದ ಆಯೋಜಿಸಲಾಯಿತು.**

ಗ್ರಾಮೀಣ ಜನತೆಯ ಸರ್ವತೋಮುಖ ಅಭಿವೃದ್ಧಿಗಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಹಲವಾರು ಯೋಜನೆಗಳನ್ನು ರೂಪಿಸಿದರು ಸಹ ಗ್ರಾಮೀಣ ಜನತೆ ವಲಸೆ ಹೋಗುವುದನ್ನು ತಡೆಗಟ್ಟಲು ಸಾಧ್ಯವಾಗುತ್ತಿಲ್ಲ. ಜನರಿಗೆ ಸ್ಥಳೀಯವಾಗಿ ಉದ್ಯೋಗ ನೀಡುವ ದೃಷ್ಟಿಯಿಂದ ಬಹುಮುಖ್ಯ ಉದ್ದೇಶ ಹೊಂದಿದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ ಜಾರಿಗೆ ತರಲಾಗಿದೆ.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕಲಬುರಗಿ ಜಿಲ್ಲೆಯಾದ್ಯಂತ ಹಲವಾರು ಕಾಮಗಾರಿಗಳನ್ನು ತೆಗೆದುಕೊಂಡಿದ್ದು, ಗ್ರಾಮೀಣ ಜನರು ವಲಸೆ ಹೋಗುವುದನ್ನು ತಡೆಗಟ್ಟಲು ಶ್ರಮಿಸಲಾಗಿದೆ. 2015–16 ನೇ ಸಾಲಿನಲ್ಲಿ ಕಲಬುರಗಿ ಜಿಲ್ಲೆಯಲ್ಲಿ ಭೀಕರ ಬರಗಾಲದ ಪರಿಸ್ಥಿತಿ ಇದ್ದ ಕಾರಣ, ಜಿಲ್ಲೆಯನ್ನು ಬರಪಿಡಿತ ಎಂದು ಘೋಷಿಸಿ ಕೇಂದ್ರ ಸರ್ಕಾರದ ನಿರ್ದೇಶನದಂತೆ ಪ್ರತಿ ಕುಟುಂಬಕ್ಕೆ ವಾರ್ಷಿಕ 100 ದಿನದಿಂದ 150 ದಿನಗಳ ಉದ್ಯೋಗ ವಿಸ್ತರಣೆ ಮಾಡಲಾಯಿತು. 100 ದಿನ ಮುಗಿದ ಸಾಕಷ್ಟು ಕುಟುಂಬದವರು ಉಳಿದ 50 ದಿನ ಕೂಡ ಡಿಸೆಂಬರ್ ಮತ್ತು ಜನವರಿಯಲ್ಲಿ ಮುಕ್ತಾಯಗೊಳಿಸಿದರು. ಜನವರಿ ಅಂತ್ಯದಲ್ಲಿ 150 ದಿನ ಕೆಲಸ ಮಾಡಿದ ಕುಟುಂಬದವರು ಗ್ರಾಮೀಣ ಭಾಗದಲ್ಲಿ ಕೆಲಸ ಸಿಗದೇ ಇರುವ ಕಾರಣ ನಗರ ಪ್ರದೇಶಗಳಲ್ಲಿ ಕೆಲಸ ಹುಡುಕಲು ಪ್ರಾರಂಭಿಸಿದರು. ಇದನ್ನು ಅರಿತ ಜಿಲ್ಲಾ ಪಂಚಾಯತಿ, ಕಲಬುರಗಿ ವತಿಯಿಂದ ಸದರಿ ಕಾರ್ಮಿಕರಿಗೆ ಕೆಲಸ ನೀಡುವ ಉದ್ದೇಶದಿಂದ ಇಟ್ಟಿಗೆ ತಯಾರಿಕೆ ಕುಶಲ ಗುಡಿ ಕೈಗಾರಿಕೆಯನ್ನು ಕಾರ್ಮಿಕರು ಆರಂಭಿಸಲು ವಿನೂತನ ಯೋಜನೆ ರೂಪಿಸಲಾಯಿತು.



**ಮಾನ್ಯ ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವರು, ಎನ್.ಐ.ಆರ್.ಡಿ, ಹೈದರಾಬಾದ್‌ಗೆ ಭೇಟಿ ನೀಡಿ ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕೌಶಲ್ಯರಹಿತ ಕಾರ್ಮಿಕರಿಗೆ ಇಟ್ಟಿಗೆ ತಯಾರಿ ತರಬೇತಿ.**



ಖಾತ್ರಿ ಇಟ್ಟಿಗೆಗಳಿಂದ ಪ್ರಾಯೋಗಿಕವಾಗಿ ಗೋಡೆ ನಿರ್ಮಾಣ ಮಾಡುತ್ತಿರುವ ದೃಶ್ಯ.



ಮೈರಾಡ ತರಬೇತಿ ಸಂಸ್ಥೆ, ಕಮಲಾಪುರದಲ್ಲಿ ತರಗತಿಯ ತರಬೇತಿ ನೀಡುತ್ತಿರುವುದು.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 150 ದಿನ ಕೆಲಸ ನಿರ್ವಹಿಸಿದ ಕುಟುಂಬದವರಲ್ಲಿ ಸಾಮರ್ಥ್ಯವುಳ್ಳ ಕೂಲಿ ಕಾರ್ಮಿಕರಿಗೆ ಕೌಶಲ್ಯ ತರಬೇತಿ ನೀಡಲು National Institute of Rural Development, Hyderabadನಲ್ಲಿ ಇಟ್ಟಿಗೆ ತಯಾರಿಕೆ ತರಬೇತಿಯನ್ನು ಜಿಲ್ಲಾ ಪಂಚಾಯತಿ ವತಿಯಿಂದ ಆಯೋಜಿಸಲಾಯಿತು.

ಜಿಲ್ಲಾ ಪಂಚಾಯತಿ, ಕಲಬುರಗಿ ಸರ್ಕಾರೇತರ ಸಂಸ್ಥೆಯ ಸಹಯೋಗದಲ್ಲಿ ಜಿಲ್ಲೆಯಲ್ಲಿ ವಿವಿಧ ಹಂತಗಳಲ್ಲಿ ಆಸಕ್ತಿಯುಳ್ಳ ಉದ್ಯೋಗ ಖಾತ್ರಿ ಕೂಲಿ ಕಾರ್ಮಿಕರಿಗೆ ಹಾಗೂ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳಿಗೆ ಇಟ್ಟಿಗೆ ತಯಾರಿಕೆ ತರಬೇತಿ ನೀಡಲಾಯಿತು. ಅಫಜಲಪೂರ ತಾಲ್ಲೂಕಿನ ಮಾಶಾಳ ಗ್ರಾಮದಲ್ಲಿ ಪ್ರಾಯೋಗಿಕವಾಗಿ ತರಬೇತಿ ಮತ್ತು ಮೈರಾಡ ತರಬೇತಿ ಸಂಸ್ಥೆ, ಕಮಲಾಪೂರದಲ್ಲಿ ವಿಸ್ತೃತ ತರಬೇತಿ ನೀಡಲಾಯಿತು. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೂಲಿ ಕಾರ್ಮಿಕರು ತಯಾರಿಸಿದ ಇಟ್ಟಿಗೆಗೆ "ಖಾತ್ರಿ ಇಟ್ಟಿಗೆ" ಎಂದು ನಾಮಕರಣ ಮಾಡಲಾಯಿತು.

ವಿವಿಧ ಹಂತದ ತರಬೇತಿಯ ನಂತರ ಮರ್ದಿನಿ ಪ್ರೆಸ್‌ರವರಿಂದ ಇಂದಿರಾ ಆವಾಸ್ ಯೋಜನೆಯ ಆಡಳಿತಾತ್ಮಕ ವೆಚ್ಚದಲ್ಲಿ ಇಟ್ಟಿಗೆ ತಯಾರಿಸುವ ಯಂತ್ರಗಳು ಖರೀದಿಸಿ ಈ ಕೆಳಕಂಡ 4 ಗ್ರಾಮ ಪಂಚಾಯತಿಗಳಲ್ಲಿ ಇಟ್ಟಿಗೆ ತಯಾರಿಕೆ ಘಟಕ ಪ್ರಾರಂಭಿಸಲಾಯಿತು. ಮತ್ತು ಸದರಿ ಯಂತ್ರದಿಂದ ಕಂಬಗಳು, ನೆಲಗಟ್ಟುಗಳು ಹಾಗೂ ಅಂಚುಗಳನ್ನು ತಯಾರಿಸಲು ಉಪಯೋಗಿಸಬಹುದು.

| ಕ್ರ. ಸಂ. | ತಾಲೂಕ | ಗ್ರಾಮ ಪಂಚಾಯತಿ |
|---|---|---|
| 1 | ಚಿಂಚೋಳಿ | ಸುಲೇಪೇಠ |
| 2 | ಚಿತ್ತಾಪೂರ | ಕಾಳಗಿ |
| 3 | ಕಲಬುರಗಿ | ಕುರಿಕೋಟಾ |
| 4 | ಸೇಡಂ | ಕುರುಕುಂಟಾ |

ಜಿಲ್ಲಾ ಪಂಚಾಯತಿ, ಕಲಬುರಗಿರವರ ವತಿಯಿಂದ ವಸತಿ ಯೋಜನೆಯಡಿ ನಿರ್ಮಾಣಗೊಳ್ಳುತ್ತಿರುವ ಮನೆಗಳಿಗೆ ಖಾತ್ರಿ ಇಟ್ಟಿಗೆಯನ್ನು ಉಪಯೋಗಿಸಲು ಜಾಗೃತಿ ಮೂಡಿಸಲಾಯಿತು.

ಜಿಲ್ಲಾ ಪಂಚಾಯತಿ, ಕಲಬುರಗಿ ರವರು ಸ್ಥಾಪಿಸಿದ ಇಟ್ಟಿಗೆ ತಯಾರಿಕಾ ಘಟಕದಲ್ಲಿ ತಯಾರಿಸಿದ ಇಟ್ಟಿಗೆಗಳು ಸರ್ಕಾರಿ ಯೋಜನೆಗಳ ಅಡಿಯಲ್ಲಿ ನಿರ್ಮಿಸುತ್ತಿರುವ ಇಂದಿರಾ ಆವಾಸ್ ಯೋಜನೆಯ ಮನೆಗಳು, ಅಂಗನವಾಡಿ ಕೇಂದ್ರಗಳು, ರಾಜೀವ ಗಾಂಧಿ ಸೇವಾ ಕೇಂದ್ರಗಳು ಹಾಗೂ ಇತರೆ ಸರ್ಕಾರಿ ಕಟ್ಟಡ ಕಾಮಗಾರಿಗಳಿಗೆ ಬಳಸಲಾಗುತ್ತಿದೆ. ಈ ಖಾತ್ರಿ



ಇಂದಿರಾ ಆವಾಸ್ ಯೋಜನೆಯ ಫಲಾನುಭವಿಯು ಖಾತ್ರಿ ಇಟ್ಟಿಗೆಗಳು ಉಪಯೋಗಿಸಿ ಮಾಶಾಳ ಗ್ರಾಮದಲ್ಲಿ ಮನೆಯನ್ನು ನಿರ್ಮಿಸುತ್ತಿರುವುದು.



**ಕಾಳಗಿ ಗ್ರಾಮದಲ್ಲಿ ಖಾತ್ರಿ ಇಟ್ಟಿಗೆಗಳು ಉಪಯೋಗಿಸಿ ಅಂಗನವಾಡಿ ಕೇಂದ್ರ ನಿರ್ಮಾಣ ಮಾಡುತ್ತಿರುವ ದೃಶ್ಯ.**

ಇಟ್ಟಿಗೆಗಳಿಂದ ಸಮರ್ಥನೀಯ ಮತ್ತು ಬಲವಾದ ಕಟ್ಟಡದ ನಿರ್ಮಾಣ ವಾಗುತ್ತಿವೆ.

ಜಿಲ್ಲಾ ಪಂಚಾಯತ, ಕಲಬುರಗಿ ರವರ ಈ ಹೊಸ ಯೋಜನೆಯಿಂದ ಸಮರ್ಥನೀಯ ಮತ್ತು ಬಲವಾದ ಇಟ್ಟಿಗೆಗಳು ತಯಾರಿಸುತ್ತಿದ್ದು, ಹಾಗೂ ಗ್ರಾಮೀಣ ಮಟ್ಟದ ಕೂಲಿಕಾರರಿಗೆ ಸುಸ್ಥಿರ ಉದ್ಯೋಗ ಒದಗಿಸು ವಲ್ಲಿ ಸಹಕಾರಿಯಾಗಿದೆ. ಇದರಿಂದ ಕೂಲಿಕಾರರ ಕುಟುಂಬಗಳು ಕೂಡ ಸಬಲೀಕರಣಗೊಳ್ಳುತ್ತಿದ್ದು, ನಿರುದ್ಯೋಗ ಸಮಸ್ಯೆಯಿಂದ ವಲಸೆ ಹೋಗುವುದು ತಪ್ಪಿಸಿದಂತಾಗಿದೆ.

**ಕರ್ನಾಟಕ ರಾಜ್ಯದಲ್ಲಿ ಕಲಬುರಗಿ ಜಿಲ್ಲೆಯು ಉತ್ತರ ಕರ್ನಾಟಕ ಭಾಗದಲ್ಲಿದ್ದು, ಜಿಲ್ಲೆಯು ರಾಜ್ಯದ ಎರಡನೇ ಅತೀ ದೊಡ್ಡ ಜಿಲ್ಲೆ ಆಗಿದೆ. ಜಿಲ್ಲೆಯು 7 ತಾಲೂಕ ಹಾಗೂ 264 ಗ್ರಾಮ ಪಂಚಾಯತಿಗಳನ್ನು ಹೊಂದಿದೆ. 2011ರ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿ ಒಟ್ಟು 25,66,326 ಜನಸಂಖ್ಯೆ ಹೊಂದಿದ್ದು, ಜಿಲ್ಲೆಯ ವಿಸ್ತೀರ್ಣ 10,954 ಚ.ಕಿ.ಮೀ. ಆಗಿರುತ್ತದೆ. ಜಿಲ್ಲೆಯ ಸಾಕ್ಷರತೆಯ ಪ್ರಮಾಣ ಶೇ 65% ರಷ್ಟಿರುತ್ತದೆ. ಜಿಲ್ಲೆಯ ಬಹುಭಾಗ ಕೃಷಿ ಆಧಾರಿತ ಪ್ರದೇಶವಾಗಿದ್ದು, ಕೃಷಿ ಚಟುವಟಿಕೆಗಳು ಸಂಪೂರ್ಣವಾಗಿ ಮಳೆಯ ಮೇಲೆ ಅವಲಂಬಿಸಿರುತ್ತವೆ. ಜಿಲ್ಲೆಯು ತೊಗರಿ ಕಣಜವೆಂದು ಹೆಸರುವಾಸಿಯಾಗಿದ್ದು, ತೊಗರಿ ಬೆಳೆಯು ಪ್ರಮುಖ ಬೆಳೆಯಾಗಿದೆ.**

**ಕಲಬುರಗಿ ಜಿಲ್ಲೆಯ 2015-16ನೇ ಸಾಲಿನ ಮಳೆಯ ಪ್ರಮಾಣ**

| ಕ್ರ. ಸಂ. | ತಾಲೂಕ | ಸರಾಸರಿ ಮಳೆಯ ಪ್ರಮಾಣ | ವಾಸ್ತವ ಮಳೆಯ ಪ್ರಮಾಣ | ಮಳೆಯ ಕೊರತೆ |
|---|---|---|---|---|
| 1 | ಅಫಜಲಪೂರ | 623.6 | 301.4 | -52 |
| 2 | ಆಳಂದ | 730.8 | 326.4 | -55 |
| 3 | ಚಿಂಚೋಳಿ | 858.4 | 544.6 | -37 |
| 4 | ಚಿತ್ತಾಪೂರ | 724.5 | 448.0 | -38 |
| 5 | ಕಲಬುರಗಿ | 742.5 | 418.4 | -44 |
| 6 | ಜೇವರ್ಗಿ | 712.1 | 344.6 | -52 |
| 7 | ಸೇಡಂ | 799.4 | 515.6 | -36 |
| | ಒಟ್ಟು | 740.8 | 409.3 | -45 |

ಕಳೆದ 10 ವರ್ಷಗಳಿಂದ ಜಿಲ್ಲೆಯಲ್ಲಿ ಮುಂಗಾರು ಮಾರುತವು ದುರ್ಬಲವಾದ ಕಾರಣ ಕೃಷಿ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ. 2015-16ನೇ ಸಾಲಿನಲ್ಲಿ ಶೇ. 45 ರಷ್ಟು ಮಳೆಯ ಕೊರತೆ ಉಂಟಾಗಿರುತ್ತದೆ. ವರ್ಷವಾರು ಮಳೆಯ ವಿವರ ಈ ಕೆಳಕಂಡಂತಿದೆ.

ಜಿಲ್ಲೆಯಲ್ಲಿ ಶೇ. 13 ರಷ್ಟು ನೀರಾವರಿ ಕೃಷಿ ಪ್ರದೇಶವಿದ್ದು, ಉಳಿದ ಬಹುಭಾಗವು ಮಳೆ ಆಧಾರಿತ



| | | |
|---|---|---|
| **ಕಾಮಗಾರಿ ಹೆಸರು** | : | **ಸೇವಾನಗರ ಗ್ರಾಮದಲ್ಲಿ ಮಲ್ಟಿ ಆರ್ಕ್ ಚೆಕ್ ಡ್ಯಾಮ್.** |
| ತಾಲೂಕ | : | ಚಿತ್ತಾಪೂರ |
| ಗ್ರಾಮ ಪಂಚಾಯತ | : | ಬಂಕೂರ |
| ಕಾಮಗಾರಿ ಸಂಖ್ಯೆ | : | 1515004005/ WC/11020050920650560 |
| ವರ್ಷ | : | 2016-17 |
| ಅಂದಾಜು ಮೊತ್ತ | : | 5.50 ಲಕ್ಷ |
| ಕೂಲಿ ಕಾರ್ಮಿಕರ ಸಂಖ್ಯೆ | : | 98 |
| ಸೃಜಿಸಿದ ಮಾನವ ದಿನಗಳು | : | 488 |



| | |
|---|---|
| **ಕಾಮಗಾರಿ ಹೆಸರು** | **: ಚಿಂಚನಸೂರ ಗ್ರಾಮದಲ್ಲಿ ಮಲ್ಟಿ ಆರ್ಕ್ ಚೆಕ್ ಡ್ಯಾಮ್.** |
| **ತಾಲೂಕ** | **: ಆಳಂದ** |
| **ಗ್ರಾಮ ಪಂಚಾಯತ** | **: ಚಿಂಚನಸೂರ** |
| **ಕಾಮಗಾರಿ ಸಂಖ್ಯೆ** | **: 1515004005/ WC/11020050920648249** |
| **ವರ್ಷ** | **: 2016–17** |
| **ಅಂದಾಜು ಮೊತ್ತ** | **: 12.00 ಲಕ್ಷ** |
| **ಕೂಲಿ ಕಾರ್ಮಿಕರ ಸಂಖ್ಯೆ** | **: 62** |
| **ಸೃಜಿಸಿದ ಮಾನವ ದಿನಗಳು** | **: 372** |

ಕೃಷಿ ಪ್ರದೇಶವಾಗಿದೆ. ಇದನ್ನು ಅರಿತ ಜಿಲ್ಲಾ ಪಂಚಾಯತಿ, ಕಲಬುರಗಿಯು ಮುಂಜಾಗೃತ ಕ್ರಮವಾಗಿ ಜಿಲ್ಲೆಯ ವಿವಿಧ ಭಾಗಗಳಲ್ಲಿ ಅಂತರ್ಜಲ ಮಟ್ಟವನ್ನು ಹೆಚ್ಚಿಸಲು 2016–17ನೇ ಸಾಲಿನಲ್ಲಿ ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ನೈಸರ್ಗಿಕ ಸಂಪನ್ಮೂ ನಿರ್ವಹಣೆ ಕಾಮಗಾರಿಗಳನ್ನು ಕೈಗೆತ್ತಿಕೊಂಡಿತು. ಅವುಗಳಲ್ಲಿ ಪ್ರಮುಖವಾಗಿ ಬಹುಕಮಾನು ಚೆಕ್ ಡ್ಯಾಮ್ ಮತ್ತು ಕೃಷಿ ಹೊಂಡಗಳ ಕಾಮಗಾರಿಗಳು ತ್ವರಿತ ರೀತಿಯಲ್ಲಿ ಪ್ರಾರಂಭಿಸಲಾಯಿತು.

ಕಲಬುರಗಿ ಜಿಲ್ಲೆಯ ಚಿತ್ತಾಪೂರ ತಾಲೂಕಿನ ಭಂಕೂರ ಗ್ರಾಮ ಪಂಚಾಯತಿ ವ್ಯಾಪ್ತಿಯ ಸೇವಾ ನಗರ ಗ್ರಾಮದಲ್ಲಿ ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಬಹು ಕಮಾನ ಚೆಕ್ ಡ್ಯಾಮ್ ನಿರ್ಮಿಸಲಾಗಿದೆ. ಈ ಕಾಮಗಾರಿಯ ಅಂದಾಜು ಮೊತ್ತ ರೂ. 5.50 ಲಕ್ಷ ಗಳಿದ್ದು, ಅನುಷ್ಠಾನ ಮಾಡುವಲ್ಲಿ 98 ಜನರು ಸುಮಾರು 6 ವಾರಗಳ ಕಾಲ 488 ಮಾನವ ದಿನಗಳನ್ನು ಸೃಜಿಸಲಾಗಿದೆ.



# Check dams now come as a boon for drought-hit villages in Kalaburagi

At least 100 such dams are proposed in Aland taluk

[illegible]

KALABURAGI: The construction of cost-effective multi-arched check dams across streams and nalas in villages that were severely affected by drinking water shortage last summer has started paying rich dividends. Almost all the borewells in the vicinity of these check dams have been revived now.

The construction of multi-arched check dams was first popularised in Bidar district in 2005 by the then Chief Executive Officer of Bidar Zilla Panchayat, Naveen Raj Singh, who is now Secretary, Tourism Department. It has come as a boon for people in the water-starved villages of Aland, Afzalpur and other taluks in the district.

Anirudh Sravan, Chief Executive Officer of the Kalaburagi Zilla Panchayat, has decided to take up large-scale construction of multi-arched check dams throughout the district in an effort to use every drop of rainwater flowing through the nalas and streams during monsoon and save them to recharge the depleted groundwater reserves.

Speaking to *The Hindu* here, Mr. Sravan said that the ZP proposes to take up construction of at least 50 check dams in each one of the seven taluks in the district. At least 100 check dams are proposed in Aland taluk, which was one of the worst-hit last summer with more than 200 villages provided drinking water through tankers till the onset of monsoon. Even now, one village in the taluk — Bhusnur — is being supplied water through tankers.

Mr. Sravan said that in Afzalpur taluk, six check dams were constructed — two across the Waddalli stream in Waddalli village, one at Hallahal Kolla stream at Gobbur B., another in Chowdapur tanda, and two more in Revoor (K) and Revoor (B) villages.

During the first spell of rain, after the construction of the check dam at Waddalli, water was impounded and all the borewells, including six private borewells and three borewells providing drinking water to Waddalli and other villages, were fully recharged. The villages, which were being provided tanker water, now can draw water from the borewells, he said.

The construction of the check dams was taken up under the Mahatma Gandhi National Rural Employment Guarantee Scheme (MGNREGA), with the cost of each check dam ranging from Rs. 4 lakh to Rs. 7 lakh. A conventional dam costs more than three times as much and has a lower life span.

A multi-arched check dam at Waddalli in Afzalpur taluk. — PHOTO: [illegible]

ಕಲಬುರಗಿ ಜಿಲ್ಲೆಯ ಆಳಂದ ತಾಲೂಕಿನ ಚಿಂಚನಸೂರ ಗ್ರಾಮ ಪಂಚಾಯತಿಯಲ್ಲಿ ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಬಹು ಕಮಾನ ಚೆಕ್ ಡ್ಯಾಮ್ ನಿರ್ಮಿಸಲಾಗಿದೆ. ಈ ಕಾಮಗಾರಿಯ ಅಂದಾಜು ಮೊತ್ತ ರೂ. 12.00 ಲಕ್ಷ ಗಳಿದ್ದು, ಅನುಷ್ಠಾನ ಮಾಡುವಲ್ಲಿ 62 ಜನರು ಸುಮಾರು 5 ವಾರಗಳ ಕಾಲ 372 ಮಾನವ ದಿನಗಳನ್ನು ಸೃಜಿಸಲಾಗಿದೆ.

ಇದರಿಂದ ವ್ಯರ್ಥವಾಗಿ ಹರಿದು ಹೋಗುತ್ತಿರುವ ನೀರನ್ನು ನಿಲ್ಲಿಸುವುದು, ನಿಂತ ನೀರನ್ನು ಇಂಗಿಸುವುದರಿಂದ ಅಂತರ್ಜಲ ಮಟ್ಟ ಹೆಚ್ಚಿಸಲು ಸಹಾಯವಾಗಿದೆ. ಈ ಕಾಮಗಾರಿಯಿಂದ ಮಣ್ಣಿನ ಸವೆತ ಕೂಡ ತಡೆಗಟ್ಟಲಾಗಿದೆ. ಹಾಗೂ ಸುತ್ತಮುತ್ತಲಿನ ಕೊಳವೆ ಬಾವಿ ಮತ್ತು ತೆರೆದ ಬಾವಿಗಳಿಗೂ ಕೂಡ ನೀರಿನ ಕೊರತೆ ಇರುವುದಿಲ್ಲ. ಹಾಗೂ ಸುತ್ತಮುತ್ತಲಿನ ಕೃಷಿ ಭೂಮಿಗೆ ನೀರಿನ ಕೊರತೆ ಇರುವುದಿಲ್ಲ. ಇದರಿಂದ ಅಲ್ಲಿನ ರೈತರ ಹೊಲದಲ್ಲಿ ಉತ್ತಮವಾದ ತೊಗರೆ ಬೆಳೆದಿದ್ದಾರೆ. ಇದರೀತಿ ಜಿಲ್ಲಾದ್ಯಂತ ಮಲ್ಟಿ ಆರ್ಕ ಚೆಕ್ಕ ಡ್ಯಾಮ್ ಮಾಡಲಾಗಿದೆ. ▪

# ನರೇಗಾ ಗ್ರಾಮೀಣ ಜನರ ಜೀವನಾಡಿ: ಚಾಮರಾಜನಗರ ಜಿಲ್ಲೆ

## ಯಶೋಗಾಥೆ

ಎಸ್ ನವೀನ್ ಕುಮಾರ್

ಬಡವರ ಜೀವನಮಟ್ಟ ಸುಧಾರಿಸಲು ಜಾರಿಯಲ್ಲಿರುವ ಮಹತ್ತರ ಕಾರ್ಯಕ್ರಮಗಳಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಕೂಡ ಒಂದು. ಗ್ರಾಮೀಣ ಪ್ರದೇಶದ ಜನತೆ ಮಳೆಯಾಶ್ರಿತ ಕೃಷಿ ಅವಲಂಬಿಸಿದ್ದು, ಕೈಕೊಡುತ್ತಿರುವ ಮಳೆಯಿಂದ ಕೃಷಿ ಕೆಲಸವಿಲ್ಲದೆ ಅನೇಕ ಸಂಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ಜೀವನ ನಿರ್ವಹಣೆ ದುಸ್ತರವಾಗುತ್ತಿದ್ದು ವಲಸೆ ಹೋಗಬೇಕಾದ ಅನಿವಾರ್ಯತೆ ಎದುರಾಗಿದೆ. ಇನ್ನೊಂದೆಡೆ ಜಾನುವಾರುಗಳಿಗೆ ಮೇವು ನೀರಿನ ಪರಿಸ್ಥಿತಿ ಉಲ್ಬಣಿಸಿದೆ. ಆದಾಯ ಕೊಡುವ ಜಾನುವಾರುಗಳನ್ನು ಸಾಕಬೇಕೆ ಇಲ್ಲವೆ ಮಾರಬೇಕೆ ಎಂಬ ಗೊಂದಲದಲ್ಲಿದ್ದಾರೆ. ಇದಕ್ಕೆ ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳುವ ಅವಕಾಶಗಳು ಇಲ್ಲದಿದ್ದಾಗ ವಲಸೆಯತ್ತ ಮುಖಮಾಡುತ್ತಿದ್ದಾರೆ.

ಇವರಿಗೆ ನಿಂತ ನೆಲೆಯಲ್ಲಿಯೇ ಬರ ಸ್ಥಿತಿಯನ್ನು ಸಮರ್ಥವಾಗಿ ಎದುರಿಸಬೇಕಾದರೆ ನೀರಿನ ಆಸರೆಗಳನ್ನು ಪುನರುಜ್ಜೀವನಗೊಳಿಸುವ ಅಗತ್ಯತೆ ಕಂಡುಬರುತ್ತದೆ. ಜೊತೆಗೆ ಕೆಲಸವಿಲ್ಲದೆ ಪರಿತಪಿಸುವ ಮಂದಿಗೆ ಕೆಲಸ ಒದಗಿಸುವ ಸ್ಥಿತಿ ನಿರ್ಮಾಣವಾದಲ್ಲಿ ಮಾತ್ರ ಬರ ಸ್ಥಿತಿಯನ್ನು ಎದುರಿಸಲು ಗ್ರಾಮೀಣ ಜನ ಶಕ್ತರಾಗುತ್ತಾರೆ. ಮಹಾತ್ಮಗಾಂಧಿ ನರೇಗಾ ಯೋಜನೆ ಉದ್ದೇಶ ಕೂಡ ಬರ ಸ್ಥಿತಿಯನ್ನು ಸಮರ್ಥವಾಗಿ ಎದುರಿಸುವಂತೆ ಮಾಡಿ ಜನರ ಜೀವನವನ್ನು ಸುಧಾರಿಸುವಂತೆ ಮಾಡುವುದು. ಇತ್ತೀಚೆಗೆ ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯ ಬರಗಾಲ ಸ್ಥಿತಿಯಿಂದ ಅಂತರ್ಜಲ ಬಳಕೆ ಅತಿಯಾಗುತ್ತಿರುವುದನ್ನು ತಡೆಗಟ್ಟಿ ಪರ್ಯಾಯ ಮಾರ್ಗಗಳಿಂದ ಅಂತರ್ಜಲ ಮರುಪೂರಣಗೊಳಿಸುವ ಕಾಮಗಾರಿಗಳ ಅನುಷ್ಠಾನಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡುತ್ತಿದೆ.

ಚಾಮರಾಜನಗರ ಜಿಲ್ಲೆಯು ಭೌಗೋಳಿಕವಾಗಿ 5671.71 ಚದರ.ಕಿ.ಮೀ ವಿಸ್ತೀರ್ಣವನ್ನು ಹೊಂದಿದ್ದು ರಾಜ್ಯದ ದಕ್ಷಿಣದ ತುದಿಯ ಒಣ ಪ್ರದೇಶದ ವ್ಯಾಪ್ತಿಗೆ ಬರುತ್ತದೆ. ಜಿಲ್ಲೆಯು ಪೂರ್ವದ ಘಟ್ಟಪ್ರದೇಶಗಳು, ಉತ್ತರ ದಕ್ಷಿಣಾಭಿಮುಖವಾಗಿರುವ ಬೆಟ್ಟಗಳನ್ನು ಒಳಗೊಂಡಿದೆ. ಪೂರ್ವದಲ್ಲಿ ತಮಿಳುನಾಡಿನ ಸೇಲಂ, ಮತ್ತು ಕೊಯಮತ್ತೂರು ಜಿಲ್ಲೆಗಳೊಂದಿಗೆ ಗಡಿ ಪ್ರದೇಶವನ್ನು ಹೊಂದಿದೆ. ಉತ್ತರದಲ್ಲಿ ಬೆಂಗಳೂರು ಮತ್ತು ಮಂಡ್ಯ ಜಿಲ್ಲೆಯೊಂದಿಗೆ ಪಶ್ಚಿಮದಲ್ಲಿ ಮೈಸೂರು ಜಿಲ್ಲೆಯೊಂದಿಗೆ ಹಾಗು ದಕ್ಷಿಣದಲ್ಲಿ ತಮಿಳುನಾಡಿನ ನೀಲಗಿರಿ ಜಿಲ್ಲೆಯೊಂದಿಗೆ ಗಡಿ ಪ್ರದೇಶವನ್ನು ಹೊಂದಿದೆ. ಜಿಲ್ಲೆಯು ನಾಲ್ಕು ತಾಲ್ಲೂಕುಗಳನ್ನು ಒಳಗೊಂಡಿದ್ದು ಅವುಗಳೆಂದರೆ, ಚಾಮರಾಜನಗರ,ಗುಂಡ್ಲುಪೇಟೆ, ಕೊಳ್ಳೇಗಾಲ, ಮತ್ತು ಯಳಂದೂರು ಆಗಿದೆ. ಈ ನಾಲ್ಕು ತಾಲ್ಲೂಕುಗಳ ಪೈಕಿ 2,79743 ಹೆಕ್ಟೇರ್ ಅಂದರೆ ಜಿಲ್ಲೆಯ ಒಟ್ಟು ಪ್ರದೇಶದ ಶೇಕಡಾ 69.08% ರಷ್ಟು ವಿಸ್ತೀರ್ಣ ಹೊಂದಿರುವ ಕೊಳ್ಳೇಗಾಲ ರಾಜ್ಯದಲ್ಲಿಯೇ ಅತಿದೊಡ್ಡ ತಾಲ್ಲೂಕಾಗಿ ಹಾಗು 26473 ಹೆಕ್ಟೇರ್ ವಿಸ್ತೀರ್ಣ ಹೊಂದಿರುವ ಯಳಂದೂರು ತಾಲ್ಲೂಕು ರಾಜ್ಯದಲ್ಲಿಯೇ ಅತಿಚಿಕ್ಕ ತಾಲ್ಲೂಕಾಗಿದೆ. ಆಡಳಿತದ ನಿಟ್ಟಿನಲ್ಲಿ ಎರಡು ಕಂದಾಯ ವಿಭಾಗಗಳನ್ನು ಮಾಡಲಾಗಿದ್ದು ಒಟ್ಟು 5 ಪಟ್ಟಣಗಳು, 130 ಗ್ರಾಮ ಪಂಚಾಯತಿಗಳು 16 ಹೋಬಳಿಗಳು 446 ಹಳ್ಳಿಗಳನ್ನು ಹಾಗು 120 ಸಣ್ಣ ಹಳ್ಳಿಗಳನ್ನು ಒಳಗೊಂಡಿದೆ.

**ಗ್ರಾಮೀಣ ಪ್ರದೇಶದ ಜನತೆ ಮಳೆಯಾಶ್ರಿತ ಕೃಷಿ ಅವಲಂಬಿಸಿದ್ದು, ಕೈಕೊಡುತ್ತಿರುವ ಮಳೆಯಿಂದ ಕೃಷಿ ಕೆಲಸವಿಲ್ಲದೆ ಅನೇಕ ಸಂಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ಜೀವನ ನಿರ್ವಹಣೆ ದುಸ್ತರವಾಗುತ್ತಿದ್ದು ವಲಸೆ ಹೋಗಬೇಕಾದ ಅನಿವಾರ್ಯತೆ ಎದುರಾಗಿದೆ.**

| ತಾಲ್ಲೂಕುವಾರು ಪ್ರಗತಿ ವಿವರ | | | | | | |
|---|---|---|---|---|---|---|
| ಕ್ರ.ಸಂ | ತಾಲ್ಲೂಕು | 2016–17 ನೇ ಸಾಲಿನಲ್ಲಿ ಹಮ್ಮಿಕೊಳ್ಳಬೇಕಾದ ಕಾಮಗಾರಿಗಳ ವಿವರ | | 31–01–2017 ವರೆಗೆ ಪ್ರಗತಿ | | |
| | | ಭೌತಿಕ (ಸಂಖ್ಯೆ) | ಆರ್ಥಿಕ (ಲಕ್ಷಗಳಲ್ಲಿ) | ಚಾಲನೆ ಮಾಡಿರುವ ಕಾಮಗಾರಿಗಳು | ಪೂರ್ಣ ಗೊಂಡಿರುವ ಕಾಮಗಾರಿ ಗಳು | ಭರಿಸಿದ ವೆಚ್ಚ (ಲಕ್ಷಗಳಲ್ಲಿ) |
| 1 | ಚಾಮರಾಜನಗರ | 86 | 344.00 | 131 | 78 | 146.15 |
| 2 | ಗುಂಡ್ಲುಪೇಟೆ | 68 | 272.00 | 48 | 7 | 57.53 |
| 3 | ಕೊಳ್ಳೇಗಾಲ | 82 | 328.00 | 29 | 14 | 7.01 |
| 4 | ಯಳಂದೂರು | 24 | 96.00 | 25 | 11 | 10.13 |
| | ಒಟ್ಟು | 260 | 1040.00 | 233 | 110 | 220.82 |

ಚಾಮರಾಜನಗರ ಜಿಲ್ಲೆಯಲ್ಲಿಯೂ ಬರ ಸ್ಥಿತಿ ದಿನೇ ದಿನೇ ಉಲ್ಬಣಿಸುತ್ತಿದೆ. ಗ್ರಾಮಗಳಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆ ಕಾಮಗಾರಿ ಅನುಷ್ಠಾನಕ್ಕೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹೆಚ್ಚಿನ ಆಸಕ್ತಿ ವಹಿಸಿದ್ದಾರೆ. ಇದರ ಪರಿಣಾಮ ಗ್ರಾಮ/ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕೆರೆ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನ ಚುರುಕುಗೊಂಡಿದೆ. ಯೋಜನೆಯಲ್ಲಿ ಭಾಗಿಯಾಗಲು ಹಿಂಜರಿಯುತ್ತಿದ್ದ ಕೂಲಿ ಕಾರ್ಮಿಕರು ಹೆಚ್ಚು ಭಾಗಿಯಾಗುತ್ತಿದ್ದಾರೆ.

## ನೀರು ಸಂಗ್ರಹಕ್ಕೆ ನಮ್ಮೂರ ಕೆರೆ ಅಭಿವೃದ್ಧಿ

ಸನ್ಮಾನ್ಯ ಮುಖ್ಯಮಂತ್ರಿಗಳ 21 ಅಂಶಗಳ ಕಾರ್ಯಕ್ರಮದಲ್ಲಿ ನಮ್ಮೂರ ಕೆರೆ ಕೂಡ ಒಂದು. ಕೃಷಿ, ಜನ, ಜಾನುವಾರು, ಪಶು ಪಕ್ಷಿಗಳಿಗೆ ನೀರಿನ ಆಶ್ರಯ ತಾಣ ಕೆರೆಗಳು. ಈ ಕೆರೆಗಳು ಅಭಿವೃದ್ಧಿಯಿಲ್ಲದೆ ಹಾಳಾಗಿವೆ. ಸಮಗ್ರ ಅಭಿವೃದ್ಧಿಗೆ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಹೆಚ್ಚಿನ ಆದ್ಯತೆ ನೀಡಲಾಗಿದೆ. ಕೂಲಿ ಆಧಾರಿತ ಕಾರ್ಯಕ್ರಮ ಇದಾಗಿರುವುದರಿಂದ ಗ್ರಾಮ ಪಂಚಾಯಿತಿಗೆ ಒಂದರಂತೆ ಕೆರೆಗಳ ಅಭಿವೃದ್ಧಿಗೆ ಒತ್ತು ನೀಡಿದೆ.

## ಕೆರೆ ಪುನಶ್ಚೇತನ ಕಾಮಗಾರಿಯಲ್ಲಿ ಪ್ರಗತಿ ಸಾಧಿಸಿದ ಲೊಕ್ಕನಹಳ್ಳಿ ಗ್ರಾಮ ಪಂಚಾಯತಿ.

ಕೊಳ್ಳೇಗಾಲ ತಾಲ್ಲೂಕಿನ ಲೊಕ್ಕನಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಚಿಕ್ಕಕೆರೆ ಅಭಿವೃದ್ಧಿ ಕಾಣದೆ ಹೂಳು ತುಂಬಿ ಹಾಳಾಗಿತ್ತು. ಇದನ್ನು ಅಭಿವೃದ್ಧಿ ಪಡಿಸುವ ದೃಷ್ಟಿಯಿಂದ ಗ್ರಾಮ ಪಂಚಾಯಿತಿ ಸದಸ್ಯರು ಒಕ್ಕೊರಲಿನಿಂದ ಕಾಮಗಾರಿ ಅನುಷ್ಠಾನವನ್ನು 2016–17 ನೇ ಸಾಲಿನಲ್ಲಿ ಅನುಷ್ಠಾನಿಸಲು ಆದ್ಯತೆ ನೀಡಿದರು.

**ಗ್ರಾಮ ಸಭೆ ಅನುಮೋದನೆ:** ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಕಾಮಗಾರಿ ಅನುಷ್ಠಾನ ಮಾಡುವ ದೃಷ್ಟಿಯಿಂದ ಕ್ರಿಯಾ ಯೋಜನೆಯಲ್ಲಿ ಕಾಮಗಾರಿ ಅಳವಡಿಸಿಕೊಂಡು ಅನುಮೋದನೆ ನೀಡಿತ್ತು. ಸದರಿ ಅನುಮೋದನೆಯಂತೆ ಈ ಸಾಲಿನಲ್ಲಿ ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮೋದನೆ ಪಡೆದು ಕಾಮಗಾರಿಗೆ ಚಾಲನೆ ನೀಡಲಾಯಿತು.

**ಐಇಸಿ ಕಾರ್ಯಕ್ರಮ:** ಜಿಲ್ಲೆಯಾದ್ಯಂತ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಕುರಿತಂತೆ "ಜಾಗೃತಿ ಅಭಿಯಾನ" ಎಂಬ ಶೀರ್ಷಿಕೆಯಡಿ ಪ್ರತಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ವಾಹನದ ಮೂಲಕ ಯೋಜನೆಯ ಕುರಿತ ಕಿರುಚಿತ್ರ ಪ್ರದರ್ಶನ, ಕರಪತ್ರ ವಿತರಣೆ ರೋಜ್‌ಗಾರ್ ದಿವಸಗಳ ಆಯೋಜನೆ ಮಾಡುವುದರೊಂದಿಗೆ ಗ್ರಾಮಸ್ಥರಿಗೆ ಮಾಹಿತಿ ನೀಡಲಾಯಿತು. ಅದಲ್ಲದೇ ಈ ಕೆರೆ ಅಭಿವೃದ್ಧಿಗೆ ಹೆಚ್ಚು ಕೂಲಿ ಕಾರ್ಮಿಕರು ಭಾಗವಹಿಸಬೇಕಿರುವುದರಿಂದ ಗ್ರಾಮದಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಐಇಸಿ ಸಂಯೋಜಕರು ಗ್ರಾಮ ಪಂಚಾಯಿತಿಗೆ ಭೇಟಿ ನೀಡಿ ಉದ್ಯೋಗ ಚೀಟಿ ಪಡೆದವರ ಪಟ್ಟಿ ಪಡೆಯಲಾಯಿತು. ಮನೆ ಮನೆ ಭೇಟಿ ನೀಡಿ ಕೆಲಸ ಬೇಡಿಕೆ ಸಲ್ಲಿಸುವಂತೆ ಹಾಗು ಯೋಜನೆಯಲ್ಲಿ ಪಾಲ್ಗೊಳ್ಳುವಂತೆ ಪ್ರೇರೇಪಣೆ ಮಾಡಲಾಯಿತು. ಇದರ ಪರಿಣಾಮ ಜನರು ಕೂಲಿ ಮಾಡಲು ಗ್ರಾಮ ಪಂಚಾಯಿತಿಗಳಿಗೆ ಭೇಟಿ ನೀಡಲು ಶುರು ಮಾಡಿದರು. ಪಂಚಾಯಿತಿಯಿಂದ ಕೂಲಿ ಬೇಡಿಕೆ

ಪಡೆದು ಕಾಮಗಾರಿ ಚಾಲನೆ ನೀಡಿ ಎನ್‌ಎಮ್‌ಆರ್ ದಾಖಲಿಸಿದರು.

**ಅನುಷ್ಠಾನ:** ಚಿಕ್ಕಕೆರೆಯ ಅಂಗಳದಲ್ಲಿ ಶೇಖರಣೆ–ಗೊಂಡಿದ್ದ ಹೂಳಿನ ಪ್ರಮಾಣಕ್ಕೆ ಅನುಗುಣವಾಗಿ ಗುಂಡಿ ತೆಗೆಯಲು ಕಾರ್ಮಿಕರಿಗೆ ಅಭಿಯಂತರರು ಮಾರ್ಕ್ ಮಾಡಿಕೊಟ್ಟರು. ಅದರಂತೆ ಕಾರ್ಮಿಕರು ಹೂಳನ್ನು ತೆಗೆದು ಕೆರೆ ಅಂಗಳದಿಂದ ಹೊರಹಾಕಿದರು. ತಂಡ ತಂಡವಾಗಿ ಕೂಲಿ ಕಾರ್ಮಿಕರು ಭಾಗವಹಿಸಿದ್ದರಿಂದ ಗ್ರಾಮದಲ್ಲಿ ಕೆಲಸವಿಲ್ಲದೆ ಕುಳಿತಿದ್ದ ಮಂದಿ ಕೂಡ ತಾನು ಭಾಗವಹಿಸುತ್ತೇನೆ ಎಂಬ ಭಾವನೆಯಿಂದ ಭಾಗವಹಿಸಿದರು. ಕೆರೆ ಅಂಗಳದ ತುಂಬ ಕೂಲಿ ಕಾರ್ಮಿಕರೇ ತುಂಬಿ ಕೆಲಸ ನಿರ್ವಹಿಸುತ್ತಿದ್ದ ದೃಶ್ಯ ಮನೆ ಸೂರೆಗೊಂಡಿತು.

ಅಭಿಯಂತರರು ಆಯಾ ಸಮಯದಲ್ಲಿ ಕಾಮಗಾರಿಯ ಚೆಕ್‌ಮೆಜರ್‌ಮೆಂಟ್ ಮಾಡಿ ಅಳತೆ ಪುಸ್ತಕದಲ್ಲಿ ದಾಖಲಿಸಿ ಗ್ರಾಮ ಪಂಚಾಯಿತಿಗೆ ನೀಡುತ್ತಿದ್ದರು. ಅದರಂತೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಕೆಲಸ ನಿರ್ವಹಿಸಿದ ಕೂಲಿ ಕಾರ್ಮಿಕರಿಗೆ ಸಕಾಲದಲ್ಲಿ ಕೂಲಿ ಪಾವತಿ ಮಾಡಿಸಿದರು. ಇದರಿಂದ ಕಾರ್ಮಿಕರಿಗೆ ಯೋಜನೆಯಲ್ಲಿ ಕೆಲಸ ನಿರ್ವಹಿಸಿದರೆ ಗ್ಯಾರಂಟಿ ಹಣ ಸಿಗುತ್ತದೆ ಎಂಬ ಭಾವನೆ ತಳೆಯುವಲ್ಲಿ ಈ ಗ್ರಾಮ ಪಂಚಾಯಿತಿ ಯಶಸ್ವಿಯಾಗಿದೆ.

ಹಾಳಾದ ಕೆರೆ ಈಗ ಅಭಿವೃದ್ಧಿ ಕಂಡಿದೆ. ಶೇಖರಣೆಗೊಂಡಿದ್ದ ಹೂಳು ಕೆರೆ ಏರಿ ಹೊರ ಅಂಗಳ ಸೇರಿದೆ. ನೀರಿನ ಶೇಖರಣೆ ಪ್ರಮಾಣ ಹೆಚ್ಚಳವಾಗುವುದಂತು ಖಂಡಿತ. ಇದೇ ತರಹ ಇನ್ನು ಗ್ರಾಮೀಣಾಭಿವೃದ್ಧಿ ಕಾಮಗಾರಿಗಳಲ್ಲಿ ಜನರು ಭಾಗವಹಿಸಿ ಕೆಲಸ ನಿರ್ವಹಿಸಿದರೆ ಗ್ರಾಮ ಅಭಿವೃದ್ಧಿಯಾಗುವಲ್ಲಿ ಸಹಕಾರಿಯಾಗುತ್ತದೆ.

ಉದ್ಯೋಗದ ಜೊತೆಗೆ ನಮ್ಮ ಹಳ್ಳಿಯ ಸಂಪ–ನ್ಮೂಲವನ್ನು ಸಂರಕ್ಷಿಸುವ ಜವಾಬ್ದಾರಿ ನಮ್ಮ ಮೇಲಿದೆ. ಇಂದು ನಾವು ಮಾಡುವ ಕಾರ್ಯ ನಮ್ಮ ಮುಂದಿನ ಪೀಳಿಗೆಗೆ ದಾರಿ ದೀಪವಾಗಲಿದೆ ಎಂದು ಗ್ರಾಮಸ್ಥರು ತಿಳಿಸಿದ್ದು ಯೋಜನೆಯಿಂದ ಅನುಕೂಲವಾಗಿದೆ ಎಂದು ತಿಳಿಸಿದ್ದಾರೆ. ■



**ಲೊಕ್ಕನಹಳ್ಳಿ ಗ್ರಾಮದ ಚಿಕ್ಕಕೆರೆ ಅಭಿವೃದ್ಧಿ ಕಾಮಗಾರಿ**



**ಲೊಕ್ಕನಹಳ್ಳಿ ಗ್ರಾಮ ಪಂಚಾಯಿತಿಯ ಆಂಡಿಪಾಳ್ಯ ಗ್ರಾಮದ ಕೆರೆ ಅಭಿವೃದ್ಧಿ ಕಾಮಗಾರಿ**

ಯಶೋಗಾಥೆ

# ಬೀದಿ ದೀಪದ ಸಮಸ್ಯೆಯ ನಿವಾರಣೆಗೆ ಶಾಶ್ವತ ಪರಿಹಾರ ಕಂಡುಕೊಂಡ ಹುಲಿಕುಂಟೆ ಗ್ರಾಮ ಪಂಚಾಯಿತಿ

**ಪ್ರಕಾಶ್ ಹೆಚ್.**
ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಹುಲಿಕುಂಟೆ ಗ್ರಾಮ ಪಂಚಾಯಿತಿ
ದೊಡ್ಡಬಳ್ಳಾಪುರ ತಾಲ್ಲೂಕು
ಬೆಂಗಳೂರು ಗ್ರಾಮಾಂತರ ಜಿಲ್ಲೆ.




**ಹುಲಿಕುಂಟೆ ಗ್ರಾಮ ಪಂಚಾಯಿತಿಯು ಹಳ್ಳಿ ಪ್ರದೇಶವಾಗಿರುವುದರಿಂದ ರಾತ್ರಿ ವೇಳೆ ಬೀದಿ ದೀಪಕ್ಕೆ ಆದ್ಯತೆ ನೀಡಿರುತ್ತಾರೆ. ಪಂಚಾಯಿತಿ ವ್ಯಾಪ್ತಿಯಲ್ಲಿ ಸುಮಾರು 480 ಬೀದಿ ದೀಪ ಅಳವಡಿಸಲಾಗಿರುತ್ತದೆ. ವಿದ್ಯುತ್ ಶಕ್ತಿಯ ಏರುಪೇರಿನಿಂದ ಆಗಾಗ ಎಲ್ಲಾ ಬೀದಿ ದೀಪಗಳು ಸುಟ್ಟು ಹೋಗುತ್ತಿವೆ.**

ಭಾರತ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯವು ಪ್ರತಿ ವರ್ಷ ಅತ್ಯುತ್ತಮ ಪಂಚಾಯತ್ ರಾಜ್ ಸಂಸ್ಥೆಗಳನ್ನು ಗುರುತಿಸಿ, ನಗದು ರೂಪದಲ್ಲಿ ಪ್ರೋತ್ಸಾಹಧನದೊಂದಿಗೆ ಪ್ರಶಸ್ತಿಗಳನ್ನು ನೀಡುತ್ತಾ ಬರುತ್ತಿದೆ. 2017 ರ ಪಂಚಾಯತ್ ಪುರಸ್ಕಾರಗಳ (2015–16 ನೇ ಸಾಲಿನ ಪ್ರಗತಿಯನ್ನಾಧರಿಸಿ)ನ್ನು ನೀಡುವ ಸಲುವಾಗಿ ಪಂಚಾಯತ್ ರಾಜ್ ಮಂತ್ರಾಲಯವು ಸಿದ್ದಪಡಿಸಿರುವ ಪ್ರಶ್ನಾವಳಿಗಳಿಗೆ ಅಂತರ್ ಜಾಲದ ಮೂಲಕ ಮಾಹಿತಿಯನ್ನು ಭರ್ತಿಗೊಳಿಸಬೇಕಾಗಿತ್ತು. ಅದರಂತೆ ರಾಜ್ಯದ 24 ಜಿಲ್ಲಾ ಪಂಚಾಯತಿಗಳು, 106 ತಾಲ್ಲೂಕು ಪಂಚಾಯಿತಿಗಳು ಹಾಗೂ 1788 ಗ್ರಾಮ ಪಂಚಾಯಿತಿಗಳು ಅಂತರ್ ಜಾಲದ ಮೂಲಕ ಪಂಚಾಯತ್ ಸಶಕ್ತೀಕರಣ ಪುರಸ್ಕಾರಗಳಿಗೆ ಮಾಹಿತಿಯನ್ನು ನೀಡಿದ್ದು, ಅದರಲ್ಲಿ ರಾಜ್ಯದ 17 ಜಿಲ್ಲಾ ಪಂಚಾಯತಿಗಳು, 34 ತಾಲ್ಲೂಕು ಪಂಚಾಯಿತಿಗಳು ಹಾಗೂ 313 ಗ್ರಾಮ ಪಂಚಾಯಿತಿಗಳು ಅಂತರ್ ಜಾಲದ ಮೂಲಕ ನೀಡಲಾದ ಮಾಹಿತಿಯನ್ನು ಫ್ರೀಜ್ ಮಾಡಿರುತ್ತಾರೆ. ಭರ್ತಿಗೊಳಿಸಲಾದ ಮಾಹಿತಿಯು ಪ್ರತಿ ಪಂ.ರಾಜ್ ಸಂಸ್ಥೆಗಳ ಹಂತದಲ್ಲಿ ಪರಿಶೀಲನೆಗೊಳಪಟ್ಟು ಮುಂದಿನ ಹಂತಕ್ಕೆ ಶಿಫಾರಸ್ಸುಗೊಂಡಿರುತ್ತವೆ. ಈ ರೀತಿಯಾಗಿ ಪಂ.ರಾಜ್ ಸಂಸ್ಥೆಗಳ ಮೂಲಕ ಶಿಫಾರಸ್ಸಾಗಿರುವ ಪಂ.ರಾಜ್ ಸಂಸ್ಥೆಗಳನ್ನು ರಾಜ್ಯ ಮಟ್ಟದ ಪಂಚಾಯಿತಿಗಳ ಪರಿಶೀಲನಾ ಪರಾಮರ್ಶೆ ಸಮಿತಿಯ ಮೂಲಕ ಕಿರುಪಟ್ಟಿಯನ್ನು ಸಿದ್ದಪಡಿಸಲಾಯಿತು. ಈ ಕಿರುಪಟ್ಟಿಗೆ ಅನುಸಾರವಾಗಿ ರಾಜ್ಯದಲ್ಲಿನ ಪಂಚಾಯತ್ ರಾಜ್ ಸಂಸ್ಥೆಗಳನ್ನು ರಾಜ್ಯ ಮಟ್ಟದ ಕ್ಷೇತ್ರ ಮಟ್ಟದ ತಪಾಸಣಾ ತಂಡದಿಂದ ಪ್ರಶಸ್ತಿ ಪ್ರಶ್ನಾವಳಿಗಳಿಗೆ ಅನುಸಾರವಾಗಿ ಭರ್ತಿಗೊಳಿಸಿದ ಮಾಹಿತಿಯನ್ನು ಹಾಗೂ ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಲಾಯಿತು. ಈ ಸಂದರ್ಭದಲ್ಲಿ ಕಿರುಪಟ್ಟಿಯಲ್ಲಿ ಪಂಚಾಯತಿ ಸಶಕ್ತೀಕರಣ ಪುರಸ್ಕಾರಕ್ಕಾಗಿ ಆಯ್ಕೆಯಾಗಿದ್ದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕು, ಹುಲಿಕುಂಟೆ ಗ್ರಾಮ ಪಂಚಾಯಿತಿಯು ಒಂದಾಗಿತ್ತು. ಈ ಗ್ರಾಮ ಪಂಚಾಯತಿಯಲ್ಲಿ 17 ಗ್ರಾಮಗಳಿದ್ದು, ಸುಮಾರು 7500 ಜನಸಂಖ್ಯೆ ಹೊಳದಿರುತ್ತದೆ. ದೊಡ್ಡಬಳ್ಳಾಪುರದಿಂದ 22 ಕಿ.ಮೀ ದೂರದಲ್ಲಿರುವ ಹುಲಿಕುಂಟೆಯು ನೆಲಮಂಗಲ ತಾಲ್ಲೂಕು ಮತ್ತು ತುಮಕೂರು ಜಿಲ್ಲೆಯ ಕೊರಟಗೆರೆ


ತಾಲ್ಲೂಕಿಗೆ ಹೊಂದಿಕೊಂಡಿರುತ್ತದೆ. ರಾಷ್ಟ್ರೀಯ ಹೆದ್ದಾರಿ 207 ಹುಲಿಕುಂಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿದ್ದು, ಪಂಚಾಯಿತಿ ವ್ಯಾಪ್ತಿಯನ್ನು ಎರಡು ಭಾಗವಾಗಿ ವಿಗಂಡಿಸಿರುತ್ತದೆ.

ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಯಾವುದೇ ಕಾರ್ಖಾನೆ ಅಥವಾ ವಾಣಿಜ್ಯ ಕಟ್ಟಡಗಳು ಹಾಗೂ ಪರಿವರ್ತ ವಸತಿ ಬಡಾವಣೆಯೂ ಇಲ್ಲದಿರುವುದರಿಂದ ಗ್ರಾಮ ಪಂಚಾಯಿತಿಯ ಸ್ವಂತ ಆದಾಯ ಕಡಿಮೆ ಇದ್ದು, ಎಲ್ಲಾ ಮೂಲಗಳಿಂದ ಸೇರಿ ಒಟ್ಟು ಸುಮಾರು ರೂ 10.00 ಲಕ್ಷಗಳ ಕರ ವಸೂಲಾತಿಯಾಗುತ್ತದೆ.

ಹುಲಿಕುಂಟೆ ಗ್ರಾಮ ಪಂಚಾಯಿತಿಯು ತನ್ನ ವ್ಯಾಪ್ತಿಯ ಜನರಿಗೆ ಮೂಲ ಸೌಕರ್ಯ ಕಲ್ಪಿಸುವ ನಿಟ್ಟಿನಲ್ಲಿ ರಸ್ತೆ, ಚರಂಡಿ, ಕುಡಿಯುವ ನೀರಿನ ಸೌಲಭ್ಯ ಹಾಗೂ ಬೀದಿ ದೀಪ ವ್ಯವಸ್ಥೆಗೆ ಆದ್ಯತೆ ನೀಡಿದೆ.

ಹುಲಿಕುಂಟೆ ಗ್ರಾಮ ಪಂಚಾಯಿತಿಯು ಹಳ್ಳಿ ಪ್ರದೇಶವಾಗಿರುವುದರಿಂದ ರಾತ್ರಿ ವೇಳೆ ಬೀದಿ ದೀಪಕ್ಕೆ ಆದ್ಯತೆ ನೀಡಿರುತ್ತಾರೆ. ಪಂಚಾಯಿತಿ ವ್ಯಾಪ್ತಿಯಲ್ಲಿ ಸುಮಾರು 480 ಬೀದಿ ದೀಪ ಅಳವಡಿಸಲಾಗಿರುತ್ತದೆ. ವಿದ್ಯುತ್ ಶಕ್ತಿಯ ಏರುಪೇರಿನಿಂದ ಆಗಾಗ ಎಲ್ಲಾ ಬೀದಿ ದೀಪಗಳು ಸುಟ್ಟು ಹೋಗುತ್ತಿವೆ. ಅಲ್ಲದೇ ಹಗಲಿನಲ್ಲಿಯೂ ಬೀದಿ ದೀಪಗಳು ಉರಿಯುತ್ತಿರುತ್ತವೆ.ಈ ದೀಪಗಳನ್ನು ಆರಿಸದೇ ಇರುವ ಸಮಸ್ಯೆಯಿಂದ ಹೊರಬರಲು Street Light Timer Switch ಅಳವಡಿಸಲು ತೀರ್ಮಾನಿಸಿರುತ್ತಾರೆ.

Street Light Timer Controllerಗೆ Sensor ಅಳವಡಿಸಲಾಗಿದೆ. ಸರಾಸರಿ 10 ರಿಂದ 15 ಬೀದಿ ದೀಪಕ್ಕೆ ಒಂದು ಕಂಟ್ರೋಲ್‌ನ್ನು ಹಾಕಿ ಆ ಕಂಟ್ರೋಲ್ Sensor ಗೆ ಅಳವಡಿಸಿ, ಏಕ ಕಾಲಕ್ಕೆ 10 ರಿಂದ 15 ಬೀದಿ



**Street Light Timer Controller**

ದೀಪಗಳೂ ರಾತ್ರಿ ವೇಳೆ ಹತ್ತಿಕೊಳ್ಳುವಂತೆ ಮತ್ತು ಬೆಳಿಗ್ಗೆ ನಂದುವಂತೆ ಸ್ವಯಂ ಚಾಲಿತವಾಗಿ ಕಾರ್ಯನಿರ್ವಹಿಸಲು ಕ್ರಮಕೈಗೊಂಡಿರುತ್ತಾರೆ. ಹೈ Voltage ಮತ್ತು Short circuitಗಳಂತಹ ಅವಘಡಗಳನ್ನು ತಪ್ಪಿಸಲು, ಅದರಿಂದ Bulbಗಳ ರಕ್ಷಣೆ ಮಾಡಲು MCBಯನ್ನು ಅಳವಡಿಸಲಾಗಿದೆ.

ಈ ವ್ಯವಸ್ಥೆಯಿಂದಾಗಿ ಬೀದಿ ದೀಪಗಳು ದೀರ್ಘಕಾಲದವರೆಗೂ ಬಾಳಿಕೆ ಬರುತ್ತಿದ್ದು, ಆಗಾಗ ಬೀದಿ ದೀಪಗಳ ಖರೀದಿಗೆ ಹಣ ಪೋಲಾಗುವುದನ್ನು ತಪ್ಪಿಸಿದಂತಾಗುತ್ತಿದೆ. ಹಗಲಿನಲ್ಲಿಯೂ ಬೀದಿ ದೀಪಗಳು ಉರಿಯುವುದನ್ನು ನಿಲ್ಲಿಸಿದ್ದರಿಂದ ಸಾಕಷ್ಟು ವಿದ್ಯುತ್ ಉಳಿತಾಯ ಮಾಡಿದಂತಾಗಿದೆ.

ಈ ಮೇಲಿನ ಎಲ್ಲಾ ಪ್ರಕ್ರಿಯೆಯನ್ನು ಕೇವಲ 50 ಡಿವೈಸ್ ಗಳನ್ನು ಖರೀದಿಸಿ ಪೂರ್ಣಗೊಳಿಸಲಾಗಿದೆ. ಪ್ರತಿ ಡಿವೈಸ್ ಗೆ ಸುಮಾರು ರೂ.900/– ಗಳ ವೆಚ್ಚ ತಗಲಿರುತ್ತದೆ. ಈ ಯೋಜನೆಗೆ ಗ್ರಾಮ ಪಂಚಾಯಿತಿಯ 14 ನೇ ಹಣಕಾಸು ಯೋಜನೆಯಡಿ ಕ್ರಿಯಾ ಯೋಜನೆಯನ್ನು ತಯಾರಿಸಿ. ರೂ 60,000,00 (ಅರವತ್ತು ಸಾವಿರ ರೂಪಾಯಿ) ಗಳಿಗೆ ಅನುಮೋದನೆಯನ್ನು ಪಡೆದು ಕಾಮಗಾರಿ ಪ್ರಾರಂಭಿಸಿರುತ್ತಾರೆ.

ಹೀಗೆ ಹುಲಿಕುಂಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ Street Light Sensor ಅಳವಡಿಸಿ, ಸಮರ್ಪಕವಾಗಿ ಬೀದಿ ದೀಪ ನಿರ್ವಹಣೆ ಮಾಡುತ್ತಿರುವ ಬಗ್ಗೆ ಹುಲಿಕುಂಟೆ ಗ್ರಾಮ ಪಂಚಾಯಿತಿಯು ಹೆಮ್ಮೆ ಪಡುತ್ತಿದೆ. ಈ ಕಾರ್ಯದ ಬಗ್ಗೆ ಸಾರ್ವಜನಿಕರಿಂದಲೂ ಮೆಚ್ಚುಗೆ ವ್ಯಕ್ತವಾಗಿದೆ. ವಿದ್ಯುತ್ ಶಕ್ತಿಯ ಮಿತವ್ಯಯ ಬಳಕೆಯ ಕುರಿತು ಇತ್ತೀಚೆಗೆ 4ನೇ ರಾಜ್ಯ ಹಣಕಾಸು ಆಯೋಗ ಅಧ್ಯಕ್ಷರು ಮತ್ತು ಇತರ ಸದಸ್ಯರೊಂದಿಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ. ರಾಜ್) ಹಾಗೂ ಹಿರಿಯ ಅಧಿಕಾರಿಗಳೊಂದಿಗೆ ಇವರು ಚರ್ಚೆ ಮಾಡುವ ಸಂದರ್ಭದಲ್ಲಿ ಈ ವಿಷಯವು ಸಹಿತ ಪ್ರಸ್ತಾಪವಾಗಿರುತ್ತದೆ. ಈ ನಾವಿನ್ಯತಾ ಚಟುವಟಿಕೆಯನ್ನು ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳು ಅಳವಡಿಸಿಕೊಂಡಲ್ಲಿ ವಿದ್ಯುತ್ ಶಕ್ತಿಯ ಬಳಕೆಯಲ್ಲಿ ಆಗುತ್ತಿರುವ ಅಪವ್ಯಯವನ್ನು ಕಡಿಮೆ ಮಾಡಿದಂತಾಗುವುದು. ಅಲ್ಲದೇ ಈ ಭೂಮಿಯ ತಾಪವನ್ನು ಕಡಿಮೆಮಾಡುವಲ್ಲಿ ಎಲ್ಲಾ ಗ್ರಾಮ ಪಂಚಾಯಿತಿಗಳು ತಮ್ಮ ತೃಣ ಮಾತ್ರದ ಸೇವೆಯನ್ನು ಸಲ್ಲಿಸಿದಂತಾಗುತ್ತದೆ.

ಯಶೋಗಾಥೆ

ಡಾ॥ ಉಷಾಶ್ರೀಧರ್
ನೇತ್ರ ತಜ್ಞರು
ದೂರವಾಣಿ; 9448387698

**ಕೀಟನಾಶಕಗಳನ್ನು ಬೆಳೆಗಳಿಗೆ ಸಿಂಪಡಿಸುವಾಗ ವಿರುದ್ಧ ದಿಕ್ಕಿನಿಂದ ಗಾಳಿ ಜೋರಾಗಿ ಬೀಸಿದರೆ ಅದು ಕಣ್ಣಿಗೆ ಹೋಗುವ ಸಾಧ್ಯತೆ ಹೆಚ್ಚು ಆಗ ತಕ್ಷಣವೇ ಶುದ್ಧ ತಣ್ಣೀರಿನಿಂದ ಕಣ್ಣನ್ನು ತೊಳೆದುಕೊಳ್ಳಬೇಕು. ಉರಿ ಜಾಸ್ತಿ ಆದರೆ ನೇತ್ರ ತಜ್ಞರಿಗೆ ತೋರಿಸಬೇಕು ಕೀಟನಾಶಕಗಳನ್ನು ಬೆಳೆಗಳಿಗೆ ಸಿಂಪಡಿಸುವಾಗ ಕಣ್ಣುಗಳನ್ನು ಸಂಪೂರ್ಣವಾಗಿ ರಕ್ಷಿಸುವಂತ ಕನ್ನಡಕವನ್ನು ಉಪಯೋಗಿಸಬೇಕು.**

# ಗ್ರಾಮೀಣ ಜನರಲ್ಲಿ ಕಣ್ಣಿನ ಆರೈಕೆ

ಕಣ್ಣು ಮನುಷ್ಯನ ಬಹು ಮುಖ್ಯ ಅಂಗ. ಅದನ್ನು ಕಾಪಾಡಿಕೊಳ್ಳಬೇಕಾದ್ದು ನಮ್ಮ ಆದ್ಯ ಕರ್ತವ್ಯ. ಸಾಮಾನ್ಯವಾಗಿ ಗ್ರಾಮೀಣ ಜನರಲ್ಲಿ ಕಣ್ಣುಗಳಿಗೆ ಪೆಟ್ಟು ಮತ್ತು ಸೊಂಕು ತಗಲುವ ಸಾಧ್ಯತೆಗಳು ತುಂಬಾ ಇರುತ್ತದೆ. ಆದ್ದರಿಂದ ಅವುಗಳ ಬಗ್ಗೆ ಹೇಗೆ ಎಚ್ಚರಿಕೆ ವಹಿಸಬೇಕು ಮತ್ತು ಕಣ್ಣಿನ ಕೆಲವು ಖಾಯಿಲೆಗಳು ಅವುಗಳ ನಿರ್ವಹಣೆ ಹೇಗೆ  ಎಂಬುದರ ಬಗ್ಗೆ ತಿಳಿಯೋಣ.

ಗ್ರಾಮೀಣ  ಜನರಲ್ಲಿ ಸಹಜವಾಗಿ ಎತ್ತು ಹಸುಗಳ ಕೊಂಬಿನಿಂದ (bull gore injury)  ತಗಲುವ  ಪೆಟ್ಟು ಸರ್ವೇ ಸಾಮಾನ್ಯ. ಇದು ತುಂಬಾ ತೀವ್ರ ತರವಾಗಿ ಆದರೆ ಕಣ್ಣು ಗುಡ್ಡೆ ಒಡೆದು ಹೋಗುವ ಸಂಭವ ಹೆಚ್ಚು. ಈ ತರಹದ ಪೆಟ್ಟಿನಿಂದ ದೃಷ್ಟಿ ನಾಶವಾಗಬಹುದು, ರಕ್ತ ಸೋರುವಿಕೆ, ವಿಪರೀತ ನೋವು ಆದರೆ ತಕ್ಷಣವೇ



ಕಣ್ಣಿನ ಆಸ್ಪತ್ರೆ ಅಂದರೆ tertiary care centreಗೆ ಹೋಗಬೇಕು.  ಈ ರೀತಿ ಪೆಟ್ಟು ಬಿದ್ದಾಗ ಕಣ್ಣನ್ನು ಹಿಂಡುವುದು, ಉಜ್ಜುವುದು ಮಾಡಬಾರದು. ಇದಕ್ಕೆ ಶಸ್ತ್ರ ಚಿಕಿತ್ಸೆ ಅಗತ್ಯವಾಗಿ ಬೇಕಾಗುತ್ತದೆ. ಎಷ್ಟು ತೀವ್ರತರವಾಗಿ ಪೆಟ್ಟು ಬಿದ್ದಿದೆ ಎನ್ನುವುದರ ಮೇಲೆ ದೃಷ್ಟಿ ಪುನಃ ಹೇಗೆ ಬರುತ್ತದೆ ಎನ್ನುವುದನ್ನು ನಿರ್ಧರಿಸುತ್ತೇವೆ. ಆದಷ್ಟು ಶೀಘ್ರವಾಗಿ ಇದಕ್ಕೆ ಚಿಕಿತ್ಸೆ ಕೊಡಿಸಬೇಕು. ಪ್ರಾಣಿಗಳ ಹತ್ತಿರ ಹೋಗುವಾಗ, ಅವುಗಳಿಗೆ ಮೇವು ಹಾಕುವಾಗ ಅವುಗಳ ಮನಸ್ಥಿತಿ ನೋಡಿಕೊಂಡು ವ್ಯವಹರಿಸಬೇಕು.

ಕಡ್ಡಿ, ಸೌದೆ ಕಡಿಯುವಾಗ ಸ್ವಲ್ಪವೇ ಪೆಟ್ಟದರೂ ಹತ್ತಿರದ ಕಣ್ಣಿನ ವೈದ್ಯರಿಗೆ ತೋರಿಸಿ ಚಿಕಿತ್ಸೆ ಪಡೆದುಕೊಳ್ಳಬೇಕು. ತೀವ್ರತರವಾಗಿ ಆದರೆ ದೊಡ್ಡ ಕಣ್ಣಿನ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆಯಬೇಕು. ಕರಿ ಗುಡ್ಡೆ ಹೊಡೆದು ಹೋಗಿದ್ದರೆ ಅದಕ್ಕೆ ಶಸ್ತ್ರ ಚಿಕಿತ್ಸೆ ಅಗತ್ಯವಾಗಿ ಬೇಕಾಗುತ್ತದೆ.

ಹಸಿ ಸೌದೆ, ಗಿಡ,ಕಡ್ಡಿ ತಗುಲಿದರೆ ತಗುಲಿದ ಗಾಯದಿಂದ ಫಂಗಲ್/ಬ್ಯಾಕ್ಟೀರಿಯಲ್ ಅಲ್ಸರ್ ಆಗುವ ಸಾಧ್ಯತೆ ಇರುತ್ತದೆ. ಗಿಡಗಳ ಎಲೆ ಕಬ್ಬಿನ ಸೋಗು ಇದೆಲ್ಲ ತಗುಲಿದರೆ ಮೊದಲಿಗೆ ಏನೂ ತೊಂದರೆ ಕಾಣದಿರಬಹುದು ಆದರೆ ಕೆಲವುದಿನಗಳ ನಂತರ ಕಣ್ಣು ತುಂಬಾ ಕೆಂಪಾಗಿ ನೀರು ಸೋರುವುದು, ನೋವಾಗುವುದು ಆದರೆ ತಕ್ಷಣವೇ ಕಣ್ಣಿನ ವೈದ್ಯರಲ್ಲಿ ತೋರಿಸಿ ಅವರು ಹೇಳಿದ ಪ್ರಕಾರ ಔಷಧಿಗಳನ್ನು ಉಪಯೋಗಿಸಬೇಕು. ಇಲ್ಲದಿದ್ದರೆ ಇದರಿಂದ ಕಣ್ಣಿಗೆ ಸೋಂಕು ತಗುಲಿ ಕಣ್ಣಿನಲ್ಲಿ ಕೀವು ಕಟ್ಟಿ ಕೊಳ್ಳಬಹುದು ಮತ್ತು ದೃಷ್ಟಿ ಕಳೆದುಕೊಳ್ಳುವ ಸಾಧ್ಯತೆ ಇರುತ್ತದೆ. ಇದನ್ನು ತಡೆಗಟ್ಟಲು ಆದಷ್ಟು ಜಾಗ್ರತೆಯಿಂದ ಕೆಲಸ ಮಾಡಬೇಕು, ಹಾಗೂ ತಗುಲಿದರೆ ತಕ್ಷಣವೇ ಕಣ್ಣಿನ ವೈದ್ಯರಲ್ಲಿ ತೋರಿಸಿ ಅವರು ಹೇಳಿದ ಪ್ರಕಾರ ಔಷಧಿಗಳನ್ನು ಉಪಯೋಗಿಸಬೇಕು

ಸಾಮಾನ್ಯವಾಗಿ ಕೀಟನಾಶಕಗಳನ್ನು ಬೆಳೆಗಳಿಗೆ ಸಿಂಪಡಿಸುವಾಗ ವಿರುದ್ಧ ದಿಕ್ಕಿನಿಂದ ಗಾಳಿ ಜೋರಾಗಿ ಬೀಸಿದರೆ ಅದು ಕಣ್ಣಿಗೆ ಹೋಗುವ ಸಾಧ್ಯತೆ ಹೆಚ್ಚು ಆಗ ತಕ್ಷಣವೇ ಶುದ್ಧ ತಣ್ಣೀರಿನಿಂದ ಕಣ್ಣನ್ನು ತೊಳೆದುಕೊಳ್ಳಬೇಕು. ಉರಿ ಜಾಸ್ತಿ ಆದರೆ ನೇತ್ರ ತಜ್ಞರಿಗೆ ತೋರಿಸಬೇಕು ಕೀಟನಾಶಕಗಳನ್ನು ಬೆಳೆಗಳಿಗೆ ಸಿಂಪಡಿಸುವಾಗ ಕಣ್ಣುಗಳನ್ನು ಸಂಪೂರ್ಣವಾಗಿ ರಕ್ಷಿಸುವಂತ ಕನ್ನಡಕವನ್ನು ಉಪಯೋಗಿಸಬೇಕು. ಕೀಟನಾಶಕಗಳ ಡಬ್ಬಗಳ ಮುಚ್ಚಳಗಳನ್ನು ತೆಗೆಯುವಾಗ ಎಚ್ಚರಿಕೆಯಿಂದ ತೆಗೆಯಬೇಕು. ಇಲ್ಲದಿದ್ದಲ್ಲಿ ಕಣ್ಣಿಗೆ ಬೀಳುವ ಸಾಧ್ಯತೆ ಇರುತ್ತದೆ.

ಒಣ ಸುಣ್ಣವನ್ನು ಕರಗಿಸುವ ಸಂದರ್ಭದಲ್ಲಿ ನೀರನ್ನು ಸುರಿದಾಗ ಅದು ತಕ್ಷಣವೇ ಕಣ್ಣಿಗೆ ಬೀಳುವ ಸಾಧ್ಯತೆ ಹೆಚ್ಚು. ಇದು ಕಣ್ಣಿಗೆ ತುಂಬಾ ಅಪಾಯಕಾರಿ. ಕಣ್ಣನ್ನು ಕಳೆದುಕೊಳ್ಳುವ ಸಾಧ್ಯತೆ ಇರುತ್ತದೆ. ಆದರೆ ಕಣ್ಣಿಗೆ ಸುಣ್ಣ ಬಿದ್ದರೆ ತಕ್ಷಣವೇ ಕಣ್ಣನ್ನು ತಣ್ಣೀರಿನಿಂದ ತೊಳೆಯಬೇಕು. ರೆಪ್ಪೆಯನ್ನು ಅಗಲವಾಗಿಸಿ ಹತ್ತಿರದಲ್ಲೇ ನಲ್ಲಿ ಅಥವಾ ಹೋಸ್ ಪೈಪ್ ಇದ್ದರೆ ಅದರಿಂದಲೇ ಚೆನ್ನಾಗಿ ನೀರು ಬಿಟ್ಟು ತೊಳೆಯಬೇಕು. ಮತ್ತು ಕಣ್ಣಿನ ಮುಲಾಮನ್ನು ಹಾಕಬೇಕು. ತಕ್ಷಣವೇ ತಜ್ಞವೈದ್ಯರಲ್ಲಿ ತೋರಿಸಿ ಚಿಕಿತ್ಸೆ ಪಡೆಯಬೇಕು. ಚಿಕಿತ್ಸೆ ಪಡೆಯದಿದ್ದರೆ ಕಣ್ಣು ಇಂಗಿ ಹೋಗುವ ಸಾಧ್ಯತೆ ಇರುತ್ತದೆ. ಹಾಗೆಯೇ ಕಣ್ಣಿಗೆ ದೂಳು ಕಸ ಏನಾದರೂ ಬಿದ್ದರೂ ಇದೇ ರೀತಿ ಮಾಡಬೇಕು. ಕಣ್ಣು ಹಾಗೇ ಚುಚ್ಚುತ್ತಾಯಿದ್ದರೆ ತಜ್ಞವೈದ್ಯರಲ್ಲಿ ತೋರಿಸಿ ಚಿಕಿತ್ಸೆ ಪಡೆಯಬೇಕು. ವಾಹನ ನಡೆಸುವಾಗ full covering helmet ಅಥವಾ ಕನ್ನಡಕ ಧರಿಸಬೇಕು.

ಕಣ್ಣಿನಲ್ಲಿ ಪೊರೆ ಬಂದಾಗ ದೃಷ್ಟಿ ಮಂಜು ಮಂಜಾಗಿ ಮಸುಕಾಗಿ ಕಾಣತ್ತೆ. ದೂರದಿಂದ ಬರೋವ್ಯಕ್ತಿಗಳ ಮುಖಚಹರೆ ಗೊತ್ತಾಗುವುದಿಲ್ಲ. ಈ ರೀತಿ ಅನ್ನಿಸಿದಾಗ ಬಿಳಿ ಬಣ್ಣದ ಲೈಟ್ ಕಲರ್ ಕಲರ್ ಆಗಿ ಕಾಣಬಹುದು. ಒಂದು ಕಣ್ಣನ್ನು ಮುಚ್ಚಿಕೊಂಡು ಇನ್ನೊಂದು ಕಣ್ಣಿನಿಂದ ನೋಡಬೇಕು ಆವಾಗ ನಮಗೆ ಗೊತ್ತಾಗತ್ತೆ ಯಾವ ಕಣ್ಣಿನಲ್ಲಿ ಕಡಿಮೆ ದೃಷ್ಟಿ ಕಾಣುತ್ತದೆಂದು. ವಿವಿದ ಕಡೆ ಜರುಗುವ ನೇತ್ರ ಚಿಕಿತ್ಸಾ ಶಿಬಿರಗಳಲ್ಲಿ ಕಣ್ಣಿನ ಪೊರೆಯ ಶಸ್ತ್ರ ಚಿಕಿತ್ಸೆಯನ್ನು ಮಾಡಿಸಿಕೊಳ್ಳಬಹುದು. ಕೆಲವು ಸಲ ಪೊರೆಯನ್ನು ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳದೆ ಹಾಗೆಯೆಬಿಟ್ಟರೆ ಒಡೆದು ಹೋಗುವ ಸಂಭವವಿರುತ್ತದೆ. ಆ ರೀತಿ ಆದಾಗ ಕಂಡು ಬರುವ ಲಕ್ಷಣವೆಂದರೆ, ಇದ್ದಕ್ಕಿದ್ದಂತೆ ಕಣ್ಣು ತುಂಬಾ ಕೆಂಪಾಗುವುದು, ನೋವಾಗುವುದು, ಆ ಭಾಗದಲ್ಲಿ ತುಂಬಾ ತಲೆ ನೋಯುವುದು, ವಾಂತಿನೂ ಆಗಬಹುದು. ಈ ರೀತಿ ಆದಲ್ಲಿ ಇದಕ್ಕೆ ತಕ್ಷಣವೇ ಶಸ್ತ್ರ ಚಿಕಿತ್ಸೆ ಮಾಡಿಸಬೇಕು. ಇಲ್ಲದಿದ್ದಲ್ಲಿ ದೃಷ್ಟಿ ಕಳೆದುಕೊಳ್ಳುವ ಸಾಧ್ಯತೆ ಇರುತ್ತದೆ. ಇದನ್ನು ತಡೆಗಟ್ಟಲು ಸರ್ಕಾರ ಮತ್ತು ಖಾಸಗಿಯವರು ಅನೇಕ ಕಡೆ ಐ ಕ್ಯಾಂಪ್ ಮಾಡುತ್ತಿದ್ದು, ಅಲ್ಲಿ ಕಣ್ಣಿನ ಪೊರೆಯ ಶಸ್ತ್ರ ಚಿಕಿತ್ಸೆಯನ್ನು ಮಾಡಿಸಿಕೊಳ್ಳಬಹುದು.

ಕಣ್ಣಿನ ಪೊರೆಯ ಶಸ್ತ್ರ ಚಿಕಿತ್ಸೆಯಲ್ಲಿ ಕಣ್ಣಿನ ಒಳಗಡೆ ಕೃತಕ ಮಸೂರವನ್ನು ಅಳವಡಿಸುತ್ತಾರೆ. ಇದರಿಂದ ಕನ್ನಡಕ ಇಲ್ಲದೇನೆ ದೂರ ದೃಷ್ಟಿ ಚೆನ್ನಾಗಿರುತ್ತದೆ. ಶಸ್ತ್ರ ಚಿಕಿತ್ಸೆಯ ನಂತರ ಕಣ್ಣುಗಳನ್ನು ಚೆನ್ನಾಗಿ ನೋಡಿಕೊಳ್ಳಬೇಕು. ತಜ್ಞರು ಹೇಳಿದ ಪ್ರಕಾರ ಔಷಧಿಗಳನ್ನು ಉಪಯೋಗಿಸಬೇಕು. ಕಾಲಕಾಲಕ್ಕೆ ಪರೀಕ್ಷೆ ಮಾಡಿಸಬೇಕು, ಹಾಗೆ ಮಾಡದಿದ್ದಲ್ಲಿ ಕಣ್ಣಿಗೆ ಸೊಂಕು ತಗಲುವ ಸಾದ್ಯತೆ ಹಚ್ಚಾಗಿರುತ್ತದೆ.

## ಗ್ಲಾಕೋಮಾ

ಗ್ಲಾಕೋಮಾ ಅಂದರೆ ಕಪ್ಪು ನೀರಿನ ಕಾಯಿಲೆ ಅಥವಾ ಕಣ್ಣಿನ ಒತ್ತಡ ಅಂತ ಹೇಳ್ತೀವಿ. ಈ ಕಾಯಿಲೆ ಸೈಲೆಂಟ್ ಕಿಲ್ಲರ್ ಆಫ್ ದ ವಿಷನ್, ಅಂತ ಹೇಳ್ತೀವಿ. ಅಂದ್ರೆ ಏನೂ ಸೂಚನೆ ಇಲ್ಲದೇನೆ ನಿಧಾನವಾಗಿ ಜನಗಳು ದೃಷ್ಟಿಯನ್ನು ಕಳೆದುಕೊಂಡುಬಿಡುತ್ತಾರೆ. ಗ್ಲಾಕೋಮಾ ಇರುವವರು ನಿಯಮಿತವಾಗಿ ಕಣ್ಣಿನ ಪರೀಕ್ಷೆ ಮಾಡಿಸಿಕೊಳ್ಳಬೇಕು ಮತ್ತು ಔಷದಿಗಳನ್ನು ಹಾಕಿಕೊಳ್ಳಬೇಕು. ಇಲ್ಲದಿದ್ದರೆ ಖಾಯಿಲೆ ತುಂಬಾ ಉಲ್ಬಣವಾದಾಗಲೇ ಗೊತ್ತಾಗುವುದು ಕಣ್ಣು ಕಾಣ್ತಾಯಿಲ್ಲಾಂತ.

ಮೊದಮೊದಲು ಸ್ವಲ್ಪ ಮಂದ ಬೆಳಕಿನಲ್ಲಿ ಎತ್ತರ ತಗ್ಗು ಪ್ರದೇಶ ಕಾಣಿಸೊಲ್ಲ. ದೃಷ್ಟಿ ಮುಸುಕಾಗಿ ಕಾಣಿಸುತ್ತೆ.

ಇನ್ನೂ ತೀವ್ರವಾದ ಸಂದರ್ಭದಲ್ಲಿ ಊಟದ ತಟ್ಟೆ ಪಕ್ಕದಲ್ಲಿದ್ದರೂ ಗೊತ್ತಾಗಲ್ಲ. ದೃಷ್ಟಿ ಹೇಗಿರುತ್ತೆ ಅಂದ್ರೆ, ಕುದುರೆಗೆ ಜೀನು ಹಾಕಿದರೆ ಹೇಗೆ ಕೇವಲ ನೇರವಾಗಿ ಮಾತ್ರ ನೋಡತ್ತೊ ಹಾಗ್ರೆಕ್ಕಪಕ್ಕದಲ್ಲಿರುವ ವಸ್ತು ವ್ಯಕ್ತಿ ಏನು ಗೊತ್ತಾಗಲ್ಲ. ಪಕ್ಕದಲ್ಲಿರುವವರನ್ನು ನೋಡಬೇಕೂ ಅಂದ್ರೆ ಕತ್ತನ್ನು ತಿರುಗಿಸಿಯೇ ನೋಡಬೇಕು.ಅದಕ್ಕೆ ಇದನ್ನು ತಡೆಗಟ್ಟಲು 40 ವರ್ಷದ ನಂತರ ಪ್ರತಿಯೊಬ್ಬರು ಕಣ್ಣಿನ ತಜ್ಞರ ಹತ್ತಿರ ಪರೀಕ್ಷೆ ಮಾಡಿಸಿಕೊಳ್ಳಬೇಕು. ಪ್ರತೀ ವರ್ಷನೂ ತಪ್ಪದೇ ಪರೀಕ್ಷೆ ಮಾಡಿಸಿಕೊಳ್ಳುತ್ತಿರಬೇಕು. ಗ್ಲಾಕೋಮಾ ಇದೆ ಅಂತ ತಿಳಿದುಬಂದರೆ, ವೈದ್ಯರು ಏನು ಔಷದಿಗಳನ್ನು ಕೊಡುತ್ತಾರೋ ಅದನ್ನು ಸರಿಯಾಗಿ ಉಪಯೋಗಿಸಬೇಕು. ಸುಮಾರು ರೋಗಿಗಳು ಇದನ್ನು ಉದಾಸೀನದಿಂದ ನಿಲ್ಲಿಸಿಬಿಡುತ್ತಾರೆ, ಹಾಗೆ ಖಂಡಿತಾ ಮಾಡಬಾರದು. ಈ ಔಷದಿಗಳಿಂದ ಏನಿದ್ದರೂ ಮುಂದೆ ಇನ್ನೂ ಹೆಚ್ಚಿನ ತೊಂದರೆಯಾಗುವುದನ್ನು ತಪ್ಪಿಸಬಹುದು ಮತ್ತು ಒತ್ತಡವನ್ನು ನಿಯಂತ್ರಿಸಬಹುದು. ಈ ಔಷದಿಗಳನ್ನು ನಿಯಮಿತವಾಗಿ ಉಪಯೋಗಿಸಬೇಕು, ಇಂಥಹ ರೋಗಿಗಳು 'ಒಂದು ಹೊತ್ತು ಊಟ ಬೇಕಾದ್ರು ಬಿಡಬಹುದು ಗ್ಲಾಕೋಮಾ ಔಷದಿ ಮಾತ್ರ ಬಿಡಬಾರದು, ಇದರಿಂದಾನೆ ತಿಳ್ಕೊಬಹುದು ಔಷದಿ ಎಷ್ಟು ಅಗತ್ಯ ಅಂತ, ಕಾಲಕಾಲಕ್ಕೆ ತಜ್ಞ ವೈದ್ಯರಿಂದ ಕಣ್ಣನ್ನು ಸಹ ಪರೀಕ್ಷೆ ಮಾಡಿಸಿಕೊಳ್ಳುತ್ತಿರಬೇಕು. ಕೆಲವೊಂದು ಸಲ ಔಷದಿಯಿಂದ ಒತ್ತಡವನ್ನು ಕಡಿಮೆ ಮಾಡಲಾಗದಿದ್ದರೆ ಶಸ್ತ್ರ ಚಿಕಿತ್ಸೆ ಮಾಡಬೇಕಾಗುತ್ತದೆ.

ರಕ್ತದೊತ್ತಡ (ಬಿ.ಪಿ) ಮತ್ತು ಸಕ್ಕರೆ ಖಾಯಿಲೆಗಳು ನಿಯಂತ್ರಣದಲ್ಲಿ ಇಲ್ಲ ಅಂದ್ರೆ ಕಣ್ಣಿಗೆ ತುಂಬಾ ತೊಂದರೆ ಆಗುವ ಸಂಭವ ಇರುತ್ತದೆ. ಬಿ.ಪಿ ಜಾಸ್ತಿ ಆದ್ರೆ ಬ್ರೇನ್‌ನಲ್ಲಿ ಹೆಮರೇಜ್ ಆಗಬಹುದು. ಅದರಿಂದ ಕಣ್ಣು ಕಾಣದಾಗಬಹುದು. ಕಣ್ಣಿನ ರಕ್ತನಾಳಗಳಲ್ಲಿ ಬ್ಲಾಕ್ ಆಗಿ ಅದರಿಂದಲೂ ದೃಷ್ಟಿಗೆ ತೊಂದರೆಯಾಗತ್ತೆ.ಸಕ್ಕರೆ ಖಾಯಿಲೆಯಿಂದಲೂ ಕಣ್ಣಿಗೆ ತುಂಬಾ ತೊಂದರೆ ಆಗುವ ಸಂಭವ ಇದೆ. ಕಣ್ಣಿನ ಒಳಗಡೆ ರಕ್ತ ಸೋರುವಿಕೆಯಿಂದಾಗಿ ತಕ್ಷಣವೇ ದೃಷ್ಟಿ ಕಾಣದಾಗಬಹುದು. ಬ್ರೇನ್‌ನಲ್ಲಿ ಮೈಕ್ರೊ ಹೆಮರೇಜ್‌ನಿಂದಾಗಿ ಒಂದು ವಸ್ತು ಎರಡೆರಡಾಗಿ ಕಾಣಬಹುದು. ಆದ್ದರಿಂದ ಬಿ.ಪಿ. ಮತ್ತು ಸಕ್ಕರೆ ಖಾಯಿಲೆ ಇರುವವರು ತಪ್ಪದೇ 6 ತಿಂಗಳಿಗೊಮ್ಮೆ ನೇತ್ರ ತಜ್ಞರಿಗೆ ತೋರಿಸಬೇಕು ಹಾಗು ಬಿ.ಪಿ ಮತ್ತು ಸಕ್ಕರೆ ಖಾಯಿಲೆಗಳು ನಿಯಂತ್ರಣದಲ್ಲಿ ಇಟ್ಟುಕೊಳ್ಳಬೇಕು.

## ಕಣ್ಣಿನ ಸೋಂಕು

ಕಣ್ಣಿನ ಸೋಂಕಿಗೆ ಮದ್ರಾಸ್ ಐ ಅಥವಾ ಕಂಜಕ್ಟಿವೈಟಿಸ್ ಅಂತ ಹೇಳುತ್ತಾರೆ. ಇದು ಬಂದಾಗ ಕಣ್ಣುಗಳು ತುಂಬಾ ಕೆಂಪಾಗುತ್ತದೆ, ನೀರು ಸೋರುತ್ತದೆ, ಹಳದಿ ಬಣ್ಣದ ಗೀಜು ಬರುತ್ತದೆ, ಬೆಳಗ್ಗೆ ಎದ್ದಾಗ ಕಣ್ಣಿನ ರೆಪ್ಪೆಗಳು



ಒಂದಕ್ಕೊಂದು ಅಂಟಿಕೊಂಡು ತೆಗೆಯಲು ಕಷ್ಟವಾಗುತ್ತದೆ. ಆಗ ಉಗುರು ಬೆಚ್ಚಗಿನ ನೀರಿನಿಂದ ಕಣ್ಣುಗಳನ್ನು ತೊಳೆದುಕೊಳ್ಳಬೇಕು. ಕಣ್ಣಿಗೆ ಡ್ರಾಪ್ಸ್ ಕೊಡ್ತಾರೆ, ಅದನ್ನು ಸರಿಯಾಗಿ ಉಪಯೋಗಿಸಬೇಕು. ರಾತ್ರಿ ಮಲಗುವಾಗ ಮುಲಾಮನ್ನು ಹಾಕಿಕೊಳ್ಳಬೇಕು, ಅದನ್ನು ಸರಿಯಾಗಿ ಉಪಯೋಗಿಸಬೇಕು. ಸೋಂಕಿರುವ ಕಣ್ಣನ್ನು ಪದೇ ಪದೇ ಮುಟ್ಟಬಾರದು. ಮುಟ್ಟಿದರೆ ಕೈಯನ್ನು ತಕ್ಷಣ ಸೋಪು ಮತ್ತು ನೀರಿನಿಂದ ತೊಳೆದುಕೊಳ್ಳಬೇಕು. ಕನ್ನಡಕವನ್ನು ಧರಿಸಬೇಕು. ಸೊಂಕಿರುವ ವ್ಯಕ್ತಿಯು ಪ್ರತ್ಯೇಕವಾದ ಸೋಪು, ಟವಲ್, ಕರವಸ್ತ್ರ, ಇಟ್ಟುಕೊಳ್ಳಬೇಕು. ಇದರಿಂದ ಇತರರಿಗೆ ಸೋಂಕು ಹರಡುವುದನ್ನು ತಪ್ಪಿಸಬಹುದು.

## ತಲೆನೋವು

ಸಾಮಾನ್ಯವಾಗಿ ತಲೆನೋವು ಪದೇಪದೇ ಬರುತ್ತಿದ್ದರೆ, ಇದು ದೃಷ್ಟಿ ದೋಷದಿಂದಲೂ ಬಂದಿರಬಹುದು ಅಥವಾ ಮೈಗ್ರೇನ್ ಕೂಡ ಆಗಿರಬಹುದು, ಒತ್ತಡದಿಂದ ಅಥವಾ ಮೆದುಳಿನಲ್ಲಿನ ತೊಂದರೆಯಿಂದಲೂ ತಲೆನೋವು ಬಂದಿರಬಹುದು. ಮೊದಲಿಗೆ ಕಣ್ಣಿನ ವೈದ್ಯರ ಹತ್ತಿರ ತೋರಿಸಿ, ತಲೆನೋವು ಕಣ್ಣಿನ ಸಮಸ್ಯೆಯಿಂದ ಬರುತ್ತಿಲ್ಲ ಅಂದ ಮೇಲೆ ಬೇರೆ ತಜ್ಞ ವೈದ್ಯರಿಗೆ ತೋರಿಸಬೇಕಾಗುತ್ತದೆ. ಆಗ ಸಿ.ಟಿ. ಅಥವಾ ಎಂ.ಆರ್.ಐ. ಬ್ರೇನ್ ಸ್ಕ್ಯಾನ್ ಮಾಡಿಸಬೇಕು. ದೃಷ್ಟಿ ದೋಷದಿಂದ ತಲೆನೋವು ಬರುತ್ತಿದ್ದರೆ ಸೂಕ್ತ ಕನ್ನಡಕವನ್ನು ಧರಿಸಿದರೆ ತಲೆನೋವು ಕಡಿಮೆಯಾಗುತ್ತದೆ.

## ಮಕ್ಕಳಲ್ಲಿ ಕಣ್ಣಿನ ಆರೋಗ್ಯ

'ಇಂದಿನ ಮಕ್ಕಳೇ ನಾಳಿನ ಪ್ರಜೆಗಳು' ಆದುದರಿಂದ ಅವರ ಆರೋಗ್ಯ ಎಲ್ಲಾ ರೀತಿಯಿಂದಲೂ ಸರಿಯಿರುವ ರೀತಿ ನೋಡಿಕೊಳ್ಳೋದು ಎಲ್ಲಾ ಪೋಷಕರ ಆದ್ಯ ಕರ್ತವ್ಯ ಅದರಲ್ಲೂ ಕಣ್ಣಿನ ಆರೋಗ್ಯದ ಬಗ್ಗೆ ಗಮನ ಹರಿಸಬೇಕಾದ್ದು ಇನ್ನು ಮುಖ್ಯ, ಏಕೆಂದರೆ ದೃಷ್ಟಿ ಸರಿಯಿಲ್ಲದಿದ್ದರೆ ಬದುಕೇ ಅಂಧಕಾರವಾಗುತ್ತದೆ.'ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ' ಅನ್ನೋ ಮಾತು ದೃಷ್ಟಿಯ ವಿಷಯದಲ್ಲಿ ಬಹಳವಾಗಿ ಅನ್ವಯಿಸುತ್ತದೆ. ಏಕೆಂದರೆ ಸಣ್ಣ ಮಕ್ಕಳಲ್ಲಿ ದೃಷ್ಟಿ ದೋಷವಿದ್ದು ಅದನ್ನು ಆಗಲೇ ಸರಿಪಡಿಸದಿದ್ದರೆ ಮುಂದೆ ಮಗು ದೊಡ್ಡದಾದ ಮೇಲೆ ಅದನ್ನು ಸರಿಪಡಿಸೋದು ಕಷ್ಟವಾಗುತ್ತದೆ. ಉದಾಹರಣೆಗೆ,

- **ಮಗು ಹುಟ್ಟಿದಾಗಿನಿಂದ 3 ತಿಂಗಳಲ್ಲಿ ತಾಯಿಯನ್ನು ಗುರುತಿಸಿ ನಗದಿದ್ದರೆ, ಬೆಳಕನ್ನು ತೋರಿಸಿದಾಗ ಅದನ್ನು ಅನುಸರಿಸದಿದ್ದರೇ, ಕಣ್ಣಿನ ಪಾಪೆಯಲ್ಲಿ ಏನಾದರೂ ಬೆಳ್ಳಗೆ ಕಾಣುತ್ತಿದ್ದರೆ ತಕ್ಷಣವೇ ಕಣ್ಣಿನ ತಜ್ಞವೈದ್ಯರಲ್ಲಿ ತೋರಿಸಬೇಕು.**
- **ಸುಮಾರು 3 ವರ್ಷವಾದಾಗ ಸ್ಕೂಲ್‌ಗೆ ಕಳಿಸೊ ಮೊದಲು ಕಣ್ಣಿನ ತಜ್ಞವೈದ್ಯರಲ್ಲಿ ತೋರಿಸಬೇಕು. ಪೋಷಕರು ಮಗು ಏನಾದರೂ ವಾರೆಗಣ್ಣಿನಿಂದ ನೋಡುತ್ತಿದೆಯಾ, ಮೆಳ್ಳಗಣ್ಣಿದೆಯಾ, ಟಿವಿಯನ್ನು ಎಷ್ಟು ದೂರದಿಂದ ನೋಡುತ್ತದೆ. ಟಿವಿಯಿಂದ ಎಷ್ಟು ದೂರ ಕೂಡಿಸಿದರೂ ಪುನ: ಟಿವಿಯನ್ನು ಹತ್ತಿರದಿಂದ ನೋಡುತ್ತಿದೆಯಾ ಎಂದುದನ್ನು ಗಮನಿಸಬೇಕು.**
- **ಮಗು ಇನ್ನು ದೊಡ್ಡದಾದಾಗ, ಪುಸ್ತಕವನ್ನು ತುಂಬಾ ಹತ್ತಿರ ಇಟ್ಕೊಂಡು ಓದುತ್ತಿದ್ದರೆ, ತುಂಬಾ ಕಣ್ಣು ಉಜ್ಜುತ್ತಿದ್ದರೆ, ನೀರು ಬರುತ್ತಿದ್ದರೆ, ರೆಪ್ಪೆ ಮೇಲೆ ಗುಳ್ಳೆ ಬರುವುದು, ಬೆಳ್ಳಗಿನ ಹೊಟ್ಟು ಬರುವುದು, ತಂದೆ ತಾಯಿ ಇಬ್ಬರೂ ತುಂಬಾ ಪವರ್ ಇರುವ ಕನ್ನಡಕ ಹಾಕಿಕೊಳ್ತಾ ಇದ್ದರೆ ಕಣ್ಣಿನ ತಜ್ಞವೈದ್ಯರಲ್ಲಿ ತೋರಿಸಲೇಬೇಕು**
- **ಅವಧಿಪೂರ್ವ ಮಗು ಹುಟ್ಟಿದ್ರೆ – ಅಂದ್ರೆ ಏಳು ತಿಂಗಳಿಗೆ ಮಗು ಹುಟ್ಟಿದ್ರೆ ಕಣ್ಣಿನ ತಜ್ಞವೈದ್ಯರಲ್ಲಿ ತೋರಿಸಿ ಕಾಲ ಕಾಲಕ್ಕೆ ಪರೀಕ್ಷೆ ಮಾಡಿಸಿಕೊಳ್ಳಬೇಕು.**

ಕಣ್ಣುಗಳು ಅತ್ಯಮೂಲ್ಯವಾದವು, ಅದನ್ನು ಸಂರಕ್ಷಿಸಬೇಕು. ಕಣ್ಣುಗಳನ್ನು ಕಾಪಾಡಿ ವ್ಯಕ್ತಿ ಮರಣ ಹೊಂದಿದ ನಂತರ ಅವುಗಳನ್ನು ದಾನಮಾಡಬಹುದು. ಕಣ್ಣುಗಳನ್ನು ವ್ಯಕ್ತಿ ಮರಣ ಹೊಂದಿದ 6 ಗಂಟೆಗಳೊಳಗಾಗಿ ಶಸ್ತ್ರ ಚಿಕಿತ್ಸಾ ಕ್ರಮದಿಂದ ತೆಗೆದು ಕಣ್ಣಿಲ್ಲದವರಿಗೆ ದೃಷ್ಟಿ ದಾನ ಮಾಡಬಹುದು. ಇದಕ್ಕಾಗಿ ಹತ್ತಿರದ ಕಣ್ಣಾಸ್ಪತ್ರೆಯಲ್ಲಾದರೂ ನೊಂದಣಿ(ರಿಜಿಸ್ಟರ್) ಮಾಡಿಸಬಹುದು ಅಥವಾ ಅವರ ಬಂದುಗಳಿಗೇನಾದರೂ ತಮ್ಮ ಇಚ್ಛೆಯನ್ನು ತಿಳಿಸಿದ್ರೆ ಅವರು ತಕ್ಷಣ ಕಣ್ಣಿನ ವೈದ್ಯರಿಗೆ ದೂರವಾಣಿ ಮೂಲಕ ತಿಳಿಸಿದರೂ ಅವರು ಬಂದು ಕಣ್ಣುಗಳನ್ನು ತೆಗೆದುಕೊಳ್ಳುತ್ತಾರೆ. ವೈದ್ಯರು ಬರುವವರೆಗೂ ಮರಣಹೊಂದಿದ ವ್ಯಕ್ತಿಯ ಕಣ್ಣುರೆಪ್ಪೆಗಳನ್ನು ಮುಚ್ಚಿ ಅದರ ಮೇಲೆ ತಣ್ಣೀರಿನಿಂದ ಒದ್ದೆ ಮಾಡಿದ ಹತ್ತಿಯನ್ನು ಇಡುವುದು.'ನೇತ್ರದಾನ ಮಹಾದಾನ' ಒಂದು ಜೋಡಿ ಕಣ್ಣಿನಿಂದ ಇಬ್ಬರಿಗೆ ದೃಷ್ಟಿ ನೀಡಿದಂತಾಗುತ್ತದೆ. ಆದುದರಿಂದ ಈ ಬಗ್ಗೆ ನಮ್ಮ ಗ್ರಾಮೀಣ ಜನರು ಸಹ ಜಾಗ್ರತರಾಗಬೇಕು. ■

Statement of ownership particulars about

# "KARNATAKA VIKAS"

FORM IV (See Rule 5)

| | | | |
|---|---|---|---|
| 1. | Place of Publication | : | Rural Development and Panchayath Raj Department, Bangalore – 560001. |
| 2. | Periodicity of Publication | : | Monthly |
| 3. | Printer's Name | : | Shanthilal P |
| | Nationality | : | Indian |
| | Address | : | KAVERI PRINTS INDIA<br>No.79, 9th cross, 5th main, T.R.Mill Compound, Chamaraja Pete, Bengaluru-560018 |
| 4. | Publisher's Name | : | M.K.Kempegowda |
| | Nationality | : | Indian |
| | Address | : | Publisher and Director (Panchayath Raj)<br>No.309, 3rd Floor Gate No.1,<br>Multistoreyed Building,<br>Dr.Ambedkar Veedi, Bangalore 560001. |
| 5. | Editor's Name | : | Mubarak Ahmed |
| | Nationality | : | Indian |
| | Address | : | Editor, Karnataka Vikas,<br>No.308, 3rd Floor, Gate No.1,<br>Multistoreyed Building,<br>Dr.Ambedkar Veedi, Bangalore 560001. |
| 6. | Names and addresses of individuals who own the newspaper and partners or shareholders holding more than one percent of the total capital | : | Not Applicable |

I M.K.Kempegowda, hereby declare that the particulars given above are true to the best of my Knowledge and belief.

Bangalore
Date: 01.03.2017

Sd/-
**(M.K.Kempegowda)**
Sigature of the Publisher

## ಕವಿಯ(ಕ್ಷ) ಪ್ರಶ್ನೆ



# ನಾವು ನಮ್ಮ ಪರಿಸರ

ಪ್ರತಿಯೊಂದು ಜೀವಿಯ ದಿನ ನಿತ್ಯದ ಬದುಕಿನಲ್ಲಿ ನೀರು ಬಹಳ ಮುಖ್ಯವಾದುದು, ಸಕಾಲದಲ್ಲಿ ಮಳೆ ಬಾರದೆ ಕುಡಿಯಲು ನೀರು ಸಿಗದೆ ಮನುಷ್ಯ ಸೇರಿದಂತೆ ಪ್ರಾಣಿ ಪಕ್ಷಿಗಳು ಪ್ರಾಣ ಕಳೆದುಕೊಳ್ಳುತ್ತಿವೆ. ದಿನಪತ್ರಿಕೆಗಳಲ್ಲಿ, ಟಿ.ವಿ ಗಳಲ್ಲಿ ನಾನು ನೋಡುತ್ತಲೇ ಇರುವ ಹಾಗೆ ಕಾಡಿನ ಪ್ರಾಣಿಗಳು ನೀರು ಹರಸಿ ನಾಡಿಗೆ ಬರುತ್ತಿರುವುದು, ಇದರಿಂದ ಬೆಳೆ ಹಾನಿ, ಎಷ್ಟೋ ಮಂದಿ ಕಾಡು ಪ್ರಾಣಿಗಳ ಕೋಪಕ್ಕೆ ತುತ್ತಾಗುತ್ತಿರುವುದು, ರಸ್ತೆ ಬದಿಗಳಲ್ಲಿ ಚಲಿಸುವ ವಾಹನಗಳಿಗೆ ತೊಂದರೆ ಕೊಡುತ್ತಿರುವುದನ್ನು ಕಾಣುತ್ತಿದ್ದೇವೆ. ಹಲವಾರು ಕಡೆ ಬಾವಿಗಳಲ್ಲಿ ನೀರು ಇಲ್ಲದೆ ತಳಮಟ್ಟದಲ್ಲಿ ನಿಂತಿರುವ ನೀರನ್ನು ಕುಡಿದು, ಅದರಲ್ಲಿರುವ ವಿಷಜಂತುಗಳು ನಮ್ಮ ದೇಹ ಸೇರಿ ಕಾಯಿಲೆಗಳಿಗೆ ತುತ್ತಾಗುತ್ತಿದ್ದೇವೆ. ಮಕ್ಕಳು ಪೌಷ್ಟಿಕಾಂಶದ ತೊಂದರೆಯಿಂದಾಗಿ ಬೆಳವಣಿಗೆ ಸರಿ ಇಲ್ಲದೇ ಕುಬ್ಜತೆ ಹಾಗೂ ಬುದ್ಧಮಾಂದ್ಯತೆಯಿಂದ ಬಳಲುತ್ತಿದ್ದಾರೆ. ಇದಕ್ಕೆಲ್ಲಾ ಕಾರಣ ನಮ್ಮ ಪರಿಸರ ನಮಗೆ ನೀಡಿರುವ ನೈಸರ್ಗಿಕ ಸಂಪನ್ಮೂಲವನ್ನು ಸರಿಯಾಗಿ ಬಳಸದೇ ಇರುವುದು. ಇದು ಈಗಿನ ಪೀಳಿಗೆಯವರಿಗೆ ಅಲ್ಪ ಮಟ್ಟದ ತೊಂದರೆಯಾದರೆ, ಮುಂದಿನ ನಮ್ಮ ಪೀಳಿಗೆಯವರಿಗೆ ದೊಡ್ಡಮಟ್ಟದ ಭರಿಸಲಾರದ ಮಟ್ಟದಲ್ಲಿ ತೊಂದರೆಗಳನ್ನು ಅನುಭವಿಸುವಂತಾಗಬಹುದು.

### ಕೆಲವು ಪ್ರಶ್ನೆಗಳು ?

1. ನೈಸರ್ಗಿಕವಾಗಿ ನಮಗೆ ದೊರೆತಿರುವ ಸಂಪನ್ಮೂಲವನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳುವುದು ನಮ್ಮ ಕರ್ತವ್ಯವಲ್ಲವೇ?
2. ನೀರನ್ನು ಮಿತವಾಗಿ ಬಳಸಿ ಉಳಿಸುವುದು ಸರಿಯಲ್ಲವೇ?
3. ನಮ್ಮ ಮುಂದಿನ ಪೀಳಿಗೆಯವರಿಗೆ ಉತ್ತಮ ಪರಿಸರವನ್ನು ಉಳಿಸಿಕೊಡುವುದು ನಮ್ಮ ಕರ್ತವ್ಯವಲ್ಲವೇ?
4. ನಮ್ಮ ಮಕ್ಕಳಲ್ಲಿ ಈಗಿನಿಂದಲೇ ಜಲ ಸಂಪನ್ಮೂಲವನ್ನು ಉಳಿಸುವ ಬಗ್ಗೆ ಜಾಗೃತಿ ಮೂಡಿಸಿದಲ್ಲಿ ಅವರು ಮುದೊಂದು ದಿನ ದೇಶದ ಆಸ್ತಿಯಾಗುವುದಲ್ಲಿ ಸಂದೇಹವಿಲ್ಲ ಅಲವೇ?
5. ದುಡ್ಡಿನಿಂದ ಚಿನ್ನ, ಬೆಳ್ಳಿ ಖರೀದಿಸಬಹುದು ಆದರೆ ಉತ್ತಮ ಆರೋಗ್ಯ, ಒಳ್ಳೆಯ ಗಾಳಿ, ನೀರು, ಆಹಾರ ಸಿಕ್ಕಿತೇ?

**ಶ್ರೀಮತಿ ಕಮಲಾ ಸಿ.ಎನ್**
ಕೆನರಾ ಬ್ಯಾಂಕ್ (ಕೆಹೆಚ್‌ಬಿ), 3ನೇ ಮಹಡಿ,
ಕಾವೇರಿ ಭವನ, ಬೆಂಗಳೂರು 560009.

ಕಾವ್ಯ ವಿಕಾಸ

# ಡಂಗುರ



ಕಟ್ಟಿರೋ  ಕಟ್ಟಿರೋ ಶೌಚಾಲಯ ಕಟ್ಟಿರೋ
ಮನದ ಭಾವ  ದೂರವಿಟ್ಟು ಕಟ್ಟಿರೋ
ಮನೆಗೊಂದು ಶೌಚಾಲಯ ಕಟ್ಟಿರೋ
ಮನಕ್ಕೊಂದು ನೆಮ್ಮದಿ ಆಲಯ ಕಟ್ಟಿರೋ

ಬೆಟ್ಟ, ದಾರಿ ಹೋಗದಿರಿ ದೂರ
ಮುಕ್ತ ಮಾಡಿ ಬಯಲು ಶೌಚಾಲಯ ಪೂರಾ
ನೀಡಿ ಸಹಕಾರ ಜೊತೆಯಾಗಿ ಅಪಾರ
ಗ್ರಾಮ ಪಂಚಾಯತಿ ನಿಮಗಾಗಿ ಮಾಡುವ ಉಪಕಾರ
ಕಟ್ಟಿರೋ  ಕಟ್ಟಿರೋ ಶೌಚಾಲಯ ಕಟ್ಟರೋ

ಮಾನಿನಿಯರ ಗೌರವ ಅಪಾರ
ಕಾಪಾಡಿ ದೂರ ಮಾಡಿ ಬಯಲು ಶೌಚ ಪೂರ
ಊರ ಹಿಂದೆ ಮುಂದೆ ಆಗಲಿ ಸ್ವಚ್ಛ ಪುರ
ನೀಡಿ ಎಲ್ಲರೂ ಮನದ ಸಹಕಾರ
ಕಟ್ಟಿರೋ  ಕಟ್ಟಿರೋ ಶೌಚಾಲಯ ಕಟ್ಟರೋ

ಮಾಡೋಣ ಜಾಗೃತಿ ಗ್ರಾಮ ಪೂರಾ
ನಡೆಸೋಣ ಆಂದೋಲನ ಅಪಾರ
ದೂರ ಮಾಡೋಣ ಬಯಲು ಶೌಚದ ಕಾರುಬಾರ
ಅರ್ಥಮಾಡಿಕೊಳ್ಳೋಣ ಸರಳ ಸಿದ್ಧಾಂತದ ಅರ್ಥ ಅಪಾರ
ಕಟ್ಟಿರೋ  ಕಟ್ಟಿರೋ ಶೌಚಾಲಯ ಕಟ್ಟರೋ

**ಶ್ರೀಕಾಂತ. ಹಾ. ಬಾಲೆಹೊಸೂರು**
ದ್ವಿ.ದ.ಲೆ.ಸ  ಜಿಲ್ಲಾ ಪಂಚಾಯತಿ ಬಳ್ಳಾರಿ

ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ:01:ಗ್ರಾವಿಯೋ:2017

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 01.02.2017

## ಸುತ್ತೋಲೆ

**ವಿಷಯ :** ಗ್ರಾಮ ವಿಕಾಸ ಯೋಜನೆಯಡಿಯಲ್ಲಿ ಅನುಷ್ಠಾನಗೊಳಿಸಲು ಪಂಚಾಯತ್ ರಾಜ್ ಇಲಾಖೆಗೆ ವಹಿಸಿರುವ ಕಾಮಗಾರಿಗಳಿಗೆ ಅನುದಾನವನ್ನು ನೇರವಾಗಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರಿಗೆ ಬಿಡುಗಡೆಗೊಳಿಸುವ ಬಗ್ಗೆ.

**ಉಲ್ಲೇಖ :** ಮುಖ್ಯ ಇಂಜಿನಿಯರ್, ಪಂ ರಾಜ್ ಇಂಜಿನಿಯರಿಂಗ್ ಇಲಾಖೆ ಇವರ ಪತ್ರ ಸಂಖ್ಯೆ:ಮುಇಂ/ಪಂರಾಇಂಇ/ಕಾಇಂ–2ತಾಂಸ–4/ಸ, ಇಂ–5/2016–17, ದಿ: 13.01.2017

***

ಗ್ರಾಮ ವಿಕಾಸ ಯೋಜನೆಯಡಿ ಸಿವಿಲ್ ಕಾಮಗಾರಿಗಳನ್ನು ಅನುಷ್ಠಾನಕ್ಕೆ ತರಲು ಗ್ರಾಮ ಪಂಚಾಯತಿಯು ಪಂಚಾಯತ್ ರಾಜ್ ಇಂಜಿನಿಯರಿಂಗ್ ಸಂಸ್ಥೆ ಅಥವಾ ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ಆಯ್ಕೆ ಮಾಡಿಕೊಳ್ಳಲು ಅವಕಾಶವನ್ನು ಕಲ್ಪಿಸಿದೆ.

ಗ್ರಾಮ ಪಂಚಾಯತಿಗಳು ಗ್ರಾಮ ವಿಕಾಸ ಯೋಜನೆಯಡಿ ಕಾಮಗಾರಿಗಳನ್ನು ಅನುಷ್ಠಾನಕ್ಕೆ ತರಲು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳಿಗೆ ವಹಿಸಿದ ಸಂದರ್ಭದಲ್ಲಿ ಟೆಂಡರ್‌ಗಳನ್ನು ಕರೆದು ಗುತ್ತಿಗೆದಾರರೊಂದಿಗೆ ನಿಯಮಾನುಸಾರ ಟೆಂಡರ್ ಕರಾರುಗಳನ್ನು ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರು ಮಾಡಿಕೊಳ್ಳುವುದರಿಂದ ಮತ್ತು ಕಾಮಗಾರಿಗಳನ್ನು ನಿಗಧಿತ ಸಮಯದಲ್ಲಿ ಪೂರ್ಣಗೊಳಿಸುವ ಸಂಪೂರ್ಣ ಜವಾಬ್ದಾರಿ ಹೊಂದಿರುತ್ತವೆ.

ಸರ್ಕಾರವು ಗ್ರಾಮ ವಿಕಾಸ ಯೋಜನೆಯ ಅನುದಾನವನ್ನು ಜಿಲ್ಲಾ ಪಂಚಾಯತ್‌ಗಳ ಮೂಲಕ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಿದ ಕೂಡಲೇ ಗ್ರಾಮ ಪಂಚಾಯಿತಿಗಳು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳಿಗೆ ಗ್ರಾಮ ವಿಕಾಸ ಯೋಜನೆಯ ಕಾಮಗಾರಿಗಳನ್ನು ಅನುಷ್ಠಾನ ಮಾಡಲು ಅನುದಾನವನ್ನು ಚೆಕ್ ಮೂಲಕ ಅಥವಾ ಆರ್.ಟಿ.ಜಿ.ಎಸ್. ಮೂಲಕ ಆಯಾ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಕಾರ್ಯಪಾಲಕ ಅಭಿಯಂತರರ ಬ್ಯಾಂಕ್ ಖಾತೆಗೆ ಬಿಡುಗಡೆ ಮಾಡಲು ಕ್ರಮ ವಹಿಸಲು ಸಂಬಂಧಪಟ್ಟ ಪಂಚಾಯಿತಿಗೆ ಸೂಚಿಸುವುದು.

**(ಡಾ.ಬೂವನಹಳ್ಳಿ ನಾಗರಾಜ್)**
ನಿರ್ದೇಶಕರು (ಸುಗ್ರಾಯೋ) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ ಮತ್ತು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
ದೂರವಾಣಿ & ಫ್ಯಾಕ್ಸ್ : 080–22372992

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ರಾಜ್ಯದ 189 ಗ್ರಾಮೀಣ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಗಾಂಧಿಪಥ ಗ್ರಾಮಪಥ (ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಹಂತ–4) ರಡಿ 4385.71 ಕಿ.ಮೀ. ಉದ್ದದ ರಸ್ತೆಗಳನ್ನು ರೂ.3982.50 ಕೋಟಿಗಳಲ್ಲಿ ಅನುಷ್ಠಾನಕ್ಕೆ ತರಲು ಅಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

**ಓದಲಾಗಿದೆ** :
1. ದಿನಾಂಕ 28.09.2016 ರ ಸಚಿವ ಸಂಪುಟದ ನಿರ್ಣಯ ಪ್ರಕರಣ ಸಂಖ್ಯೆ:ಸಿ–479/2016.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:44: ಆರ್‌ಆರ್‌ಸಿ:2016, ದಿ:13–10–2016.
3. ದಿನಾಂಕ 15.02.2017 ರ ಸಚಿವ ಸಂಪುಟದ ನಿರ್ಣಯ ಪ್ರಕರಣ ಸಂಖ್ಯೆ:ಸಿ–95/2017.
4. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:44: ಆರ್‌ಆರ್‌ಸಿ:2016, ದಿ:20–02–2017.
5. ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು, ಬೆಂಗಳೂರು ಇವರ ಪತ್ರ ಸಂಖ್ಯೆ: ಕೆಆರ್‌ಆರ್‌ಡಿಎ/ತಾಂತ್ರಿಕ–10 /NGNRY-IV/2016–17/5073 ದಿನಾಂಕ 20.02.2017.

## ಪ್ರಸ್ತಾವನೆ:

2016–17ನೇ ಸಾಲಿನಲ್ಲಿ ಗಾಂಧಿಪಥ ಗ್ರಾಮಪಥ (ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಹಂತ–4) ರಲ್ಲಿ ಪ್ರತಿ ಗ್ರಾಮೀಣ ವಿಧಾನಸಭಾ ಕ್ಷೇತ್ರದಲ್ಲಿ ತಲಾ 20 ಕಿ.ಮೀ.ನಂತೆ ಅಭಿವೃದ್ಧಿಪಡಿಸಲು ಆಯವ್ಯಯದಲ್ಲಿ ಘೋಷಿಸಿದಂತೆ ಗಾಂಧಿಪಥ–ಗ್ರಾಮಪಥ (ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಹಂತ–4) ಯೋಜನೆಯನ್ನು ಒಟ್ಟು 4385.71 ಕಿ.ಮೀ. ಉದ್ದದ ರಸ್ತೆಗಳನ್ನು ಅಂದಾಜು ಮೊತ್ತ ರೂ.3982.50 ಕೋಟಿಗಳ ಮೊತ್ತದಲ್ಲಿ ಅನುಷ್ಠಾಗೊಳಿಸಲು ಮೇಲೆ ಓದಲಾದ 4 ರಲ್ಲಿ ಅನುಮೋದನೆ ನೀಡಲಾಗಿದೆ.

ಪ್ರಸ್ತುತ ಗಾಂಧಿಪಥ–ಗ್ರಾಮಪಥ (ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಹಂತ–4) ರ ವಿಸ್ತೃತ ಯೋಜನಾ ವರದಿಯನ್ನು (ಡಿ.ಪಿ.ಆರ್) 2016–17 ನೇ ಸಾಲಿನ ಒಟ್ಟು 8 ಪಂಚಾಯತ್ ರಾಜ್ ವೃತ್ತಗಳು ಪ್ರಕಟಿಸಿದ ದರಸೂಚಿಯಂತೆ (ಎಸ್.ಆರ್) ತಯಾರಿಸಲಾಗಿ, ಸದರಿ ಡಿ.ಪಿ.ಆರ್.ಗಳನ್ನು ರಾಜ್ಯ ತಾಂತ್ರಿಕ ಸಂಸ್ಥೆ (State Technical Agency) ರವರ ತಾಂತ್ರಿಕ ಪರಿಶೀಲನೆಗೊಳಪಡಿಸಿ, ರಾಜ್ಯದ ಒಟ್ಟು 1602 ಸಂಖ್ಯೆಗಳ ರಸ್ತೆ ಕಾಮಗಾರಿಗಳ ಉದ್ದ 4385.71 ಕಿ.ಮೀ. ಹಾಗೂ 112 ಸೇತುವೆಗಳು (Long Span Bridges) ಸೇರಿ ಈಗಾಗಲೇ ಅನುಮೋದಿತ ಅಂದಾಜು ಮೊತ್ತ ರೂ.3982.50 ಕೋಟಿಗಳಲ್ಲಿ ಅಭಿವೃದ್ಧಿಪಡಿಸಲು ಹಾಗೂ ಕೆ.ಟಿ.ಪಿ.ಪಿ. ಕಾಯ್ದೆಯಡಿ ಅಲ್ಪಾವಧಿ ಟೆಂಡರ್ ಕರೆದು ಕಾಮಗಾರಿಗಳನ್ನು ಕೈಗೊಳ್ಳಲು ಹಾಗೂ ಡಿ.ಪಿ.ಆರ್.ಗಳನ್ವಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ತೀರ್ಮಾನಿಸಿರುತ್ತದೆ.

ಆದ್ದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:44:ಆರ್‌ಆರ್‌ಸಿ:2016, ಬೆಂಗಳೂರು, ದಿನಾಂಕ: 21.02.2017.**

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಗಾಂಧಿಪಥ–ಗ್ರಾಮಪಥ (ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಹಂತ–4) ಯೋಜನೆಯಲ್ಲಿ ಒಟ್ಟು 4385.71 ಕಿ.ಮೀ. ಉದ್ದದ 1602 ರಸ್ತೆ ಕಾಮಗಾರಿಗಳನ್ನು ಹಾಗೂ 112 ಸೇತುವೆಗಳು (Long Span Bridges) ಸೇರಿ ಅಂದಾಜು ಮೊತ್ತ ರೂ.3982.50 ಕೋಟಿಗಳ ಅಂದಾಜು ಮೊತ್ತದಲ್ಲಿ ಅಭಿವೃದ್ಧಿಪಡಿಸಲು ಹಾಗೂ ಕೆ.ಟಿ.ಪಿ.ಪಿ.ಕಾಯ್ದೆಯಡಿ ಅಲ್ಪಾವಧಿ ಟೆಂಡರ್ ಕರೆದು ಕರ್ನಾಟಕ ಗ್ರಾಮೀಣ ರಸ್ತೆ ಅಭೀವೃದ್ಧಿ ಸಂಸ್ಥೆ ಮುಖಾಂತರ ಅನುಬಂಧದಲ್ಲಿರುವಂತೆ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಷ್ಠಾನಗೊಳಿಸಲು ರಸ್ತೆ ಹಾಗೂ ಸೇತುವೆ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಲು ಸರ್ಕಾರವು ಹರ್ಷಿಸುತ್ತದೆ.

**ಷರತ್ತುಗಳು:**

1. ಗಾಂಧಿಪಥ–ಗ್ರಾಮಪಥ (ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಹಂತ–4) ಯೋಜನೆಗೆ 4385.71 ಕಿ.ಮೀ. ಉದ್ದದ ರಸ್ತೆ ಅಭಿವೃದ್ಧಿಗೆ ರೂ.3982.50 ಕೋಟಿಗಳಲ್ಲಿ ಅಭಿವೃದ್ಧಿಪಡಿಸುವುದು.

2. ಗಾಂಧಿಪಥ–ಗ್ರಾಮಪಥ (ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಹಂತ–4) ಯೋಜನೆಯಡಿ ಆಯ್ಕೆ ಮಾಡುವ ರಸ್ತೆಗಳನ್ನು ಮತ್ತು ಡಿ.ಪಿ.ಆರ್.ಗಳನ್ನು ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ–2 ರ ಮಾನದಂಡಗಳನ್ನು ಅನುಸರಿಸಿಯೇ ಮಾಡತಕ್ಕದ್ದು.

3. ಗಾಂಧಿಪಥ–ಗ್ರಾಮಪಥ ಯೋಜನೆಯ ರಸ್ತೆಗಳ ಡಿಪಿಆರ್ ಗಳನ್ನು ತಯಾರಿಸುವಾಗ, ನಿರ್ಮಾಣ ಮಾಡುವಾಗ 5 ವರ್ಷಗಳ ನಿರ್ವಹಣೆಯೂ ಒಳಗೊಂಡಂತೆ, ನಂತರ ಒಂದು ಸಲ ಮರುಡಾಂಬರೀಕರಣ (Renewals) ಮಾಡುವಾಗಲೂ ಸಹಿತ ಪಿ.ಎಂ.ಜಿ.ಎಸ್.ವೈ.–ಋಋ ರ ನಿಯಮಗಳನ್ನು (Norms) ಕಡ್ಡಾಯವಾಗಿ ಪಾಲಿಸುವುದು.

